ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 19 ಸೋಮವಾರ 2022

ಸಂಪುಟ: 43 | ಸಂಚಿಕೆ: 242 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಅರ್ಜೆಂಟೀನಾಗೆ ಫಿಫಾ ವಿಶ್ವಕಪ್

●ನಾಯಕ ಲಿಯೊನೆಲ್ ಮೆಸ್ಸಿ ಕನಸು ನನಸು ●ಸತತ 2ನೇ ಬಾರಿಗೆ ಟ್ರೋಫಿ ಗೆಲ್ಲುವ ಫ್ರಾನ್ಸ್ ಕನಸು ಭಗ್ನ



ಫಿಫಾ ವಿಶ್ವಕಪ್ ಫುಟ್‌ಬಾಲ್ ಗೆಲುವಿನ ಸಂಭ್ರಮಾಚರಣೆಯಲ್ಲಿ ನಾಯಕ ಮೆಸ್ಸಿ ನೇತೃತ್ವದ ಅರ್ಜೆಂಟಿನಾ ತಂಡ.

ದೋಹಾ, ಡಿ.18– ಕತಾರ್‌ನಲ್ಲಿ ನಡೆದ 22ನೇ ಆವೃತ್ತಿಯ ಫಿಫಾ ವಿಶ್ವಕಪ್ ಫುಟ್‌ಬಾಲ್ ಚಾಂಪಿಯನ್ ಆಗಿ ಲಿಯೊನೆಲ್ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ಹೊರಹೊಮ್ಮಿದ್ದು, ಆ ಮೂಲಕ 36 ವರ್ಷಗಳ ಬಳಿಕ 3ನೇ ವಿಶ್ವಕಪ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ. ಮತ್ತೊಂದೆಡೆ ಸತತ 2ನೇ ಬಾರಿಗೆ ಟ್ರೋಫಿ ಗೆಲ್ಲುವ ಫ್ರಾನ್ಸ್ ಕನಸು ಭಗ್ನಗೊಂಡಿತು. ಇದರೊಂದಿಗೆ ಅರಬ್ ನಾಡಲ್ಲಿ ಕಳೆದೊಂದು ತಿಂಗಳಿಂದ ವಿಶ್ವದ ಕ್ರೀಡಾಭಿಮಾನಿಗಳಿಗೆ ಭರಪೂರ ಮನರಂಜನೆ ನೀಡಿದ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ತೆರೆ ಬಿದ್ದಿದೆ.

ಇಲ್ಲಿನ ಲುಸೇಲ್ ಸ್ಟೇಡಿಯಂನಲ್ಲಿ ಭಾನುವಾರ ನಡೆದ ರಣರೋಚಕ ಫೈನಲ್ ಪಂದ್ಯದಲ್ಲಿ ಪೆನಾಲ್ಟಿ ಶೂಟ್‌ನಲ್ಲಿ ಬಲಿಷ್ಠ ಫ್ರಾನ್ಸ್ ತಂಡವನ್ನು 4–2 ಅಂತರದ ಗೋಲುಗಳಿಂದ ಮಣಿಸಿದ ಅರ್ಜೆಂಟಿನಾ ಚಾಂಪಿಯನ್ ಆಗಿ ಹೊರಹೊಮ್ಮುವ ಮೂಲಕ ಕೊನೆ ವಿಶ್ವಕಪ್ ಪಂದ್ಯವಾಡಿದ ಮೆಸ್ಸಿಗೆ ಗೆಲುವಿನ ಉಡುಗೊರೆ ನೀಡಿತು.



ಅಲ್ಲದೇ (42 ಮಿಲಿಯನ್) 347 ಕೋಟಿ ರೂ.ಗಳ ಭಾರೀ ಬಹುಮಾನ ಹಾಗೂ ವಿಶ್ವಕಪ್ ಟ್ರೋಫಿ ಪಡೆಯಿತು. ಮತ್ತೊಂದೆಡೆ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟ ಫ್ರಾನ್ಸ್ (30 ಮಿಲಿಯನ್) 248 ಕೋಟಿ ರೂ.ಗಳನ್ನು ತನ್ನದಾಗಿಸಿಕೊಂಡಿತು. ಇನ್ನು 6ನೇ ಫೈನಲ್ ಪಂದ್ಯವಾಡಿದ ಅರ್ಜೆಂಟೀನಾ 1978, 1986ರಲ್ಲಿ ಚಾಂಪಿಯನ್ ಆಗಿದ್ದರೆ, 1930, 1990 ಹಾಗೂ 2014ರಲ್ಲಿ ರನ್ನರ್–ಅಪ್ ಆಗಿತ್ತು. ಇದೀಗ ಮತ್ತೊಮ್ಮೆ ಟ್ರೋಫಿಯನ್ನು ಎತ್ತಿ ಹಿಡಿದಿದೆ. ಮೊದಲ ಅವಧಿ ಆಟದಲ್ಲಿ ಅರ್ಜೆಂಟೀನಾ 2 ಗೋಲು ಬಾರಿಸಿದರೆ, ಪಂದ್ಯದ ಕೊನೆ ಹಂತದಲ್ಲಿ ಒಂದೇ ನಿಮಿಷ ಅಂತರದಲ್ಲಿ ಫ್ರಾನ್ಸ್‌ನ ಕೈಲಿಯನ್ ಎಂಬಾಪೆ 2 ಗೋಲು ಸಿಡಿಸಿ ಫ್ರಾನ್ಸ್ ತಂಡದ ಸಮಬಲಕ್ಕೆ ಕಾರಣರಾಗಿದ್ದರು. ಪಂದ್ಯದ 23ನೇ ನಿಮಿಷದಲ್ಲಿ ಮೆಸ್ಸಿ ಅರ್ಜೆಂಟೀನಾ ಪರ ಗೋಲು ಬಾರಿಸಿದರೆ, ಅದಾದ ಕೆಲವೇ ನಿಮಿಷಗಳಲ್ಲಿ ಏಂಜೆಲ್ ಡಿ ಮಾರಿಯಾ ಗೋಲು ಸಿಡಿಸಿ, ಅರ್ಜೆಂಟೀನಾದ ಸಂಭ್ರಮಕ್ಕೆ ಕಾರಣರಾಗಿದ್ದರು. ಈ ಮುನ್ನಡೆಯನ್ನು ಅರ್ಜೆಂಟೀನಾ ಮೊದಲ ಅವಧಿ ಮುಗಿಯುವವರೆಗೂ ಕಾಯ್ದುಕೊಂಡಿತ್ತು. ▶ 8ನೇ ಪುಟಕ್ಕೆ

ಬಹುಮಾನ ವಿಜೇತರು

ಯಂಗ್ ಪ್ಲೇಯರ್:
ಈ ಫರ್ನಾಂಡೀಸ್(ಅರ್ಜೆಂಟಿನಾ)
ಗೋಲ್ಡನ್ ಗ್ಲೌಸ್: ಎಮಿಲಿಯಾನೋ ಮಾರ್ಟಿನೆಜ್ (ಅರ್ಜೆಂಟಿನಾ)
ಗೋಲ್ಡನ್ ಬೂಟ್: ಕೈಲಿಯನ್ ಎಂಬಾಪೆ (ಫ್ರಾನ್ಸ್)
ಗೋಲ್ಡನ್ ಬಾಲ್: ಲಿಯೊನೆಲ್ ಮೆಸ್ಸಿ

ರೋಚಕ ಪೆನಾಲ್ಟಿ ಶೂಟ್‌ಔಟ್

ಪೆನಾಲ್ಟಿ ಶೂಟ್‌ನಲ್ಲೂ ತಮ್ಮ ಏಕಾಗ್ರತೆ ಕಾಯ್ದುಕೊಂಡ ಎಂಬಾಪೆ ಫ್ರಾನ್ಸ್‌ಗೆ 1–0 ಅಂತರದ ಮುನ್ನಡೆ ಕೊಟ್ಟರು. ಬಳಿಕ ಬಂದ ಮೆಸ್ಸಿ 1–1 ಅಂತರದ ಸಮಬಲ ತಂದರು. ಆದರೆ ಫ್ರಾನ್ಸ್ ಪರ ಎರಡನೇ ಮತ್ತು ಮೂರನೇ ಪ್ರಯತ್ನದಲ್ಲಿ ಕಿಂಗ್‌ಸ್ಲೀ ಕೊಮನ್ ಮತ್ತು ಅರುಲೆನ್ ತೊಮೆನಿ ಚೆಂಡನ್ನು ಗೋಲ್ ಪೆಟ್ಟಿಗೆ ಸೇರಿಸಲು ವಿಫಲವಾದರೆ, ನಾಲ್ಕನೇ ಪ್ರಯತ್ನದಲ್ಲಿ ರಾಂಡಲ್ ಕೊಲೊ ಗಳಿಸಿದ ಗೋಲ್ ಸೋಲಿನ ಅಂತರ ತಗ್ಗಿಸುವುದಕ್ಕಷ್ಟೇ ಸೀಮಿತವಾಯಿತು. ಅರ್ಜೆಂಟೀನಾ ಪರ ಎರಡನೇ, ಮೂರನೇ ಮತ್ತು ನಾಲ್ಕನೇ ಪ್ರಯತ್ನಗಳಲ್ಲಿ ಪಾಲೊ ಡಿಬಾಲ, ಲಿಯನಾರ್ಡೊ ಪರೇಡಸ್ ಮತ್ತು ಗೊನ್ಸಾಲೊ ಮೌಟಿಯೆಲ್ ಗೋಲ್ ಗಳಿಸುವ ಮೂಲಕ ಇತಿಹಾಸದ ಪುಟದಲ್ಲಿ ತಮ್ಮ ಹೆಸರುಗಳನ್ನು ಅಚ್ಚಳಿಯದಂತೆ ಒತ್ತಿಬಿಟ್ಟರು. ಅಂತಿಮವಾಗಿ ಪೆನಾಲ್ಟಿಯಲ್ಲಿ 4–2 ಗೋಲುಗಳಿಂದ ಫ್ರಾನ್ಸ್ ತಂಡವನ್ನು ಸೋಲಿಸಿ, ಅರ್ಜೆಂಟೀನಾ ವಿಶ್ವಕಪ್‌ಗೆ ಮುತ್ತಿಕ್ಕಿತು.

ಭಾರತದ ಸರ್‌ಗಂ 2022ನೇ ಸಾಲಿನ ಮಿಸೆಸ್ ವರ್ಲ್ಡ್



ನವದೆಹಲಿ: ಭಾರತದ ಸರ್‌ಗಂ ಕೌಶಲ್ 2022ನೇ ಸಾಲಿನ ಮಿಸೆಸ್ ವರ್ಲ್ಡ್ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ. 63 ದೇಶಗಳ ಸ್ಪರ್ಧಿಗಳು ಇದರಲ್ಲಿ ಭಾಗವಹಿಸಿದ್ದು, 21 ವರ್ಷಗಳ ▶ 8ನೇ ಪುಟಕ್ಕೆ

ಸುವರ್ಣ ಸೌಧದಲ್ಲಿ ಸಾವರ್ಕರ್ ಫೋಟೋ ಅನಾವರಣಕ್ಕೆ ಸಿದ್ಧತೆ

ಮೊದಲ ದಿನವೇ ಬಿಜೆಪಿ-ಕಾಂಗ್ರೆಸ್ ವಾಗ್ಯುದ್ಧ ಸಾಧ್ಯತೆ



ಬೆಳಗಾವಿ: ನಾಳೆ (ಸೋಮವಾರ)ಯಿಂದ ಬೆಳಗಾವಿಯ ಸುವರ್ಣ ಸೌಧದಲ್ಲಿ ಆರಂಭವಾಗಲಿರುವ ಚಳಿಗಾಲದ ಅಧಿವೇಶನದಲ್ಲಿ ವೀರ ಸಾವರ್ಕರ್ ಸೇರಿದಂತೆ 7 ಮಹನೀಯರ ಫೋಟೋಗಳನ್ನು ಅನಾವರಣ ಮಾಡಲು ಸರ್ಕಾರ ಸಿದ್ಧತೆ ನಡೆಸಿದ್ದು, ಅಧಿವೇಶನದ ಮೊದಲ ದಿನವೇ ಕೋಲಾಹಲವುಂಟಾಗುವ ಸಾಧ್ಯತೆ ಇದೆ.

ಸುವರ್ಣ ಸೌಧದಲ್ಲಿ ಮಹಾತ್ಮಗಾಂಧೀಜಿ, ಬಿ.ಆರ್.ಅಂಬೇಡ್ಕರ್, ವೀರ ಸಾವರ್ಕರ್ ಸೇರಿದಂತೆ 7 ಮಹನೀಯರ ಫೋಟೋ ಅಳವಡಿಸಲಾಗುತ್ತಿದೆ. ಸಾವರ್ಕರ್ ಫೋಟೋ ಅನಾವರಣ ಮಾಡುವ ಮೂಲಕ ಅವರನ್ನು ದೇಶಪ್ರೇಮಿ ಎಂದು ▶ 8ನೇ ಪುಟಕ್ಕೆ

ಬೆಳಗಾವಿ ಅಧಿವೇಶನ ಇಂದು ಆರಂಭ

ಬೆಂಗಳೂರು,ಡಿ.18–ಸಮೀಪಿಸುತ್ತಿರುವ ರಾಜ್ಯ ವಿಧಾನ ಸಭಾ ಚುನಾವಣೆ, ಗಡಿ ವಿವಾದದ ಕಿಡಿಯ ನಡುವಲ್ಲೇ ಬೆಳಗಾವಿಯ ಸುವರ್ಣ ಸೌಧದಲ್ಲಿ ಸೋಮವಾರದಿಂದ ವಿಧಾನ ಮಂಡಲದ ಉಭಯ ಸದನಗಳ ಚಳಿಗಾಲ ಅಧಿವೇಶನ ಆರಂಭವಾಗಲಿದೆ.




ಚುನಾವಣೆಗೂ ಮುನ್ನ ಕೊನೆಯ ಅಧಿವೇಶನ ಇದಾಗಿದ್ದು, ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಈ ಅಧಿವೇಶನ ಅತ್ಯಂತ ಮಹತ್ವದ್ದಾಗಿದೆ. ಡಿ.30ರವರೆಗಿನ 10 ದಿನಗಳ ಕಾಲ ಅಧಿವೇಶನ ನಡೆಯಲಿದ್ದು, ಈ ಸಂದರ್ಭದಲ್ಲಿ ಆಡಳಿತಾರೂಢ ಬಿಜೆಪಿ ಮತ್ತು ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರ ಆರೋಪ–ಪ್ರತ್ಯಾರೋಪಗಳಿಗೆ ಈ ಅಧಿವೇಶನ ವೇದಿಕೆಯಾಗಲಿದೆ. ಮುಂದಿನ ಬಜೆಟ್ ಅಧಿವೇಶನ ಕೇವಲ ನೆಪ ಮಾತ್ರ ನಡೆಯುವುದರಿಂದ ಬಹುತೇಕ ಈ ಅಧಿವೇಶನ ರಾಜಕೀಯ ಚಟುವಟಿಕೆಗಳಿಂದಾಗಿ ಮಹತ್ವ ಪಡೆದುಕೊಳ್ಳಲಿದೆ. ವಿವಿಧ ಇಲಾಖೆಗಳಲ್ಲಿನ ಭ್ರಷ್ಟಾಚಾರ ಮತ್ತು ಹಗರಣಗಳು, ಮತದಾರರ ಮಾಹಿತಿ ಕಳ್ಳತನ, ಗಡಿ ವಿವಾದ ಮತ್ತು ಸರ್ಕಾರದ ವೈಫಲ್ಯಗಳು, ಕೋಮು ಗಲಭೆ ಮತ್ತು ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ, ಕಾನೂನು ಸುವ್ಯವಸ್ಥೆ, ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್‌ಆರ್‌ಪಿ) ಹೆಚ್ಚಳ ಸೇರಿದಂತೆ ಇತರೆ ರೈತರ ಬೇಡಿಕೆಗಳು ▶ 8ನೇ ಪುಟಕ್ಕೆ

ಮೀಸಲಾತಿ ಕೊಡದಿದ್ದರೆ ಸುವರ್ಣ ಸೌಧಕ್ಕೆ ಮುತ್ತಿಗೆ

ಸರ್ಕಾರಕ್ಕೆ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ

ಬೆಳಗಾವಿ, ಡಿ.18– ಡಿಸೆಂಬರ್ 22ರಂದು ಸುವರ್ಣ ಸೌಧದ ಬಳಿ ವಿರಾಟ ಪಂಚಶಕ್ತಿ ಸಮಾವೇಶ ಮಾಡುವ ಮೂಲಕ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಲಾಗುತ್ತದೆ ಎಂದು ಕೂಡಲ ಸಂಗಮ ಪಂಚಮಸಾಲಿ ಪೀಠದ ಜಗದ್ಗುರು ಬಸವಜಯ ಮೃತ್ಯುಂಜಯ ಸ್ವಾಮೀಜಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.



ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಘೋಷಿಸಲು ಸರ್ಕಾರಕ್ಕೆ ಡಿ.19ರವರೆಗೂ ಗಡುವು ನೀಡಲಾಗಿದೆ. ಮೀಸಲಾತಿ ಕೊಟ್ಟರೆ ವಿಜಯೋತ್ಸವ ಮಾಡುತ್ತೇವೆ. ಇಲ್ಲವಾದರೆ ▶ 8ನೇ ಪುಟಕ್ಕೆ

2023ರಲ್ಲಿ ದೇಶದಲ್ಲಿ ಮೊದಲ ಹೈಡ್ರೋಜನ್ ರೈಲು ಸಂಚಾರ

ರೈಲ್ವೆ ಸಚಿವ ಅಶ್ವಿನ್ ವೈಷ್ಣವ್



ಫೈಲ್ ಚಿತ್ರ

ಬೆಂಗಳೂರು: ಮುಂದಿನ ವರ್ಷ ದೇಶದಲ್ಲಿ ಮೊದಲ ಹೈಡ್ರೋಜನ್ ರೈಲು ಸಂಚರಿಸಲಿದೆ. ಇನ್ನು ಬುಲೆಟ್ ರೈಲು ಬೋಗಿಗಳ ನಿರ್ಮಾಣ ವೇಗಗತಿಯಲ್ಲಿ ಸಾಗುತ್ತಿದ್ದು, ಶೀಘ್ರವೇ ಮುಂಬೈ–ಅಹ್ಮದಾಬಾದ್ ನಡುವೆ ಮೊದಲ ಬುಲೆಟ್ ರೈಲು ಸಂಚಾರ ಮಾಡಲಿದೆ ಕೇಂದ್ರ ರೈಲ್ವೇ ಮತ್ತು ಐಟಿ ಇಲಾಖೆ ಸಚಿವ ಅಶ್ವಿನ್ ವೈಷ್ಣವ್ ಹೇಳಿದರು.



ಅಶ್ವಿನ್ ವೈಷ್ಣವ್

ಬೆಂಗಳೂರಿನ ವಸಂತನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅಶ್ವಿನ್ ವೈಷ್ಣವ್, ಬುಲೆಟ್ ರೈಲು ಬೋಗಿಗಳ ನಿರ್ಮಾಣ ವೇಗಗತಿಯಲ್ಲಿ ಸಾಗುತ್ತಿದೆ. ಇದುವರೆಗೆ 116 ಕಿ.ಮೀ.ವರೆಗೆ ಬುಲೆಟ್ ಹಳಿ ನಿರ್ಮಾಣವಾಗಿದ್ದು, ಶೀಘ್ರವೇ ಮುಂಬೈ–ಅಹ್ಮದಾಬಾದ್ ನಡುವೆ ಮೊದಲ ಬುಲೆಟ್ ರೈಲು ಸಂಚಾರ ಮಾಡಲಿದೆ. ಬುಲೆಟ್ ರೈಲಿನ ವೇಗ ಗಂಟೆಗೆ 320 ಕಿ.ಮೀ. ▶ 8ನೇ ಪುಟಕ್ಕೆ

ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರ ಗೌರವಧನ ಹೆಚ್ಚಳ

ಬೆಂಗಳೂರು: ರಾಜ್ಯ ಎಲ್ಲ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಗೌರವಧನ ಇಮ್ಮಡಿಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. 2017ರ ಮೇ 5ರಂದು ಸರ್ಕಾರ ಹೊರಡಿಸಿದ್ದ ಆದೇಶದ ಅನ್ವಯ ಸದ್ಯ ಅಧ್ಯಕ್ಷರಿಗೆ 3 ಸಾವಿರ, ಉಪಾಧ್ಯಕ್ಷರಿಗೆ 2 ಸಾವಿರ, ಸದಸ್ಯರಿಗೆ 1 ಸಾವಿರ ನೀಡಲಾಗುತ್ತಿದೆ. ಈ ಮೊತ್ತವನ್ನು ಕ್ರಮವಾಗಿ ರೂ. 6 ಸಾವಿರ, ರೂ. 4 ಸಾವಿರ, ರೂ. 2 ಸಾವಿರವಾಗಿ ಹೆಚ್ಚಳಗೊಳಿಸಲಾಗಿದೆ.

ಕುವೆಂಪು ಗೌರವ ಪುರಸ್ಕಾರಕ್ಕೆ ಹಿರಿಯ ಸಾಹಿತಿ ಡಾ.ರಾಗೌ ಆಯ್ಕೆ



ಮೈಸೂರು, ಡಿ. 18– ಬೆಂಗಳೂರಿನ ಕನ್ನಡ ಜನಶಕ್ತಿ ಕೇಂದ್ರದ ವತಿಯಿಂದ ನೀಡಲಾಗುವ 'ಕುವೆಂಪು ಗೌರವ ಪುರಸ್ಕಾರ'ಕ್ಕೆ ಮೈಸೂರು ವಿಶ್ವ ವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ಕನ್ನಡ ಪ್ರಾಧ್ಯಾಪಕ, ಹಿರಿಯ ಸಾಹಿತಿ ಹಾಗೂ ಜಾನಪದ ವಿದ್ವಾಂಸರಾದ ಡಾ. ರಾಮೇಗೌಡ (ರಾಗೌ) ಆಯ್ಕೆಯಾಗಿದ್ದಾರೆ ಎಂದು ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಬಹುಶ್ರುತ ಪ್ರತಿಭಾವಂತ ವಿದ್ವಾಂಸರಾಗಿರುವ ಡಾ. ರಾಗೌ ಅವರು ಕಾವ್ಯ, ವಿಮರ್ಶೆ, ಸಂಶೋಧನೆ, ಸಂಪಾದನೆ ಹಾಗೂ ಜಾನಪದ ಸಾಹಿತ್ಯ ಪ್ರಕಾರಗಳಲ್ಲಿ ನಲವತ್ತಕ್ಕೂ ಅಧಿಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಯಾತ್ರೆ, ತೆಪ್ಪ, ಮೋಡ ಮುಸುಕಿದ ಆಕಾಶ, ನೆಲದ ಮರೆಯ ನಿಧಾನ, ಮಾತು ಮೌನಗಳ ನಡುವೆ, ಆರದಿರಲಿ ಈ ಬೆಳಕು, ಮಾತು ಮಾರ್ಗ, ನಿನ್ನೆ ನಾಳೆಗಳ ನಡುವೆ (ಸಮಗ್ರ), ದೊರೆ ದುರ್ಯೋಧನ, ಕುಮಾರ ರಾಮ, ಕಂದನ ಕವನಗಳು, ಕಾವ್ಯಾನುಶೀಲನ, ಅವಗಾಹನ, ಕುವೆಂಪು ಸಾಹಿತ್ಯ ವಿಮರ್ಶನ, ಲಕ್ಷೀಶನ ಕಾವ್ಯ ಪ್ರವೇಶ, ರನ್ನನ ಕಾವ್ಯಾಧ್ಯಯನ, ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು, ಕಿಟ್ಟೆಲ್ ಕೋಶದ ಗಾದೆಗಳು, ಕರ್ನಾಟಕದ ಜನಪದ ಕಥೆಗಳು, ನಮ್ಮ ಒಗಟುಗಳು, ಜನಪದ ನಂಬಿಕೆಗಳು, ಕನ್ನಡ ಶಿಶು ಪ್ರಾಸಗಳು, ಜನಪದ ರಾಮಾಯಣ, ಜಾನಪದ ಸಂಕೀರ್ಣ, ಜನಪದ ಸಾಹಿತ್ಯ ರೂಪಗಳು, ಜಾನಪದ ಸಂಶೋಧನ ಮೊದಲಾದ ಕೃತಿಗಳ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಹೊಸ ಕಸುವು ತುಂಬಿದ್ದಾರೆ.

ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ಅತ್ಯವಶ್ಯ

ವಿಧಾನಪರಿಷತ್ ಸದಸ್ಯ ಮಂಜೇಗೌಡ ಅಭಿಮತ



ಮೈಸೂರು, ಡಿ.18– ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ನೀಡುವುದು ಅಗತ್ಯ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಿಸಿದರು.

ಮೈಸೂರಿನ ಶ್ರೀ ನಟರಾಜ ಪ್ರತಿಷ್ಠಾನ ಹಾಗೂ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ನಟರಾಜ ಕಲ್ಯಾಣ ಮಂಟಪದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶರಣಜ್ಯೋತಿ ಪ್ರಸಾರಂಗ ಉದ್ಘಾಟಿಸಿ, ಮಾತನಾಡಿದರು.

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಸ್ಪರ್ಧೆ ಸೃಷ್ಟಿಯಾಗಿದ್ದು, ಅತ್ಯಾಧುನಿಕ ತಂತ್ರಜ್ಞಾನಗಳ ಬಳಕೆಯೂ ಹೆಚ್ಚಾಗಿದೆ. ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಕೆಯ ಧಾವಂತದಲ್ಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ನೈತಿಕತೆ ಪಾಠ ಕಲ್ಪಿಸುವುದು ಶಿಕ್ಷಣದ ಭಾಗವಾಗಬೇಕಿದೆ. ಮಹಾತ್ಮ ಗಾಂಧೀಜಿಯವರು ದೇಶದ ಆಸ್ತಿಯಾಗಿದ್ದರು. ಅವರ ಸರಳ ಜೀವನ, ತತ್ವಸಿದ್ಧಾಂತ ಪ್ರತಿಯೊಬ್ಬರಿಗೂ ಮಾದರಿಯಾಗಬೇಕು. ಹೀಗೆ ಮೌಲ್ಯಯುತ ಜೀವನ ಕಟ್ಟಿಕೊಳ್ಳುವತ್ತ ವಿದ್ಯಾರ್ಥಿಗಳು ಮುನ್ನಡೆಯಬೇಕು. ಗುರುಹಿರಿಯರನ್ನು ಗೌರವಿಸುತ್ತಾ ಸ್ಪಷ್ಟ ಗುರಿಯೊಂದಿಗೆ ಚೆನ್ನಾಗಿ ಅಧ್ಯಯನ ಮಾಡಿ ಸಮಾಜದ ಸಂಪತ್ತಾಗಬೇಕೆಂದು ಆಶಿಸಿದರು. ಇದೇ ವೇಳೆ ಡಾ.ಎಸ್.ಶಿವರಾಜಪ್ಪನವರ 'ಗಾಂಧಿ ರಸಪ್ರಶ್ನೆಗಳು ಮತ್ತು ಭಜನ್ಸ್' ಗ್ರಂಥ ಬಿಡುಗಡೆಗೊಳಿಸಲಾಯಿತು. ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಡಾ.ಪಿ.ಕೃಷ್ಣ, ಎಲ್.ಶಿವಲಿಂಗಪ್ಪ, ಪ್ರೊ.ಎಸ್.ಶಿವರಾಜಪ್ಪ, ಎಂ.ಚಂದ್ರಶೇಖರ್, ಡಿ.ಎನ್.ಲೋಕಪ್ಪ, ಮೂಗೂರು ನಂಜುಂಡಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ನಾಗೇಂದ್ರ ಭೂಮಿಪೂಜೆ



ಮೈಸೂರು,ಡಿ.18–ಲೋಕೋಪಯೋಗಿ ಇಲಾಖೆ ಎಸ್‌ಎಫ್‌ಸಿ ವಿಶೇಷ ಅನುದಾನ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ, ಆರಾಧನಾ ಸಮಿತಿ ಅನುದಾನ ಹಾಗೂ ಮುಜರಾಯಿ ಇಲಾಖೆ ವಿಶೇಷ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಕಾರ್ಪೋರೇಟರ್ ಸತೀಶ್ ಹಾಗೂ ಶ್ರೀಮತಿ ಪ್ರಮೀಳಾ ಭರತ್, ಮುಖಂಡರಾದ ಪರಮೇಶ್, ಗೈಡ್ ಬಾಬು, ರಾಜು, ಪಾಪ, ಮೋಹನ್, ಚರಣ್ ರಾಜ್, ಹೊಂಬಣ್ಣ, ರಾಮ, ರಘು, ಅಭಿ, ನಂಜುಂಡ, ದಾಸಪ್ಪ, ಧನರಾಜ್, ಯಶೋದಾ, ಚಾಮರಾಜ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪುನೀತ್, ರಮೇಶ್, ವಾರ್ಡ್ ನಂ.23ರ ಕಾರ್ಯದರ್ಶಿ ಶ್ರೀನಿವಾಸ್, ಮುಖಂಡರಾದ ಶ್ರೀ ರಾಜೇಂದ್ರ, ಶಾಂತಿಲಾಲ್ ಜೈನ್, ಪರಮೇಶ್ ಗೌಡ, ವಿಘ್ನೇಶ್ವರ ಭಟ್, ಸರ್ವಜ್ಞ ರಾವ್, ಮುರಳಿ, ರಮೇಶ್, ಲಕ್ಷ್ಮಿ, ಸುದರ್ಶನ್, ನಾಗೇಶ್, ಸುರೇಂದ್ರ, ಪ್ರಮೋದ್, ಮಂಜುನಾಥ್, ಸಚಿನ್, ಪಾಪಣ್ಣ, ಆನಂದ್, ಚರಣ್, ಚಂದ್ರು ಕುಮಾರ್, ಪ್ರವೀಣ್, ವಸಂತ್, ಭದ್ರೀಶ್, ಪ್ರವೀಣ್ ಶೆಟ್ಟಿ, ರವಿಶಂಕರ್, ಅನೂಜ್ ಸರಸ್ವತ್, ಗೋಪಾಲಕೃಷ್ಣ, ನಾಗರಾಜ್, ಅವಿನಾಶ್, ನವೀನ್, ಪ್ರಸಾದ್, ಬಲರಾವ್ ಶರ್ಮ, ಪ್ರಸಾದ್, ವೆಂಕಟರಾಘವನ್, ಸುಬ್ರಹ್ಮಣ್ಯ ಪುರಾಣಿಕ್, ರಮೇಶಣ್ಣ, ಕುಮಾರಣ್ಣ, ಸಂದೀಪ್, ರವಿಕುಮಾರ್, ಕೌಶಿಕ್, ರಚನಾ, ಪ್ರವೀಣ್ ಬೈ, ಚಂದ್ರಕಲಾ, ಸುಕನ್ಯಾ, ಚಂದ್ರ, ವಸಂತ, ಗಣೇಶ್‌ರಾವ್, ಮುಖೇಶ್ ಜೈನ್, ಕಿಶೋರಿ ಲಾಲ್ ಇನ್ನಿತರರಿದ್ದರು.

ವಿದ್ಯಾರ್ಥಿಗಳಿಗೆ ಆಕ್ಸ್‌ಫರ್ಡ್ ಡಿಕ್ಷನರಿ ವಿತರಣೆ



ಮೈಸೂರು,ಡಿ.18(ಎಸ್‌ಪಿಎನ್)–ಪಾಂಡವಪುರ ತಾಲೂಕು ಕ್ಯಾತನಹಳ್ಳಿ ವೆಂಕಟೇಗೌಡ ಸ್ವಯಂ ಸೇವಾ ಸಂಘದ ವತಿಯಿಂದ ಮಹಾರಾಜ ಪ್ರೌಢಶಾಲೆಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಆಕ್ಸ್‌ಫರ್ಡ್ ಡಿಕ್ಷನರಿ ಸೇರಿದಂತೆ ಇತರೆ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಲಾಯಿತು.

ಕ್ಯಾತನಹಳ್ಳಿಯ ಹಿರಿಯ ಗಾಂಧಿವಾದಿ ಹಾಗೂ ಸಮಾಜ ಸೇವಕ ವೆಂಕಟೇಗೌಡ ಅವರ ಸ್ಮರಣಾರ್ಥ ಮಹಾರಾಜ ಪ್ರೌಢಶಾಲೆಯ 60 ವಿದ್ಯಾರ್ಥಿಗಳಿಗೆ ಆಕ್ಸ್‌ಫರ್ಡ್ ಡಿಕ್ಷನರಿ ಹಾಗೂ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದ ಡಾ.ಕೆ.ವೈ.ಶ್ರೀನಿವಾಸ್, ಕಳೆದ ಹತ್ತು ವರ್ಷಗಳಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಶೈಕ್ಷಣಿಕ ಪರಿಕರಗಳನ್ನು ವಿತರಿಸಲಾಗುತ್ತಿದೆ ಎಂದರು. ಈ ವರ್ಷ ಮಹಾರಾಜ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಲಾಗುವುದು ಎಂದು ತಿಳಿಸಿದರು. ಈ ವೇಳೆ ಮಹಾರಾಜ ಪ್ರೌಢಶಾಲೆಯ ಉಪಪ್ರಾಂಶುಪಾಲ ಕೆ.ರಮೇಶ್, ಸಹ ಶಿಕ್ಷಕರು ಉಪಸ್ಥಿತರಿದ್ದರು.

ನಿಧನ



ರಾಜ್‌ಕುಮಾರಿ ಕಿಶನ್ ದಾಸ್

ಮೈಸೂರು,ಡಿ.18–ಮೈಸೂರಿನ ಅಗ್ರಹಾರ, ಎಂ.ಜಿ.ರಸ್ತೆ ನಿವಾಸಿ ದಿವಂಗತ ಕಿಶನ್‌ದಾಸ್ ಅವರ ಪತ್ನಿ ರಾಜ್‌ಕುಮಾರಿ ಕಿಶನ್‌ದಾಸ್ (79) ಅವರು ಭಾನುವಾರ ನಿಧನರಾದರು. ಮೃತರು ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ಇಂದು ಸಂಜೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಿತು.

ವಸಂತ ಕಲ್‌ಬಾಗಲ್‌ರ 'ಸಮ್ ದರ್ಶನ', 'ಅಡ್ಡಿತುಪಷ ಬಕ್ಕಜಬಿನ್ನಿ' ಕೃತಿ ಬಿಡುಗಡೆ

ವ್ಯಕ್ತಿ ಚಿತ್ರಗಳಲ್ಲಿ ಸಿಗುವ ಮಾಹಿತಿ ಅಪರೂಪವಾದದ್ದು: ಪ್ರೊ.ಮೈಸೂರು ಕೃಷ್ಣಮೂರ್ತಿ ಅಭಿಮತ



ಮೈಸೂರು, ಡಿ.18(ಎಂಟಿವೈ)– ವ್ಯಕ್ತಿ ಚಿತ್ರಗಳಲ್ಲಿ ಸಿಗುವ ಮಾಹಿತಿ ಅಪರೂಪವಾದದ್ದು ಎಂದು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರೂ ಆದ ವಿಮರ್ಶಕ ಪ್ರೊ. ಮೈಸೂರು ಕೃಷ್ಣಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರೋಟರಿ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಸಾಹಿತ್ಯಲೋಕ ಪಬ್ಲಿಕೇಷನ್ ಸಹಯೋಗದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಲೇಖಕಿ ವಸಂತ ಕಲ್‌ಬಾಗಲ್ ಅವರ ರಚನೆಯ 'ಸಮ್ ದರ್ಶನ' ವ್ಯಕ್ತಿಚಿತ್ರ ಮತ್ತು 'ಅಡ್ಡಿತುಪಷ ಬಕ್ಕಜಬಿನ್ನಿ' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಒಬ್ಬ ನಿರ್ದಿಷ್ಟ ವ್ಯಕ್ತಿಯು ಸಾಧಕರ ಕುರಿತು ಬರೆಯುವಾಗ ತನಗೆ ಯಾವುದು ಮುಖ್ಯ ಎನಿಸುತ್ತದೋ ಆ ವಿಚಾರಕ್ಕೆ ಆದ್ಯತೆ ನೀಡುವುದನ್ನು ಕಾಣುತ್ತೇವೆ. ಲೇಖಕ ಆದ್ಯತೆ ನೀಡಿದ ವಿಚಾರ ಸಾಧಕನಿಗೆ ಮುಖ್ಯ ಎನಿಸದೆ ಇರಬಹುದು. ಆದರೆ, ಸಾಂಸ್ಕೃತಿಕವಾಗಿ ಸಮಾಜಕ್ಕೆ ಬೇಕಾದ ವಿಚಾರಗಳನ್ನು ಲೇಖಕರು ದಾಖಲಿಸಲಿದ್ದಾರೆ. ಹಾಗಾಗಿ ವ್ಯಕ್ತಿ ಚಿತ್ರಗಳಲ್ಲಿ ಸಿಗುವ ಮಾಹಿತಿ ಅಪರೂಪವಾಗಿದ್ದು, ಅದು ಸಾಧಕರ ಒಟ್ಟು ವ್ಯಕ್ತಿತ್ವವನ್ನು ಅರಿಯುವುದಕ್ಕೆ ಮಹತ್ವದ ದಾಖಲೆಯಾಗಿ ಸಲ್ಲುತ್ತದೆ. ಈ ದಿಶೆಯಲ್ಲಿ ವಸಂತ ಕಲ್‌ಬಾಗಲ್ ಅವರ ಸಮ್ ದರ್ಶನ ಕೃತಿ ಮಹತ್ವ ಪಡೆಯಲಿದೆ ಎಂದು ಹೇಳಿದರು.

ಈ ವ್ಯಕ್ತಿ ಚಿತ್ರದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರ ಬಗ್ಗೆ ಮಾಹಿತಿ ನೀಡಲಾಗಿದೆ. ಒಂದೇ ಪುಸ್ತಕದಲ್ಲಿ ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ, ಸಂಗೀತ, ಉದ್ಯಮ, ಕ್ರೀಡೆ ಸೇರಿದಂತೆ ಎಲ್ಲ ಕ್ಷೇತ್ರದ ಸಾಧಕರ ಪರಿಚಯ ಮಾಡಿರುವುದು ಈ ಕೃತಿಯ ಮಹತ್ವ ಹೆಚ್ಚಿಸಿದೆ. ಲೇಖಕರು ಆಯಾ ಸಾಧಕರ ಬಗ್ಗೆ ಈಗಾಗಲೇ ದಾಖಲಾಗಿರುವ ಸಂಗತಿಗಳನ್ನು ಗೌಣವಾಗಿಸಿ ಅರಿವಿಗೆ ಬಾರದ ಮುಖ್ಯವಾದ ವಿಚಾರಗಳನ್ನು ಇಲ್ಲಿ ಅನಾವರಣಗೊಳಿಸಿದ್ದಾರೆ. ವ್ಯಕ್ತಿ ಚಿತ್ರಣಕ್ಕೆ ಸೂಕ್ತವಾದ ಭಾಷೆ ಮತ್ತು ಅಭಿವ್ಯಕ್ತಿ ವಿಧಾನ ಹೊಂದಿದೆ. ಅದನ್ನು ಬರಹಗಾರರು ಸಾಧಿಸಿದ್ದಾರೆ ಎಂದರು.

ಅಡ್ಡಿತುಪಷ ಬಕ್ಕಜಬಿನ್ನಿ ವಿಶಿಷ್ಟ ಕೃತಿಯಾಗಿದ್ದು, ಸ್ವ–ಅನುಭವವನ್ನು ಆಧರಿಸಿ ಬದುಕಿನ ಮಹತ್ವದ ವಿಚಾರಗಳನ್ನು ಹಾಸ್ಯ ಲೇಪನದಲ್ಲಿ ನಿರೂಪಿಸಲಾಗಿದೆ. ಲಲಿತ ಪ್ರಬಂಧಗಳ ಗುಂಪಿಗೆ ಸೇರುವ ಪ್ರಬಂಧಗಳು ತಮ್ಮ ನಿರೂಪಣಾ ಶೈಲಿಯಿಂದಲೇ ಓದುಗರಿಗೆ ಆಪ್ತ ಎನಿಸಲಿದೆ ಎಂದರು. ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಗಾಯಕಿ ಹೆಚ್.ಆರ್. ಲೀಲಾವತಿ ಮಾತನಾಡಿ, ವಸಂತ ಕಲ್‌ಬಾಗಲ್ ಒಬ್ಬ ಮಹಿಳೆಯಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮನ್ನು ಗುರುತಿಸಿಕೊಂಡು ಅತ್ಯಂತ ಜವಾಬ್ದಾರಿಯುತವಾದ ಕೆಲಸಗಳನ್ನು ನಿರ್ವಹಿಸುವುದರಲ್ಲಿ ಯಶಸ್ಸು ಕಂಡಿದ್ದಾರೆ. ಅವರ ಹೆಸರಿನಲ್ಲಿಯೇ ಇರುವ ಕಲ್‌ಬಾಗಲ್ ಎನ್ನುವ ಮಾತು ಅವರ ಧೈರ್ಯ ಮತ್ತು ಗಟ್ಟಿತನವನ್ನು ತೋರಿಸುತ್ತದೆ ಎಂದರು. ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಲೇಖಕರಾದ ವಸಂತ ಕಲ್‌ಬಾಗಲ್, ಪ್ರಕಾಶ ರಘುವೀರ್ ಸಮರ್ಥ ಪಾಲ್ಗೊಂಡಿದ್ದರು. ರೂಪಿಶ್ರೀ ಪ್ರಾರ್ಥಿಸಿದರು. ಶ್ರೀವಿದ್ಯಾ ನಿರೂಪಿಸಿದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಡಿ.18–ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2022–23ನೇ ಸಾಲಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ, ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಪ್ರಬುದ್ಧ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ಅಗತ್ಯವಾದ ಧನಸಹಾಯ ನೀಡುವ ಕಾರ್ಯಕ್ರಮವಿದ್ದು, ಅರ್ಹ ಅಭ್ಯರ್ಥಿಗಳು, ವಿದ್ಯಾರ್ಥಿಗಳು www.sw.kar.nic.in ಮುಖಾಂತರ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಅಥವಾ ಆಯಾ ತಾಲೂಕುಗಳ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಗಳನ್ನು ಭೇಟಿ ಮಾಡಿ ಮಾಹಿತಿ ಪಡೆಯಬಹುದು ದೂರವಾಣಿ ಸಂಖ್ಯೆ:0821–2344661, ಮೊ.ನಂ:9480843041 ಅನ್ನು ಸಂಪರ್ಕಿಸಬಹುದಾಗಿದೆ.

ಸಿದ್ಧಾರ್ಥನಗರ ವ್ಯಾಪ್ತಿಯಲ್ಲಿ 2.5 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ರಾಮದಾಸ್ ಚಾಲನೆ



ಮೈಸೂರು, ಡಿ.18(ಆರ್‌ಕೆಬಿ)– ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯ ಸಿದ್ಧಾರ್ಥನಗರ ಭಾಗದಲ್ಲಿ 2.50 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಎ.ರಾಮದಾಸ್ ಭಾನುವಾರ ಚಾಲನೆ ನೀಡಿದರು.

ಬನ್ನೂರು ಮುಖ್ಯ ರಸ್ತೆಯಿಂದ ಗೀತಾ ಶಾಲೆ ಮಾರ್ಗವಾಗಿ ನೀತಿ ಮಾರ್ಗ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿದರು. ಮಳೆ ನೀರು ಚರಂಡಿ ಇಲ್ಲದಿರುವ ಕಾರಣ ರಸ್ತೆಯಲ್ಲಿ ಮಳೆ ನೀರು ನಿಂತು ರಸ್ತೆ ಹಾಳಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಕೂಡಲೇ ಮಳೆ ನೀರು ಸರಾಗವಾಗಿ ಚರಂಡಿಯಲ್ಲಿ ಹರಿಯಲು ಯಾವ ಭಾಗದಲ್ಲೂ ಮಳೆ ನೀರು ಚರಂಡಿ ಇರುವುದಿಲ್ಲ. ಅಲ್ಲಿ ಚರಂಡಿ ನಿರ್ಮಿಸಿ, ಅದಕ್ಕೆ ಸಂಬಂಧಿಸಿದಂತೆ 20 ಮೀಟರ್‌ಗಳ ನಡುವಿಗೆ ಶೋಲ್ಡರ್ ಡ್ರೈನ್ ನಿರ್ಮಿಸಿ ಸುರಕ್ಷಿತ ರಸ್ತೆ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

ನಂತರ ಸಂಗೀತಾ ಕಾರ್ನರ್‌ನಿಂದ ಡೈರಿ ಕ್ವಾಟ್ರಸ್ ಮಾರ್ಗ ಬನ್ನೂರು ರಸ್ತೆಯವರೆಗೆ ರಸ್ತೆ ಕಾಮಗಾರಿಗೆ ಚಾಲನೆ ನೀಡಿದರು. ಸಾರ್ವಜನಿಕರ ಸಂಚಾರಕ್ಕೆ ಫುಟ್‌ಪಾತ್ ನಿರ್ಮಿಸುವ ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಲು ಶಾಸಕ ರಾಮದಾಸ್ ಸೂಚಿಸಿದರು.

ಸದಾ ವಾಹನ ದಟ್ಟಣೆಯಿಂದ ಕೂಡಿರುವ ಇಂದಿರಾ ಕ್ಯಾಂಟೀನ್ ವೃತ್ತದಿಂದ ಟೆರಿಷಿಯನ್ ವೃತ್ತ ರಸ್ತೆ ಡಾಂಬರೀಕರಣ ಕಾಮಗಾರಿಗೂ ಚಾಲನೆ ನೀಡಿದ ಅವರು, ಸಂಚಾರ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ರಸ್ತೆಯನ್ನು ಸಂಚಾರ ನಿಯಮಾನುಸಾರವಾಗಿ ವೈಟ್ ಲೈನ್ ಮತ್ತು ರೆಫ್ಲೆಕ್ಟರ್‌ಗಳನ್ನು ಅಳವಡಿಸಿ, ಸುಗಮ ಸಂಚಾರ ರಸ್ತೆಯನ್ನಾಗಿ ಮಾಡಲು ನಗರಪಾಲಿಕೆ ಮತ್ತು ಪೊಲೀಸ್ ಇಲಾಖೆ ಅಧಿಕಾರಿ ಗಳೊಂದಿಗೆ ಜಂಟಿಯಾಗಿ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಲು ಶಾಸಕ ಎಸ್.ಎ.ರಾಮದಾಸ್ ಅಧಿಕಾರಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಪಾಲಿಕೆ ಸದಸ್ಯೆ ಹಾಗೂ ಉಪಮೇಯರ್ ಡಾ.ರೂಪಾ ಯೋಗೇಶ್, ಮುಖಂಡರಾದ ವಿನಯ್, ಯೋಗೀಶ್ ಬಾಬು, ಸೋಮು, ಚಿನ್ನ, ಚಿದಂಬರ, ಮೋಟಪ್ಪ, ರಂಗನಾಥ್, ಮಹದೇವಸ್ವಾಮಿ, ಪಟೇಲ, ಕೇಬಲ್ ಕೃಷ್ಣ, ಸಾಗರ್, ಭಾರತಿ, ನಾಗರಾಜ್, ಸುರೇಶ್‌ಗೌಡ, ಮಹೇಶ್, ದೇವಯ್ಯ, ಸಿದ್ದಯ್ಯ, ಮಹದೇವಣ್ಣ, ಅರ್ಜುನ್, ಸಂತೋಷ್, ಮಂಜುಳ, ಆಲನಹಳ್ಳಿ ಮಹದೇವಸ್ವಾಮಿ, ಏಕನಾಥ್, ಅಶೋಕ್ ದಯಾನಂದ್, ಆನಂದ್, ಬಸವರಾಜು ಇನ್ನಿತರರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ರೈತರ ಭಾರೀ ಪ್ರತಿಭಟನಾ ಮೆರವಣಿಗೆ



ಮೈಸೂರು,ಡಿ.18(ಪಿಎಂ)–ರೈತ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಶನಿವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಮೈಸೂರಿನ ಗನ್‌ಹೌಸ್ ವೃತ್ತದಲ್ಲಿ ಜಮಾಯಿಸಿದ ಸಾವಿರಾರು ಮಂದಿ ರೈತರು, ಬಸವೇಶ್ವರ ವೃತ್ತ, ಸಯ್ಯಾಜಿರಾವ್ ರಸ್ತೆ, ಹಳೇ ಸಂತೆಪೇಟೆ, ದೇವರಾಜ ಅರಸು ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ರೈತರು, ಹಕ್ಕೊತ್ತಾಯ ಮಂಡಿಸಿ ಶೀಘ್ರ ಅವುಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. 1 ಟನ್ ಕಬ್ಬಿಗೆ ಕನಿಷ್ಠ 4,500 ರೂ. ಬೆಲೆ ನೀಡಬೇಕು. ಭತ್ತದ ಖರೀದಿ ಕೇಂದ್ರಗಳನ್ನು ಶೀಘ್ರ ತೆರೆಯಬೇಕು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕ್ವಿಂಟಾಲ್ ಭತ್ತಕ್ಕೆ ಕನಿಷ್ಠ 500 ರೂ. ಬೆಂಬಲ ಬೆಲೆ ನಿಗದಿಪಡಿಸಬೇಕು. ಜಲಜೀವನ್ ಮಿಷನ್ ಯೋಜನೆಯಡಿ ಗ್ರಾಮೀಣ ಪ್ರದೇಶದ ಮನೆಗಳ ಕೊಳಾಯಿಗಳಿಗೆ ಮೀಟರ್ ಅಳವಡಿಸುವುದನ್ನು ಸಂಪೂರ್ಣ ಕೈಬಿಡಬೇಕು ಎಂದು ಆಗ್ರಹಿಸಿದರು.

ತಿ.ನರಸೀಪುರ ಸೇರಿದಂತೆ ಜಿಲ್ಲೆಯ ಕಾಡಂಚಿನ ಗ್ರಾಮಗಳಲ್ಲಿ ವನ್ಯಜೀವಿಗಳ ಹಾವಳಿ ತಪ್ಪಿಸಬೇಕು. ಕಾಡುಪ್ರಾಣಿಗಳಿಂದ ಆಗುವ ಜೀವ ನಷ್ಟಕ್ಕೆ ಕನಿಷ್ಠ 20 ಲಕ್ಷ ರೂ. ಪರಿಹಾರ ನೀಡಬೇಕು. ಕಾಡುಪ್ರಾಣಿಗಳಿಂದ ಕುರಿ ಹಾಗೂ ಮೇಕೆಗಳ ಜೀವ ನಷ್ಟಕ್ಕೆ ಕನಿಷ್ಠ 20 ಸಾವಿರ ರೂ. ಹಾಗೂ ಹಸು, ಎಮ್ಮೆ, ಎತ್ತು ಜೀವ ಹಾನಿಗೆ ಕನಿಷ್ಠ 1 ಲಕ್ಷ ರೂ. ಪರಿಹಾರವನ್ನು ರೈತರಿಗೆ ನೀಡಬೇಕು ಎಂದು ಆಗ್ರಹಿಸಿದರು.

ಮೈಸೂರು ಹಾಲು ಉತ್ಪಾದಕರ ಒಕ್ಕೂಟವು ಪಶು ಆಹಾರ ಬೆಲೆಯನ್ನು ಗಣನೀಯವಾಗಿ ಏರಿಕೆ ಮಾಡಿದ್ದು, ಇದು ಖಂಡನೀಯ. ರಾಜ್ಯಾದ್ಯಂತ ಲೀಟರ್ ಹಾಲಿಗೆ ಕನಿಷ್ಠ 45 ರೂ. ಬೆಲೆ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.

ನಂಜನಗೂಡು ತಾಲೂಕಿನ ತಾಂಡ್ಯ, ಹಿಮ್ಮಾವು, ಅಡಕನಹಳ್ಳಿ, ಕಡಕೊಳ, ಕಲ್ಲಹಳ್ಳಿ ಮತ್ತು ಕತ್ವಾಡಿಪುರ ಕೈಗಾರಿಕೆ ಪ್ರದೇಶದಲ್ಲಿ ಕೆಐಎಡಿಬಿ ವಶಪಡಿಸಿಕೊಂಡಿರುವ ಸಾವಿರಾರು ಎಕರೆ ಜಮೀನು ಕೈಗಾರಿಕೆ ನಿರ್ಮಾಣವಾಗದೇ ಪಾಳು ಬಿದ್ದಿದೆ. ಹೀಗಾಗಿ ಜಮೀನು ಕಳೆದುಕೊಂಡ ರೈತರ ಮಕ್ಕಳು ನಿರುದ್ಯೋಗಿಗಳಾಗುವ ಪರಿಸ್ಥಿತಿ ಬಂದಿದೆ. ಈ ಕೂಡಲೇ ಸ್ಥಳೀಯ ಪಂಚಾಯಿತಿ ವ್ಯಾಪ್ತಿಯ ನಿರುದ್ಯೋಗಿ ಯುವಕ–ಯುವತಿಯರಿಗೆ ಖಾಯಂ ಉದ್ಯೋಗ ನೀಡಬೇಕು. ಈಗ ಸ್ಥಾಪನೆಯಾಗಿರುವ ಕಂಪನಿಗಳಲ್ಲಿ ಭೂಮಿ ಕಳೆದುಕೊಂಡ ರೈತರ ಮಕ್ಕಳು ಹಾಗೂ ಸ್ಥಳೀಯ ನಿರುದ್ಯೋಗಿಗಳಿಗೆ ಖಾಯಂ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು.

ಸಂಘದ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ, ಕೆ.ಟಿ.ಗಂಗಾಧರ್, ರಘು ಇಮ್ಮಾವು, ಸತೀಶ್ ಸಿಂಧುವಳ್ಳಿ, ಶಂಕರನಾಯಕ ಹಡತಲೆ, ರವಿರಾಜ್, ಮಂಜುಕಿರಣ್, ಕಳ್ಳಿಪುರ ಮಹದೇವಸ್ವಾಮಿ, ಕೃಷ್ಣೇಗೌಡ, ಟಿ.ಆರ್.ವಿದ್ಯಾಸಾಗರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.12.2022 ಸೋಮವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭ್ಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಲಕ್ಷಾರ್ಚನೆ, ವಾರ್ಷಿಕ ಕುಂಭಾಭಿಷೇಕ ನೂತನ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ :** ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನದ ಪ್ರಯುಕ್ತ ವಿಶೇಷ ಉಪನ್ಯಾಸ, ವಿಷಯ: "ಮಾನವ ಹಕ್ಕುಗಳು ಮತ್ತು ಉತ್ತಮ ಆಳ್ವಿಕೆ", ಸ್ಥಳ: ಕಾವೇರಿ ಸಭಾಂಗಣ, ಮುಕ್ತ ವಿವಿ, ಮುಕ್ತ ಗಂಗೋತ್ರಿ, ಬೆಳಗ್ಗೆ 11.30 ಗಂಟೆಗೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಆಗಮಿಸುವ 'ಕನ್ನಡ ರಥ'ಕ್ಕೆ ಸ್ವಾಗತ ಕಾರ್ಯಕ್ರಮ, ಸ್ಥಳ: ಅರಮನೆ ಉತ್ತರ ದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ, ಮಧ್ಯಾಹ್ನ 3.30ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ರಂಗ ಮತ್ತು ನೃತ್ಯ ತರಬೇತಿ ಶಿಬಿರ, ಉದ್ಘಾಟನೆ: ಜಾನಪದ ವಿದ್ವಾಂಸ ಡಾ. ಪಿ.ಕೆ. ರಾಜಶೇಖರ್, ಅಧ್ಯಕ್ಷತೆ: ಚಿಂತಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸ್ಥಳ: ಚಿಂತನ ಚಾವಡಿ, ಕಲಾಮಂದಿರದ ಮುಂದಿನ ಉದ್ಯಾನವನ, ಸಂಜೆ 4.30ಕ್ಕೆ.

■ **ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್, ಹೆಬ್ಬಾರ್ ಶ್ರೀ ವೈಷ್ಣವ ಗ್ರಾಮಾಂತರ ಉಪಸಭೆ :** ಧನುರ್ಮಾಸದ ಪ್ರಯುಕ್ತ ವಿದ್ವಾನ್ ಎಂ.ಕೆ. ಶೆಲ್ವೈ ನಾರಾಯಣ ಅವರಿಂದ ಶ್ರೀ ಆಂಡಾಳ್ ವಿರಚಿತ 'ತಿರುಪ್ಪಾವೈ' ಪ್ರವಚನ, ಸ್ಥಳ: ಮಂದಿರದ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಶಶಿಧರ ಉಬ್ಬಲಗುಂಡಿ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ– ಲೇಖನ ಮತ್ತು ಪ್ರಸ್ತುತಿ: ಡಾ.ಬಿ.ಎನ್.ಮನೋರಮ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಕೆ.ಟಿ.ಉದಯಕಿರಣ್, ಪಿ.ಎಸ್.ರಂಜನಿ, ಜಿ.ಪುಷ್ಪಲತಾ. ವ್ಯಾಖ್ಯಾನ– ಡಾ. ಹೆಚ್.ಎನ್.ಮಂಜುರಾಜ್, 9.00 ನೆನಪಿನಂಗಳ: ಧ್ವನಿ ಭಂಡಾರದಿಂದ ಆಯ್ದ ಕಾರ್ಯಕ್ರಮಗಳು, 10.00 ಲಯ ಸಂಭ್ರಮ, ಪ್ರಸ್ತುತಿ –ಹೆಚ್.ಎಲ್.ಶಿವಶಂಕರಸ್ವಾಮಿ. **ಮಧ್ಯಾಹ್ನ:** 12.30 ದೇವರನಾಮ– ಪಂಡಿತ್ ವಿನಾಯಕ ತೊರವಿ, 12.45 ನಮ್ಮ ಆರೋಗ್ಯ: ಕಾರ್ನಿಯಲ್ ಟ್ರಾನ್ಸ್ ಪ್ಲಾಂಟೇಶನ್ ಕುರಿತು ಡಾ.ಪಿ.ಚಂದ್ರಕಲಾ ಅವರೊಂದಿಗೆ ಮಾತುಕತೆ, 1.20 ಭಾವಗೀತೆ–ಕೆ.ಭಾವನ 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸ ರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ–ಡಾ.ಸುಕನ್ಯಾ ಪ್ರಭಾಕರ್. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, ವಿಷಯ– ಬೆನ್ನುನೋವು ಕಾರಣ ಹಾಗೂ ಪರಿಹಾರ. ಭಾಗವಹಿಸುವವರು ಡಾ.ಶಿಲ್ಪಾ, ಪ್ರಸ್ತುತಿ–ಕೆ.ಬಿ.ಮೀನಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್ ವಾಣಿ– ವಿವಿಧ ತರಕಾರಿ ಬೆಳೆಗಳ ಬೇಸಾಯದಲ್ಲಿ ನಿರತರಾಗಿರುವ ಕೃಷಿಕ ದಂಪತಿ ಮಹದೇವಶೆಟ್ಟಿ ಮತ್ತು ನಾಗಮ್ಮ ಅವರೊಂದಿಗೆ ಸಂದರ್ಶನ. **ರಾತ್ರಿ:** 9.30 9.30 ರಾಧಾ ಜಯಲಕ್ಷ್ಮಿ – ಹಾಡುಗಾರಿಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್.ವನಂ:** ಡಾ.ಎನ್.ಕೆ.ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ.ಕಮಲರಾಮನ್‌ರವರ ಮಂದಿರ, ಡಾ.ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಮಹಾಜನ ಸಭಾ :** ತಿರುಪ್ಪಾವೈ ಕಾಲಕ್ಷೇಪ, ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ, ಸ್ಥಳ: ಶ್ರೀ ರಾಮಮಂದಿರ, ಶ್ರೀ ಕೃಷ್ಣಮೂರ್ತಿಪುರಂ, ಸಂಜೆ 6.15ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ತಿರುಪ್ಪಾವೈ ಪ್ರವಚನ, ವಿದುಷಿ ಬಿ.ಕೆ.ಸೀತಾಲಕ್ಷ್ಮೀ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಾಯಿಬಾಬಾ ಮಂದಿರ ಸಮೀಪ, ಸಂಜೆ 6.30ರಿಂದ.

■ **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ನಾಟಕೋತ್ಸವ–2022–23, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 6.45ಕ್ಕೆ.

ಸರಗೂರಲ್ಲಿ ಇಂದು

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರಗೂರು :** ಪ್ರಚಾರೋಪನ್ಯಾಸ, ಸ್ಥಳ: ಕಾಲೇಜು ಸಭಾಂಗಣ, ಸರಗೂರು, ಬೆಳಗ್ಗೆ 10 ಗಂಟೆಗೆ.

ಹೆಚ್.ಡಿ.ಕೋಟೆಯಲ್ಲಿ ಇಂದು

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಗ್ಗಡದೇವನಕೋಟೆ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು :** ದತ್ತಿ ಉಪನ್ಯಾಸ ಸಮಾರಂಭ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಗ್ಗಡದೇವನಕೋಟೆ, ಬೆಳಗ್ಗೆ 11 ಗಂಟೆಗೆ.

ಗೋಪಾಲಪುರದಲ್ಲಿಂದು, ಮೈಸೂರು ತಾಲೂಕು

■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಗ್ರಾಪಂ ಸದಸ್ಯೆ ಶ್ರೀಮತಿ ಗಾಯತ್ರಿ ಅವರಿಂದ ಧ್ವಜಾರೋಹಣ, ಸಂಜೆ 4.30ರಿಂದ ಡಾ. ಹೆಚ್.ಆರ್. ಉಮೇಶ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಶಿಕ್ಷಣ ತಜ್ಞ ರಾಜೇಗೌಡ.

ದೇಶ ವಿಭಜನೆಯ ದುರಂತದಿಂದ ಪ್ರತಿ ಭಾರತೀಯರು ಪಾಠ ಕಲಿಯಬೇಕು

ಇದು ಭೌಗೋಳಿಕವಾಗಿ ಮಾತ್ರವಲ್ಲ, ಮನಸ್ಸುಗಳ ವಿಭಜನೆಯೂ ಆಗಿದೆ


ಧರ್ಮಾತೀತವಾಗಿ ಒಟ್ಟಾಗಿ ಬದುಕಿ ಪ್ರಬಲ ಭಾರತ ಕಟ್ಟಬೇಕು ; ಚಿಂತಕ, ಲೇಖಕ ರಾಮ್ ಮಾಧವ್ ಅಭಿಮತ

ಮೈಸೂರು,ಡಿ.18(ಪಿಎಂ)– ದೇಶದ ಸ್ವಾತಂತ್ರ್ಯ ಸಂದರ್ಭದಲ್ಲಿನ ವಿಭಜನೆ ಕೇವಲ ಭೌಗೋಳಿಕ ಸ್ವರೂಪ ಹೊಂದಿಲ್ಲ. ಜೊತೆಗೆ ಇದು ಮನಸ್ಸುಗಳ ವಿಭಜನೆಯೂ ಆಗಿದೆ. ಪ್ರತಿಯೊಬ್ಬ ಭಾರತೀಯನೂ ಇದರಿಂದ ಪಾಠ ಕಲಿಯಬೇಕಿದೆ. ದೇಶದಲ್ಲಿ ಹಿಂದೂ–ಮುಸ್ಲಿಂ ಸೇರಿದಂತೆ ಯಾವುದೇ ಧರ್ಮೀಯರಾದರೂ ಭಾರತೀಯರೆಂದು ಒಟ್ಟಾಗಿ ಬದುಕಬೇಕು. ಆ ಮೂಲಕ ಅಖಂಡ ಭಾರತವನ್ನು ಪ್ರಬಲವಾಗಿ ಕಟ್ಟಬೇಕು ಎಂದು ಖ್ಯಾತ ಚಿಂತಕ, ಲೇಖಕರೂ ಆದ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಅಖಿಲ ಭಾರತ ಕಾರ್ಯಕಾರಣಿ ಸದಸ್ಯ ರಾಮ್ ಮಾಧವ್ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮಂಥನ ಮೈಸೂರು–ವೈಚಾರಿಕ ವೇದಿಕೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಅವರ (ರಾಮ್ ಮಾಧವ್) 'ವಿಭಜಿತ ಸ್ವಾತಂತ್ರ್ಯ (Partitioned Freedom)' ಆಂಗ್ಲಾ ಪುಸ್ತಕ ಬಿಡುಗಡೆ, ಉಪನ್ಯಾಸ, ಚರ್ಚೆ, ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

1947ರ ದೇಶ ವಿಭಜನೆಯು ಪ್ರಾಂತ್ಯದ ಜೊತೆಗೆ ಹೃದಯಗಳಿಗಳನ್ನೂ ವಿಭಜಿಸಿತು. ಈ ವಿಭಜನೆಯಿಂದ ಪ್ರತಿಯೊಬ್ಬ ಭಾರತೀಯನೂ ಪಾಠ ಕಲಿಯಬೇಕು. ಯಾರೂ ಈ ವಿಭಜನೆ ಬಯಸಿರಲಿಲ್ಲ. ಆದರೆ ಅದನ್ನು ತಡೆಯಲೂ ಸಾಧ್ಯವಾಗಲಿಲ್ಲ. ಇದಕ್ಕೂ ನಾಲ್ಕು ದಶಕಗಳ ಹಿಂದೆ 1905ರಲ್ಲಿ ಭಾರತದಿಂದ ಬಂಗಾಳವನ್ನು ಬ್ರಿಟಿಷರು ವಿಭಜಿಸಿದರು. ಇದರ ವಿರುದ್ಧ 'ವಂದೇ ಮಾತರಂ' ಎಂಬ ಬೃಹತ್ ಚಳವಳಿ ನಡೆಯಿತು. 1911ರಲ್ಲಿ ಬಂಗಾಳ ವಿಭಜನೆಯನ್ನು ರದ್ದುಗೊಳಿಸುವಂತೆ ಭಾರೀ ಒತ್ತಾಯ ಕೇಳಿ ಬಂದಿತ್ತು ಎಂದು ಹೇಳಿದರು.

ಬಂಗಾಳ ವಿಭಜನೆಯಾದಾಗ, ಇಡೀ ದೇಶವೇ ಅದರ ವಿರುದ್ಧ ಚಳವಳಿಯಲ್ಲಿ ತೊಡಗಿತ್ತು. ಆದರೆ 1947ರಲ್ಲಿ ಜಿನ್ನಾ ಅವರು ಪಾಕಿಸ್ತಾನ ಮತ್ತು ಭಾರತದ ವಿಭಜನೆ ಘೋಷಿಸಿದಾಗ, ಭಾರತವು ಅದರ ವಿರುದ್ಧ ಎದ್ದು ನಿಲ್ಲಲಿಲ್ಲ. ಇದರ ವಿರುದ್ಧ ದೇಶ ಏಕೆ ಎದ್ದು ನಿಲ್ಲಲಿಲ್ಲ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸದರಿ ಪುಸ್ತಕ ಈ ಎರಡೂ ವಿಭಜನೆಗಳ ಸಂದರ್ಭದಲ್ಲಿ ಆದ ಬೆಳವಣಿಗೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಲಾಲಾ ಲಜಪತ್ ರಾಯ್, ಬಾಲಗಂಗಾಧರ ತಿಲಕ್ ಮತ್ತು ಬಿಪಿನ್ ಚಂದ್ರ ಪಾಲ್ ಅವರ ನೇತೃತ್ವದಲ್ಲಿ ಬಂಗಾಳ ವಿಭಜನೆ ವಿರುದ್ಧ ಚಳವಳಿ ನಡೆಯಿತು. ಇದಕ್ಕೆ ಬ್ರಿಟಿಷರು ತಲೆಬಾಗಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಪರಿಣಾಮ 1911ರಲ್ಲಿ ಬಂಗಾಳದ ವಿಭಜನೆ ರದ್ದುಗೊಳ್ಳುವ ಮೂಲಕ ಇಡೀ ಭಾರತ ಅಖಂಡವಾಗಿ ಉಳಿಯಿತು ಎಂದು ತಿಳಿಸಿದರು.



ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಮ್ ಮಾಧವ್ ಅವರ 'ವಿಭಜಿತ ಸ್ವಾತಂತ್ರ್ಯ' ಆಂಗ್ಲ ಪುಸ್ತಕವನ್ನು 'ಮೈಸೂರು ಮಿತ್ರ ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರು (ಎಡದಿಂದ 2ನೇಯವರು) ಬಿಡುಗಡೆ ಮಾಡಿದರು. ರಾಮ್ ಮಾಧವ್ (ಎಡದಿಂದ ಮೊದಲನೆಂಯವರು) ಮತ್ತು ಸನ್ನದ್ದು ಲೆಕ್ಕಿಗ ಎ.ವಿಶ್ವನಾಥ ಅವರನ್ನು ಚಿತ್ರದಲ್ಲಿ ಕಾಣಬಹುದು.

ಗಾಂಧೀಜಿ ಮತ್ತು ಜಿನ್ನಾ: ಈ ಪುಸ್ತಕ ಗಾಂಧೀಜಿ ಮತ್ತು ಜಿನ್ನಾ, ಈ ಇಬ್ಬರು ನಾಯಕ ಮೇಲೂ ಬೆಳಕು ಚಲ್ಲಿತ್ತದೆ. ಇಬ್ಬರೂ ಗುಜರಾತ್‌ನವರು ಹಾಗೂ ವಕೀಲರು. ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಅನ್ನು ಲಕ್ನೋ ಸಮ್ಮೇಳನಕ್ಕೆ ತರಲು ಜಿನ್ನಾ ಪ್ರಮುಖ ಪಾತ್ರ ವಹಿಸಿದ್ದರು. ಆದರೆ ಖಿಲಾಫತ್ ಚಳವಳಿಯಲ್ಲಿ ಗಾಂಧೀಯವರ ಹಸ್ತಕ್ಷೇಪವನ್ನು ಉಲ್ಲೇಖಿಸಿ, ಅವರು 1920ರಂದು ಕಾಂಗ್ರೆಸ್ ತೊರೆದರು. ತೆರೆಮರೆಯಲ್ಲೇ ಇದ್ದ ಜಿನ್ನಾ 1935ರಲ್ಲಿ ಮತ್ತೆ ಮುನ್ನೆಲೆಗೆ ಬಂದರು. ನಂತರ ಭಾರತದಲ್ಲಿ ಮುಸ್ಲಿಂ ರಾಜಕೀಯದ ಚಾಂಪಿಯನ್ ಆಗಿ ಹೊರಹೊಮ್ಮಿದರು ಎಂದರು.

ಗಾಂಧಿಜಿ 1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದರು. ಮೊದಲು ಹಿಂದೂ–ಮುಸ್ಲಿಂ ಐಕ್ಯ, ನಂತರವೇ ಸ್ವಾತಂತ್ರ್ಯ ಎಂಬ ಕಲ್ಪನೆ ಅವರಲ್ಲಿತ್ತು. 1919ರಲ್ಲಿ ಗಾಂಧಿ ಖಿಲಾಫತ್ ಚಳವಳಿಯ ಅಧ್ಯಕ್ಷರಾದರು. ಇದಕ್ಕೆ ಪ್ರತಿಯಾಗಿ ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಕಾಂಗ್ರೆಸ್‌ಗೆ ಮುಸ್ಲಿಂ ಸಮುದಾಯದ ಬೆಂಬಲದ ನಿರೀಕ್ಷೆಯಲ್ಲಿದ್ದರು. ವಂದೇ ಮಾತರಂ, ರಾಷ್ಟ್ರಧ್ವಜ, ಭಜನೆ, ಭಾಷೆ ಸೇರಿದಂತೆ ಎಲ್ಲದರಲ್ಲೂ ಮುಸ್ಲಿಮರಿಗೆ ರಿಯಾಯಿತಿಗಳನ್ನು ನೀಡಿದರು. ಮುಸ್ಲಿಮರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ಕಾಂಗ್ರೆಸ್ ಒಪ್ಪಿಕೊಂಡಿತು. ಇಂತಹ ತುಷ್ಟೀಕರಣದ ಈ ಹಂತವು ಮುಸ್ಲಿಮರನ್ನು ಕಾಂಗ್ರೆಸ್ ಹತ್ತಿರ ಬರುವಂತೆ ಮಾಡಲಿಲ್ಲ. ಬದಲಿಗೆ ವಿಭಜನೆಗೆ ಕಾರಣವಾಯಿತು. ಗಾಂಧಿಯವರು ಭಾರತವನ್ನು ಅಖಂಡವಾಗಿ ಉಳಿಸಲು ಪ್ರಯತ್ನಿಸಿದರು. ಆದರೆ ಅದು ತುಂಬ ತಡವಾಗಿತ್ತು ಎಂದು ಹೇಳಿದರು.

ಗಾಂಧೀಜಿಯವರು ನಮ್ಮ ಸಾಂಸ್ಕೃತಿಕ ನೀತಿ ಹಾಗೂ ಹಿಂದೂ–ಮುಸ್ಲಿಂ ಐಕ್ಯತೆಯ ಸಂರಕ್ಷಣೆಯ ಬಗ್ಗೆ ಉತ್ತಮ ಉದ್ದೇಶಗಳನ್ನು ಹೊಂದಿದ್ದರು. ಇದರಲ್ಲಿ ಯಾವುದೇ ಸಂದೇಹ ವಿಲ್ಲ. ಆದರೆ ಅವರ ಆದರ್ಶವಾದವು ದುರಾದೃಷ್ಟವಶಾತ್ ಕೋಮು ಭಾವೋದ್ರೇಕಗಳನ್ನು ಉತ್ತೇಜಿಸಲು ಕಾರಣವಾಯಿತು. ವಿಭಜನೆಯ ಈ ಕಥೆಯು ನಮಗೆ ಎರಡು ಪ್ರಮುಖ ಸಂದೇಶಗಳನ್ನು ನೀಡುತ್ತದೆ. ಮೊದಲನೆಯದಾಗಿ ದೇಶದ ಸಮಗ್ರತೆ ಹಾಳು ಮಾಡಲು ಹೊರಟಿರುವ ಶಕ್ತಿಗಳ ಓಲೈಕೆಯನ್ನು ಎಂದೂ ಮಾಡಬಾರದು. ಎರಡನೇಯದು, 1911ರಲ್ಲಿ ಬಂಗಾಳ ವಿಭಜನೆ ರದ್ದುಗೊಳಿಸುವಲ್ಲಿ ಯಶಸ್ವಿಯಾದ ಬಗ್ಗೆ ಹಾಗೂ 1947ರ ವಿಭಜನೆ ತಡೆಯುವಲ್ಲಿ ವಿಫಲವಾದ ಬಗ್ಗೆ ಆಲೋಚಿಸಬೇಕು. ಜೊತೆಗೆ ದೇಶವು ಜಾಗರೂಕತೆಯಿಂದ ಇರಬೇಕು. ಅಲ್ಲದೆ, ದೇಶದ ಏಕತೆಗಾಗಿ ನಿರ್ದಿಷ್ಟವಾಗಿ ಯಾರನ್ನೂ ಅವಲಂಬಿಸಬಾರದು ಎಂದು ತಿಳಿಸಿದರು.

ದೇಶದ ವಿಭಜನೆಯು ಕೇವಲ ಭೂ ಪ್ರದೇಶಗಳ ವಿಭಜನೆ ಮಾತ್ರವಲ್ಲ. ಜೊತೆಗೆ ಮನಸ್ಸಗಳ ವಿಭಜನೆಯಾಗಿತ್ತು. ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಪ್ರತ್ಯೇಕವಾದ ಮತ್ತು ಕೋಮುವಾದ ಪ್ರತಿಪಾದಿಸುವ ನಾಯಕತ್ವ ತಿರಸ್ಕರಿಸಿದರೆ ಮಾತ್ರ ಅಖಂಡ ಭಾರತ ಪ್ರಬಲಗೊಳ್ಳಲಿದೆ. ಹಿಂದೂಗಳು ಮತ್ತು ಮುಸ್ಲಿಮರು ಒಟ್ಟಾಗಿ ಬದುಕಲು ಸಾಧ್ಯವಿಲ್ಲ ಎಂಬ ವಾದ ಅಪಾಯಕಾರಿ. ಒಂದು ರಾಷ್ಟ್ರೀಯತೆ ಭಾವನೆ ಪ್ರೋತ್ಸಾಹಿಸಬೇಕಿದ್ದು, ಧರ್ಮಾತೀತವಾಗಿ ಎಲ್ಲಾ 130 ಕೋಟಿ ಭಾರತೀಯರು ಒಂದು ಭಾರತೀಯ ಸಮಾಜವಾಗಿ ಬದುಕಬೇಕು ಎಂದು ಹೇಳಿದರು.

ಬಳಿಕ ಸದರಿ ಪುಸ್ತಕ ಮತ್ತು ವಿಭಜನೆಯ ವಿವಿಧ ಆಯಾಮಗಳ ಬಗ್ಗೆ ರಾಮ್ ಮಾಧವ್ ಅವರೊಂದಿಗೆ ಸನ್ನದ್ದು ಲೆಕ್ಕಿಗ ಎ.ವಿಶ್ವನಾಥ ಅವರು ಚರ್ಚೆ ನಡೆಸಿದರು. ನಂತರ ಸಂವಾದ ನಡೆಯಿತು. ಮಂಥನ ಮೈಸೂರು ವೇದಿಕೆ ಸಂಚಾಲಕಿ ಪದ್ಮಾವತಿ ಎಸ್.ಭಟ್ ಕಾರ್ಯಕ್ರಮ ನಿರೂಪಿಸಿದರು.

ವಿಭಜನೆ ತಡೆಯಲು ಸಾಧ್ಯವಾಗಲಿಲ್ಲವೇಕೆ? ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ

ಮೈಸೂರು,ಡಿ.18(ಪಿಎಂ)– ವಿಭಜಿಸಲ್ಪಟ್ಟ ಬಂಗಾಳವು ಚಳವಳಿ ಬಳಿಕ ಭಾರತದಲ್ಲಿ ಸೇರ್ಪಡೆಗೊಂಡ ನಿದರ್ಶನ ಇದ್ದಾಗ್ಯೂ 1947ರ ವಿಭಜನೆ ತಡೆಯಲು ಸಾಧ್ಯವಾಗಲಿಲ್ಲವೇಕೆ? ಎಂಬುದು ಪ್ರಶ್ನೆಯಾಗಿ ಉಳಿದಿದೆ ಎಂದು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಹೇಳಿದರು.

ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಬ್ರಿಟಿಷ್ ಆಳ್ವಿಕೆಯಲ್ಲಿ ವಿಭಜಿಸಲ್ಪಟ್ಟ ಬಂಗಾಳವು ಚಳವಳಿ ನಂತರ ದೇಶದಲ್ಲಿ ಸೇರ್ಪಡೆಯಾಯಿತು. ಇಂತಹ ನಿದರ್ಶನ ಇದ್ದಾಗ್ಯೂ 1947ರ ವಿಭಜನೆ ದುರದೃಷ್ಟಕರ. ಆಗ ಯಾವ ರೀತಿ ಸವಾಲು ಎದುರಾಗಿತ್ತು ಎಂಬುದು ನನಗೆ ತಿಳಿದಿಲ್ಲ. ಅಂದಿನ ನಮ್ಮ ದೊಡ್ಡ ನಾಯಕರು ದೇಶವನ್ನು ವಿಭಜಿಸಲು ಏಕೆ ಅವಕಾಶ ಮಾಡಿಕೊಟ್ಟರು? ಎಂದು ಪ್ರಶ್ನಿಸಿದರಲ್ಲದೆ, ಬಿಕ್ಕಟ್ಟಿನ ಸಂದರ್ಭದಲ್ಲಿ ಮೌನಕ್ಕೆ ಶರಣಾಗುವುದು ಹೇಡಿತನವಲ್ಲದೇ ಬೇರೇನೂ ಅಲ್ಲ. ಈಗ ನಾವು ವಿಭಜನೆಯನ್ನು ರದ್ದುಗೊಳಿಸಬಹುದೇ? ಬಹುಶಃ ಸಾಧ್ಯವಿಲ್ಲ. ಈ ಪ್ರಶ್ನೆಗೆ ಕಾಲ ಮಾತ್ರ ಉತ್ತರಿಸಬಲ್ಲದು ಎಂದರು.

ಹಿಂದೂ ನಾಗರಿಕತೆ ಅಸ್ತಿತ್ವ ಶಾಶ್ವತ: ಭಾರತವು ಸನಾತನ ದೇಶವಾಗಿದೆ. ಶತಮಾನಗಳಿಂದ ಎದುರಿಸಿದ ಅನೇಕ ಸವಾಲುಗಳ ನಡುವೆಯೂ ನಾವು ಭೌಗೋಳಿಕವಾಗಿ ಮೊಟಕುಗೊಳಿಸಿದ ರೀತಿಯಲ್ಲಿ ಬದುಕುತ್ತಿದ್ದೇವೆ. ಭಾರತ ವಿಭಜನೆಯಾಗಿದ್ದರೂ ನಮ್ಮ ಆತ್ಮ, ಮನಸ್ಸು ಮತ್ತು ಸಂಸ್ಕೃತಿ ಜೀವಂತವಾಗಿದೆ. ಹಿಂದೂ ಧರ್ಮದ ನಾಗರಿಕತೆ ವಿಸ್ತರಿಸುತ್ತಿದ್ದು, ಇದು ಎಂದಿಗೂ ತನ್ನ ಅಸ್ತಿತ್ವ ಕಳೆದುಕೊಳ್ಳುವುದಿಲ್ಲ ಎಂದು ತಿಳಿಸಿದರು.

ಪ್ರತಿಯೊಂದು ಸಮಾಜದಲ್ಲೂ ರಾಜಕೀಯ ಇತಿಹಾಸ ಮಾತ್ರ ಹೆಚ್ಚಾಗಿ ಗುರುತಿಸಲ್ಪಟ್ಟಿದೆ. ಆದರೆ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸ ಮೊದಾಲವೂ ಇವೆ ಎಂಬುದನ್ನು ನಾವು ಮನಗಾಣಬೇಕು. ಎಲ್ಲಾ ಸಮಾಜದಲ್ಲಿಯೂ ರಾಜಕೀಯ ಇತಿಹಾಸ ಮಹತ್ವ ಪಡೆದಿದೆ. ಭಾರತೀಯ ಇತಿಹಾಸವು ಆಳವಿಲ್ಲದ ಸಾಗರದಂತೆ ಅತ್ಯಂತ ಸಂಕೀರ್ಣವಾಗಿದೆ ಎಂದು ವಿಶ್ಲೇಷಿಸಿದರು.

ಗೆಣಸಿನ ಮೂಟೆಯೊಂದಿಗೆ ಸಾಗಿಸುತ್ತಿದ್ದ ಬೀಟೆ ನಾಟ ವಶ



ವಿರಾಜಪೇಟೆ,ಡಿ.18(ಎಂಟಿವೈ)– ಸಿಹಿ ಗೆಣಸಿನ ಮೂಟೆಗಳೊಂದಿಗೆ ಅಕ್ರಮವಾಗಿ ಬೀಟೆ ಮರಗಳನ್ನು ಸಾಗಿಸುತ್ತಿದ್ದ ವಾಹನದ ಮೇಲೆ ಅರಣ್ಯ ಸಿಬ್ಬಂದಿಗಳು ಸಿನಿಮೀಯ ಶೈಲಿಯಲ್ಲಿ ದಾಳಿ ನಡೆಸಿ, ಓರ್ವನನ್ನು ಬಂಧಿಸಿ, ಮಹೀಂದ್ರ ಪಿಕ್ ಅಪ್ ವಾಹನ ಹಾಗೂ 11 ಬೀಟೆ ನಾಟ ವಶಪಡಿಸಿಕೊಂಡಿದ್ದಾರೆ.

ವಿರಾಜಪೇಟೆ ಅರಣ್ಯ ವಲಯದ ಹೆಗ್ಗಳ ಶಾಖೆಯ ಕೊಟ್ಟೋಳಿ–ವಿರಾಜಪೇಟೆ ಮಾರ್ಗದಲ್ಲಿ ಡಿ.18ರ ಮುಂಜಾನೆ 1.30ರಲ್ಲಿ ಗೆಣಸಿನ ಮೂಟೆ ತುಂಬಿಕೊಂಡು ಹೋಗುತ್ತಿದ್ದ ಕೆಎಲ್.45, ಎ.1656 ಸಂಖ್ಯೆಯ ಪಿಕ್‌ಅಪ್ ವಾಹನ ತೆರಳುತ್ತಿತ್ತು. ಖಚಿತ ಮಾಹಿತಿ ಮೇರೆಗೆ ಅನುಮಾನಸ್ಪದವಾಗಿ ತೆರಳುತ್ತಿದ್ದ ವಾಹನವನ್ನು ಅರಣ್ಯ ಸಿಬ್ಬಂದಿಗಳ ತಂಡ ಬೆನ್ನತ್ತಿ ದಾರಿ ಮಧ್ಯೆ ತಡೆದ ಪರಿಶೀಲಿಸಿದಾಗ ಬೀಟೆ ನಾಟಗಳನ್ನು ಸಾಗಿಸುತ್ತಿರುವುದು ಪತ್ತೆಯಾಗಿದೆ. ಕೂಡಲೇ ವಾಹನವನ್ನು ವಿರಾಜಪೇಟೆ ಅರಣ್ಯ ವಿಭಾಗ ಕಚೇರಿ ಬಳಿ ತಂದು ಚಾಲಕ ಬೇತು ಗ್ರಾಮದ ನಿವಾಸಿ ಎಂ.ಎ.ಹಾರೀಶ್ ಎಂಬಾತನನ್ನು ಬಂಧಿಸಿದ್ದಾರೆ. ಪ್ರಮುಖ ಆರೋಪಿಗಳಾದ ಕೊಟ್ಟಮುಡಿ–ಹೊದವಾಡ ಗ್ರಾಮದ ಕೆ.ಯು.ಅಬ್ಬಾಸ್, ನಾಪೋಕ್ಲು ಹಳೆ ತಾಲೂಕು ಗ್ರಾಮದ ರಿಜ್ವಾನ್ ತಲೆ ಮರೆಸಿಕೊಂಡಿದ್ದಾರೆ. ಬಂಧಿತರಿಂದ 5 ಲಕ್ಷ ರೂ. ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳಲಾಗಿದೆ.

ಕೊಡಗು ವೃತ್ತದ ಸಿಎಫ್ ಬಿ.ಎನ್.ಎನ್.ಮೂರ್ತಿ, ವಿರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶಿವರಾಮ ಬಾಬು, ವೈ.ಚಕ್ರಪಾಣಿ, ಎಸಿಎಫ್ ಕೊಚ್ಚೆರ ನೆಹರು ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ಕಳ್ಳಿರ ಎಂ.ದೇವಯ್ಯ, ಡಿಆರ್‌ಎಫ್‌ಓ ದೇಯಂಡ ಸಂಜಿತ್ ಸೋಮಯ್ಯ, ಕೆ.ಆರ್.ಆನಂದ, ಎಂ.ಎಸ್.ಮೋನಿಷಾ, ಅರಣ್ಯ ರಕ್ಷಕರಾದ ಚಂದ್ರಶೇಖರ ಅಮರಗೋಳ, ಸಿ.ಅರುಣ, ಮಾಲತೇಶ ಬಡಿಗೇರ, ಚಾಲಕ ಅಶೋಕ್, ಆರ್‌ಆರ್‌ಟಿ ಸಿಬ್ಬಂದಿಗಳಾದ ನಾಚಪ್ಪ, ಪವಿತ್ರ ಕುಮಾರ್, ಲಾರೆನ್ಸ್, ವಿಕಾಸ್, ಮಹೇಶ್, ಲತೇಶ್ ಪಾಲ್ಗೊಂಡಿದ್ದರು.

ಎಲ್ಲಾ ಕ್ಷೇತ್ರಗಳಲ್ಲೂ ಮಾನವ ಹಕ್ಕು ಉಲ್ಲಂಘನೆ

ಸಾಹಿತಿ ಬನ್ನೂರು ರಾಜು ವಿಷಾದ



ಮೈಸೂರು, ಡಿ.18(ಎಂಟಿವೈ)– ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಮಾನವ ಹಕ್ಕು ಉಲ್ಲಂಘನೆಯಾಗುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ ಎಂದು ಸಾಹಿತಿ ಬನ್ನೂರು ಕೆ.ರಾಜು ವಿಷಾದಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಸಂರಕ್ಷಣಾ ಪರಿಷತ್ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ ಮಾನವ ಹಕ್ಕು ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತರರ ಬದುಕಿನ ಹಕ್ಕನ್ನು ಕಸಿಯುವುದು, ಹಿಂಸೆ ನೀಡುವುದು ಸರಿಯಲ್ಲ. ಇವುಗಳು ಮಾನವ ಹಕ್ಕುಗಳ ಉಲ್ಲಂಘನೆಯ ವ್ಯಾಪ್ತಿಯೊಳಗೆ ಬರುತ್ತವೆ. ನಾವು ಪರರ ಸ್ವಾತಂತ್ರ್ಯವನ್ನು ಗೌರವಿಸಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಮಾನವ ಹಕ್ಕು ಉಲ್ಲಂಘನೆಯಾಗುತ್ತಿರುವುದು ಅಪಾಯಕಾರಿ ಬೆಳವಣಿಗೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕೆಆರ್ ವಿಭಾಗದ ಎಸಿಪಿ ಎಸ್.ಇ.ಗಂಗಾಧರ ಸ್ವಾಮಿ ಮಾತನಾಡಿ, ನಾಗರಿಕ ಸಮಾಜದ ಸ್ವತಂತ್ರ ಬದುಕಿನಿಂದ ಪ್ರಜಾಪ್ರಭುತ್ವದ ಜೀವಂತವಾಗಿದೆ. ಈ ಹಿಂದೆ ಸತಿ ಸಹಗಮನದಂತಹ ಅನಿಷ್ಟ ಪದ್ಧತಿಯಿಂದ ಮಾನವ ಹಕ್ಕುಗಳು ಉಲ್ಲಂಘನೆಯಾಗುತ್ತಿದ್ದವು. ಆದರೀಗ ಜನರಲ್ಲಿ ಜಾಗೃತಿ ಮೂಡುತ್ತಿದೆ ಎಂದು ಅಭಿಪ್ರಾಯಪಟ್ಟರು.

ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಪ್ರತಿಯೊಬ್ಬ ಪ್ರಜೆಯೂ ಸ್ವತಂತ್ರವಾಗಿ ಜೀವಿಸುವ ಹಕ್ಕನ್ನು ಪಡೆದಿದ್ದಾನೆ. ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರುವುದು ಆಹಾರ, ವಸತಿ ಮತ್ತು ಬಟ್ಟೆ, ಇವುಗಳಿಲ್ಲದೆ ಮನುಷ್ಯನ ಜೀವನವನ್ನು ಊಹಿಸಲೂ ಅಸಾಧ್ಯ. ಈ ಮೂಲ ಸವಲತ್ತುಗಳನ್ನು ಪಡೆಯುವುದು ಪ್ರತಿಯೊಬ್ಬ ಪ್ರಜೆಯ ಜನ್ಮಸಿದ್ಧ ಹಕ್ಕಾಗಿದೆ. ಆದರೆ ಕೆಲವು ಸಂದರ್ಭಗಳಲ್ಲಿ ಮನುಷ್ಯನ ಈ ಮೂಲಭೂತ ಹಕ್ಕುಗಳನ್ನು ಧಮನಿಸುವ ಪ್ರಯತ್ನಗಳು ನಡೆಯುತ್ತವೆ. ಇದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಇಳೈ ಆಳ್ವಾರ್ ಸ್ವಾಮೀಜಿ ವಹಿಸಿದ್ದರು. ಬಿಜೆಪಿ ಮುಖಂಡ ಎಂ.ಎಸ್.ಧನಂಜಯ, ಎಸ್‌ಕೆಎಂಕೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಕೆ.ಕೆ.ವಿಶಾಲಾಕ್ಷಿ, ಪರಿಷತ್‌ನ ಅಧ್ಯಕ್ಷ ಬಾಲಕೃಷ್ಣ ಸಂಗಾಪುರ, ಮಂಗಳ ಸೂತ್ರ ಎಸ್.ಶ್ರೀನಿವಾಸ್ ಭಾರದ್ವಾಜ್ ಇನ್ನಿತರರು ಪಾಲ್ಗೊಂಡಿದ್ದರು. ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಐವರನ್ನು ಸನ್ಮಾನಿಸಲಾಯಿತು.

ಮೈಸೂರಿನಲ್ಲಿ ಎಎಸ್‌ಐ ಪುತ್ರಿ ಆತ್ಮಹತ್ಯೆ

ಮೈಸೂರು, ಡಿ.18(ಎಸ್‌ಬಿಡಿ)– ಸಹಾಯಕ ಸಬ್‌ಇನ್‌ಸ್ಪೆಕ್ಟರ್(ಎಎಸ್‌ಐ) ಪುತ್ರಿಯೊಬ್ಬರು ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಜಲಪುರಿ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ನಡೆದಿದೆ.



ವಸತಿಗೃಹದ ಸಿ.ಬ್ಲಾಕ್‌ನಲ್ಲಿ ವಾಸವಿರುವ ನಗರ ಪೊಲೀಸ್ ವಿಶೇಷ ವಿಭಾಗದ ಎಎಸ್‌ಐ ಗೋಪಿನಾಥ್ ಅವರ ಪುತ್ರಿ ಗಿರಿಜಾಲಕ್ಷ್ಮಿ(19) ಆತ್ಮಹತ್ಯೆ ಮಾಡಿಕೊಂಡಿದ್ದು, ಈಕೆ ಟೆರೇಷಿಯನ್ ಕಾಲೇಜಿನಲ್ಲಿ ಪ್ರಥಮ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದರು.

ಕಾರ್ಯ ನಿಮಿತ್ತ ಹೊರಹೋಗಿದ್ದ ಮನೆಯವರು ಸಂಜೆ ವಾಪಸ್ಸಾದಾಗ ಗಿರಿಜಾಲಕ್ಷ್ಮಿ ನೇಣು ಹಾಕಿಕೊಂಡಿರುವುದು ಗೊತ್ತಾಗಿದೆ. ಕೂಡಲೇ ಕುಣಿಕೆಯಿಂದಿಳಿಸಿ ಸಮೀಪದ ಗೋಪಾಲಗೌಡ ಆಸ್ಪತ್ರೆಗೆ ಕರೆದೊಯ್ದರಾದರೂ ಅಷ್ಟರಲ್ಲಿ ಆಕೆ ಮೃತಪಟ್ಟಿದ್ದರು ಎಂದು ಮೂಲಗಳು ತಿಳಿಸಿವೆ.

ಮೃತದೇಹವನ್ನು ಮೈಸೂರು ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿಡಲಾಗಿದ್ದು, ಸೋಮವಾರ ಬೆಳಗ್ಗೆ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಗುವುದು. ಈ ಸಂಬಂಧ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ.

ಐದು ದಿನಗಳ ಹಿಂದೆಯಷ್ಟೇ ಗೋಪಿನಾಥ್ ಅವರ ಅಣ್ಣ ಸಾವನ್ನಪ್ಪಿದ್ದು, ಇಂದು ಪುತ್ರಿಯನ್ನು ಕಳೆದುಕೊಂಡಿದ್ದಾರೆ. ಕುಟುಂಬದವರು ಹಾಗೂ ಸಂಬಂಧಿಕರ ರೋಧನೆ ಮುಗಿಲು ಮುಟ್ಟಿದೆ.

ಅಫ್ಘಾನಿಸ್ತಾನ್‌ನಲ್ಲಿ ತೈಲ ಟ್ಯಾಂಕರ್‌ಗೆ ಬೆಂಕಿ; 12 ಮಂದಿ ಸಜೀವ ದಹನ

ಕಾಬೂಲ್, ಡಿ.18– ಅಫ್ಘಾನಿಸ್ತಾನದ ಪರ್ವಾನ್ ಪ್ರಾಂತ್ಯದ ಸುರಂಗದೊಳಗೆ ತೈಲ ಟ್ಯಾಂಕರ್‌ಗೆ ಬೆಂಕಿ ಹೊತ್ತಿಕೊಂಡ ಪರಿಣಾಮ 12ಕ್ಕೂ ಹೆಚ್ಚು ಮಂದಿ ಸಜೀವದಹನವಾಗಿರುವ ದಾರುಣ ಘಟನೆ ನಡೆದಿದೆ. ಸಲಾಂಗ್ ಸುರಂಗದೊಳಗೆ ಭೀಕರ ಸ್ಫೋಟ ಸಂಭವಿಸಿತ್ತು. ನಂತರ ಬೆಂಕಿ ಹೊತ್ತಿಕೊಂಡು 12ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದರೆ, ಇನ್ನು ಹಲವು ಗಾಯಗೊಂಡಿದ್ದು ಅವರನ್ನು ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ಪ್ರಾಂತೀಯ ಆಡಳಿತದ ವಕ್ತಾರ ಹಿಕ್ಮತುಲ್ಲಾ ಶಮೀಮ್ ಕ್ಸಿನ್ಹುವಾಗೆ ತಿಳಿಸಿದರು.

ಹಸಿರು ನಮ್ಮ ಉಸಿರು

'ಮುದ್ದುರಾಮ ಪ್ರಶಸ್ತಿ' ಪ್ರದಾನ



ಮೈಸೂರು, ಡಿ.18(ಎಂಕೆ)– ನಗರದ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಮದ್ದುರಾಮ ಪ್ರತಿಷ್ಠಾನ ಉದ್ಘಾಟನೆ ಕಾರ್ಯಕ್ರಮದಲ್ಲಿ ಮೊದಲ 'ಮುದ್ದುರಾಮ ಪ್ರಶಸ್ತಿ'ಯನ್ನು ಚಿಂತಕ ಡಾ.ಗುರುರಾಜ ಕರಜಗಿ ಅವರಿಗೆ ಪ್ರದಾನ ಮಾಡಲಾಯಿತು.

ಮದ್ದುರಾಮ ಪ್ರತಿಷ್ಠಾನ ಉದ್ಘಾಟಿಸಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಬಳಿಕ ಮಾತನಾಡಿದ ಶ್ರೀಗಳು, ಗುರುರಾಜ ಕರಜಗಿ ಅವರಿಗೆ 'ಮುದ್ದುರಾಮ ಪ್ರಶಸ್ತಿ'ಯೇ ಹರಿಸಿ ಬಂದಿದೆ. ಅರ್ಹತೆ ಇದ್ದರವನ್ನು ಗುರ್ತಿಸಿ ಪ್ರಶಸ್ತಿಗಳು ನೀಡಿದರೆ, ಪ್ರಶಸ್ತಿಗಳ ಹಿರಿಮೆಯೂ ಹೆಚ್ಚಾಗುತ್ತದೆ ಎಂದು ಅಭಿಪ್ರಾಯಿಸಿದರು.

ವಿದ್ಯಾರ್ಥಿಗಳಿಗೆ ನೈತಿಕ ಹಾಗೂ ಆಧ್ಯಾತ್ಮ ಶಿಕ್ಷಣ ನೀಡಲು ಬೋಧಕರಿಗೆ ವಿಶೇಷ ಉಪನ್ಯಾಸಗಳನ್ನು ನೀಡುವ ಮೂಲಕ ಕಾರ್ಯನಿರ್ವಹಿಸುತ್ತಿದ್ದಾರೆ. ಸಾಹಿತಿ ಕೆ.ಸಿ.ಶಿವಪ್ಪ(ಕೆಸಿಎನ್) ಅವರ ಬರವಣಿಗೆ ಸಮಕಾಲಿನ ಪ್ರಜ್ಞೆಯನ್ನು ಮುಂದಿನ ಕಾಲಕ್ಕೂ ಸಾಕ್ಷಿಪ್ರಜ್ಞೆಯಾಗಿ ಉಳಿಸುವುದಾಗಿದೆ ಎಂದು ಶ್ಲಾಘಿಸಿದರು.

ಪ್ರಶಸ್ತಿ ಸ್ವೀಕರಿಸಿದ ಚಿಂತಕ ಡಾ.ಗುರುರಾಜ ಕರಜಗಿ ಮಾತನಾಡಿ, ಜೀವನದಲ್ಲಿ ಕೆಡಕಿದೆ–ನೋವಿದೆ, ಸಂತೋಷವಿದೆ–ಆನಂದವಿದೆ. ಆದರೆ ನಾವು ಈ ನೋವನ್ನು ಕಾಣುವ ಭರಾಟೆಯಲ್ಲಿ ಸಂತೋಷವನ್ನು ಮರೆಯುತ್ತಿದ್ದೇವೆ. ಒಂದೂರಲ್ಲಿ ಕಸದಗುಂಡಿಯೂ ಇದೆ. ಗುಲಾಬಿ ತೋಟವೂ ಇರುತ್ತದೆ. ಆದರೆ ಯಾಕೆ ಕಸದ ಗುಂಡಿ ಬಳಿ ನಿಂತು ಕೊಳಕು ಎನ್ನುತ್ತೀರಿ. ಎದ್ದು ಗುಲಾಬಿ ತೋಟದ ಕಡೆಗೆ ನಡೆಯಿರಿ, ಜೀವನ ಚೆನ್ನಾಗಿಸಿಕೊಳ್ಳಿ ಎನ್ನುತ್ತಾ ಕೆಸಿಎನ್ ರಚಿತ ಚೌಪದಿಗಳನ್ನು ಉಚ್ಚರಿಸಿದರು.

ಸನ್ಮಾನ: ಇದೇ ವೇಳೆ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದ ಖ್ಯಾತ ಭರತನಾಟ್ಯ ಕಲಾವಿದೆ ಡಾ.ವಸುಂಧರಾ ದೊರೆಸ್ವಾಮಿ, ಸುಗಮ ಸಂಗೀತ ಗಾಯಕಿ ಹೆಚ್.ಆರ್.ಲೀಲಾವತಿ, ಚಿಂತಕ ಶಂಕರ್ ದೇವನೂರು ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಜಾನಪದ ಗಾಯಕಿ ಶುಭ ರಾಘವೇಂದ್ರ ಮುದ್ದುರಾಮ ಚೌಪದಿಗಳನ್ನು ಹಾಡಿದರು.


ವಾಗ್ಮಿ ಹಿರೇಮಗಳೂರು ಕಣ್ಣನ್, ಶ್ರೀಮತಿ ಪರಿಮಳ ಗುರುರಾಜ ಕರಜಗಿ, ಮದ್ದುರಾಮ ಪ್ರತಿಷ್ಠಾನ ಅಧ್ಯಕ್ಷರೂ ಆದ ಸಾಹಿತಿ ಕೆ.ಸಿ.ಶಿವಪ್ಪ ಉಪಾಧ್ಯಕ್ಷ ಪ್ರೊ.ಎನ್.ಎಂ.ತಳವಾರ, ಕಾರ್ಯದರ್ಶಿ ಆರ್.ಎ.ಚೇತನ್ ರಾಮ್, ಸಹ ಕಾರ್ಯದರ್ಶಿ ಎನ್.ರವಿ ಕುಮಾರ, ಖಜಾಂಚಿ ಶಿವಕುಮಾರ ಮತ್ತಿತರರು ಉಪಸ್ಥಿತರಿದ್ದರು.

ನಟರಾಜ್ ಹುಳಿಯಾರ್ 'ಎಲ್ಲರ ಗಾಂಧಿ' 25ನೇ ಆವೃತ್ತಿ ಮರುಮುದ್ರಣ

ಗಾಂಧೀಜಿಯವರ ವಿಚಾರ ತಿಳಿದುಕೊಳ್ಳುವ ಆಸಕ್ತಿ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ

●ಕವಿಯತ್ರಿ ಸವಿತಾ ನಾಗಭೂಷಣ್ ವಿಷಾದ ●ಬಿಡುವಿನ ವೇಳೆ ಶಿಕ್ಷಕರು ಮಕ್ಕಳಿಗೆ ಗಾಂಧಿ ವಿಚಾರಧಾರೆ ತಿಳಿಸಬೇಕು

ಮೈಸೂರು, ಡಿ.18(ಎಸ್‌ಪಿಎನ್)– ಪಲ್ಲವ ಪ್ರಕಾಶನ ಪ್ರಕಟಿಸಿರುವ ಹಾಗೂ ಹಿರಿಯ ಬರಹಗಾರ ನಟರಾಜ್ ಹುಳಿಯಾರ್ ಸಂಪಾದಿಸಿರುವ 'ಎಲ್ಲರ ಗಾಂಧೀಜಿ' 25ನೇ ಆವೃತ್ತಿಯ ಮರು ಮುದ್ರಣ ಪುಸ್ತಕವನ್ನು ಕವಯತ್ರಿ ಸವಿತಾ ನಾಗಭೂಷಣ್ ಹಾಗೂ ಗಾಂಧಿವಾದಿ ಪ್ರೊ.ಜಿ.ಟಿ.ಶಿವರಾಜ್ ಶುಕ್ರವಾರ ಬಿಡುಗಡೆಗೊಳಿಸಿದರು.



ಮೈಸೂರು ಜೆಎಲ್‌ಬಿ ರಸ್ತೆಯ 'ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್' ಸಭಾಂಗಣದಲ್ಲಿ ಪಲ್ಲವ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಕವಿಯತ್ರಿ ಸವಿತಾ ನಾಗಭೂಷಣ, ದೇಶ ಮತ್ತು ರಾಜ್ಯದಲ್ಲಿ ಗಾಂಧಿ ವಿಚಾರಧಾರೆಯನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಸಂಘ–ಸಂಸ್ಥೆಗಳು ಕಾರ್ಯಪ್ರವೃತ್ತವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕೇಂದ್ರದಲ್ಲಿ ಡಾ. ಮನಮೋಹನ್ ಸಿಂಗ್ ಸರ್ಕಾರವಿದ್ದಾಗ ಅವರ ಸಚಿವ ಸಂಪುಟದ ಸಹದ್ಯೋಗಿಯೊಬ್ಬರು 80 ಲಕ್ಷ ರೂ. ಮೌಲ್ಯದ ಶೌಚಾಲಯ ಕಟ್ಟಿಸಿದ್ದು ಸುದ್ದಿಯಾಗಿತ್ತು. ಆಗ ನನಗೆ ಅನಿಸಿದ್ದು, ಇದು ಗಾಂಧೀಜಿಯವರ ತತ್ವಾದರ್ಶಗಳನ್ನು ಪ್ರತಿಪಾದಿಸುವ ಪಕ್ಷವೇ! ಎಂಬ ಪ್ರಶ್ನೆ ನನ್ನಲ್ಲಿ ಮೂಡಿತ್ತು. ಅಲ್ಲದೆ, ಸ್ವತಃ ಮನಮೋಹನ್ ಸಿಂಗ್ ಅವರೇ ಕೇಂದ್ರ ಸರ್ಕಾರದ ವತಿಯಿಂದ ಅನೇಕ ಕಲ್ಯಾಣ ಯೋಜನೆಗಳನ್ನು ಬಡವರಿಗಾಗಿ ರೂಪಿಸುತ್ತೇವೆ. ಆದರೆ, ಅದು ನೈಜ ಫಲಾನುಭವಿಗಳಿಗೆ ತಲುಪುತ್ತಿಲ್ಲ ಎಂಬ ಸಂಗತಿಯನ್ನು ಉಲ್ಲೇಖಿಸಿ, ತಿಳಿಸಿದರು.

ನಾನು ಶಾಲಾ–ಕಾಲೇಜಿನಲ್ಲಿ ಓದುತ್ತಿದ್ದಾಗ ಗಾಂಧೀಜಿ ಸೇರಿದಂತೆ ಅನೇಕ ಮಹನೀಯರ ಬಗ್ಗೆ ತಿಳಿಸುವ ಪಠ್ಯಗಳನ್ನು ಅಳವಡಿಸಲಾಗಿತ್ತು. ಆದರೆ, ಪ್ರಸ್ತುತ ಪಠ್ಯಗಳಲ್ಲಿ ಗಾಂಧೀಜಿ ಕುರಿತಾದ ಮಾಹಿತಿಗಳನ್ನು ಈಗಿನ ಸರ್ಕಾರದಲ್ಲಿ ಅಳವಡಿಸಿದ್ದರೂ ಕಡಿಮೆ ಇರಬಹುದು. ಅವರ ಹೋರಾಟದ ಜೀವನ ಕುರಿತು ಉಲ್ಲೇಖಿಸಿರಲು ಸಾಧ್ಯವಿಲ್ಲ. ಇತ್ತೀಚೆಗೆ ಇದರ ಬಗ್ಗೆ ತಿಳಿದುಕೊಳ್ಳುವ ಆಸಕ್ತಿಯನ್ನೂ ಕಳೆದುಕೊಂಡಿದ್ದೇವೆ ಎಂದು ತಿಳಿಸಿದರು.

ನಾನು ಪಿಯು ಓದುವಾಗ 'ಅಸ್ಪೃಶ್ಯತೆ' ಒಂದು ಕ್ರೌರ್ಯ ಎಂದು ತಿಳಿಯಿತು. ಆಗಿನ ಕಾಲದಲ್ಲಿ ನನಗೆ ಅಸ್ಪೃಶ್ಯತೆ ಎಂಬುದರ ಕುರಿತು ಅರಿವು ಇರಲಿಲ್ಲ. ನಾವ್ಯಾರು ಬೇರೆಯವರನ್ನು ಅಸ್ಪೃಶ್ಯರ ರೀತಿ ನೋಡುತ್ತಿರಲಿಲ್ಲ. ಆದರೆ, ನಮ್ಮ ಸುತ್ತಮುತ್ತ ಇಲ್ಲ ಎಂದ ಮಾತ್ರಕ್ಕೆ ಬೇರೆ ಕಡೆ ಇಲ್ಲ ಎಂಬ ಭಾವನೆ ನನ್ನಲ್ಲಿತ್ತು. ಆದರೆ, ಪಿಯುಸಿಯಲ್ಲಿ 'ಅಸ್ಪೃಶ್ಯತೆ' ಕುರಿತು ಓದಿದಾಗ ಅದೊಂದು 'ಕ್ರೌರ್ಯ' ಎಂದು ಗೊತ್ತಾಯಿತು. ಈ ಅಂಶ ನನಗೆ ತಿಳಿಯಲು 18 ವರ್ಷ ಬೇಕಿತ್ತಾ ಎಂದು ವ್ಯವಸ್ಥೆಯನ್ನು ಪ್ರಶ್ನಿಸಿದರು.

ಈಗಿನ ದಿನಮಾನದ ಶಾಲಾ–ಕಾಲೇಜುಗಳಲ್ಲಿ ಗಾಂಧೀಜಿ ಕುರಿತು ಸ್ಮರಿಸುವುದು ಎಂದರೆ ಅವರ ಭಾವಚಿತ್ರದ ಮುಂದೆ ಹೂಗುಚ್ಛವಿಟ್ಟು ಒಂದೂ ಎರಡೂ ಪ್ರಾರ್ಥನೆ ಸಲ್ಲಿಸುವುದು ಎಂಬಂತೆ ಪರಿಚಯವಾಗುತ್ತದೆ. ಹಾಗಾದರೆ, ಅವರ ಬಗ್ಗೆ ಯುವಜನತೆ ತಿಳಿದುಕೊಳ್ಳುವುದು ಹೇಗೆ ಎಂದು ಪ್ರಶ್ನಿಸಿದ ಅವರು, ಮೊದಲು ಇಂದಿನ ರಾಜಕಾರಣಿಗಳಿಗೆ ಗಾಂಧೀಜಿ, ಅಂಬೇಡ್ಕರ್ ಕುರಿತು ತಿಳಿಸಲು ಪ್ರಯತ್ನಿಸಿದರೆ, ಪ್ರಸ್ತುತ ಸಮೂಹದಲ್ಲಿರುವ ಸಂಕುಚಿತ ಮನಸ್ಥಿತಿ ಬೆಳೆಯುವುದಿಲ್ಲ ಎಂದು ಕಿವಿ ಮಾತು ಹೇಳಿದರಲ್ಲದೆ, ಕೊನೆಗೆ 'ಅಯ್ಯೋ ಶಿವನೆ' ಕವಿತೆ ಓದಿ ಮಾತು ಮುಗಿಸಿದರು.

ಗಾಂಧಿವಾದಿ ಪ್ರೊ.ಜಿ.ಬಿ.ಶಿವರಾಜ್ ಮಾತನಾಡಿ, ಗಾಂಧೀಜಿ ಅವರ ವಿಚಾರ ಜಗತ್ತಿನ ಎಲ್ಲಾ ಸಮಸ್ಯೆಗಳಿಗೂ ಪರಿಹಾರವಾಗಿ ಸ್ವೀಕರಿಸಬಹುದು. ಅಮೇರಿಕ ಮಾಜಿ ಅಧ್ಯಕ್ಷ ಬರಾಕ್ ಒಬಮಾ ಭಾರತಕ್ಕೆ ಭೇಟಿ ನೀಡಿ ಸಂಸತ್‌ನಲ್ಲಿ ಭಾಷಣ ಮಾಡಬೇಕು. ಗಾಂಧೀಜಿ ಕೇವಲ ಇಂಡಿಯಾಗೆ ಸೀಮಿತವಲ್ಲ. ಅವರ ವಿಚಾರಧಾರೆಗಳು ಜಗತ್ತಿನ ಎಲ್ಲಾ ರಾಷ್ಟ್ರಗಳಿಗೆ ಅವಶ್ಯಕ ಎಂದು ತಿಳಿಸಿದ್ದ ಪ್ರಸಂಗವನ್ನು ವಿವರಿಸಿದರು.

ದ್ವೇಷ, ಅಸೂಯೆ, ಸ್ವಾರ್ಥವೇ ತುಂಬಿಕೊಂಡಿರುವ ಈ ಜಗತ್ತಿಗೆ ಶಾಂತಿ, ನೆಮ್ಮದಿ ನೆಲಸಬೇಕಾದರೆ, ಗಾಂಧೀಜಿಯವರ ಅಹಿಂಸಾ ತತ್ವ ಪರಿಪಾಲನೆ ಅವಶ್ಯಕವಾಗಿ ಬೇಕಿದೆ. ಇದಕ್ಕಾಗಿಯೇ ಅನೇಕರು ವಿದ್ವಾಂಸರು ಹೀಗೆ ಹೇಳುತ್ತಾರೆ. ಗಾಂಧಿ ವಿಚಾರ ಧಾರೆಗಳಿಗೆ ಸಾವಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರಲ್ಲದೆ, ಈ ಪುಸ್ತಕ 25ನೇ ಮುದ್ರಣ ಕಂಡಿದೆ ಎಂದು ತಿಳಿಸಿದರು. ಈ ವೇಳೆ ದೇವಾನಂದ ವರಪ್ರಸಾದ್, ಆರ್.ಸದಾನಂದ ಇನ್ನಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಅಲ್ಲಾರಿ ಗಂಡಸರು ಸತ್ತೆ ಸ್ವರ್ಗದಲ್ಲಿ ಅಪ್ಸರೆಯರು ಸಿಗ್ತಾರಂತೆ ಹೌದಾ.
ಗಂಡ : ಹೌದು.
ಹೆಂಡತಿ : ಮತ್ತೆ ಹೆಂಡತಿಯರು ಸತ್ರೆ...?
ಗಂಡ : ಮಂಗ
ಹೆಂಡತಿ : ಇದೇನು ಅನ್ಯಾಯ...? ನಿಮಗೆ ಮಾತ್ರ ಇಲ್ಲೂ ಅಪ್ಸರೆ, ಅಲ್ಲೂ ಅಪ್ಸರೆ, ನಮಗೆ ಇಲ್ಲೂ ಮಂಗ, ಅಲ್ಲೂ ಮಂಗ...!

ಮೈಸೂರು ಮಿತ್ರ

ಸೋಮವಾರ, 19 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ವಿಧೇಯತೆಯಿಂದ ವಿನಯತೆ, ವಿನಯತೆಯಿಂದ ವಿದ್ಯೆ, ವಿದ್ಯೆಯಿಂದ ವಿಕಾಸ, ವಿಕಾಸದಿಂದ ವಿಶ್ವಾಸ, ವಿಶ್ವಾಸದಿಂದ ವಿಶಿಷ್ಟತೆ, ವಿಶಿಷ್ಟತೆಯಿಂದ ವಿಖ್ಯಾತಿ.

– ಶ್ರೀ ಗುರು ಪುಟ್ಟರಾಜ ಗವಾಯಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಮಾಲೆ ಕಣ್ಣಿನವರಿಗೆ ಕಾಣುವುದೆಲ್ಲಾ ಹಳದಿ.

ನಿಮ್ಮ ಪತ್ರಗಳು

ಮುಖ್ಯಮಂತ್ರಿಗಳಿಗೊಂದು ಬಹಿರಂಗ ಪತ್ರ

ಮಾನ್ಯರೆ,

ಧವಸ-ಧಾನ್ಯಗಳು ಮತ್ತು ಹಣ್ಣು-ತರಕಾರಿ ಬೆಳೆಯುವ ಹಾಗೂ ರೇಷ್ಮೆ ಸಾಕಾಣಿಕೆ, ಮೀನು ಸಾಕಾಣಿಕೆ ಮಾಡುವ ಯಾರನ್ನೇ ಕೇಳಿ, ಹೇಗಿದೆ ವ್ಯವಸಾಯ ಮತ್ತು ವ್ಯವಹಾರ ಎಂದು, ಎಲ್ಲರೂ ಹೇಳುವುದೊಂದೇ 'ಅಸಲು ಗಿಟ್ಟಲಿಲ್ಲ' ಎಂಬ ಒಂದೇ ಸಾಲಿನ ಉತ್ತರ ಬರುತ್ತದೆ.

ಪ್ರತಿಯೊಬ್ಬ ರೈತ ವ್ಯವಸಾಯ ಶುರು ಮಾಡಿದ ದಿನದಿಂದ ಕಟಾವಿನವರೆಗೆ ಕಳ್ಳಕಾಕರಿಂದ, ದನ-ಕರುಗಳಿಂದ, ಕಾಡುಪ್ರಾಣಿಗಳಿಂದ ಕಾಪಾಡಲು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಹಗಲು-ರಾತ್ರಿ ಬೆಳೆ ಕಾಯಬೇಕು. ಜೊತೆಗೆ ಕೂಲಿ ಇಲ್ಲದೆ ದಣಿವರಿಯದೆ ಕತ್ತೆಯಂತೆ ದುಡಿಯಬೇಕು. ಇಷ್ಟೆಲ್ಲಾ ದಣಿದು ದುಡಿದು ಬೆಳೆ ತೆಗೆದು ಮಾರಾಟ ಮಾಡಿದಾಗ ಸಿಗುವ ಹಣವನ್ನು ಲೆಕ್ಕ ಹಾಕಿದಾಗ, ಭೂಮಿ ಹದ ಮಾಡಲು, ಬಿತ್ತನೆ ಮಾಡಲು, ನಾಟಿ ಮಾಡಲು, ಕಳೆ ಕೀಳಲು, ಗೊಬ್ಬರ ಹಾಕಲು, ಬೆಳೆ ಕಟಾವು ಮಾಡಲು, ಮತ್ತೆ ಮಾರಾಟಕ್ಕೆ ಸಾಗಿಸಲು ಮಾಡಿದ ಒಟ್ಟಾರೆ ವೆಚ್ಚವೇ ಜಾಸ್ತಿಯಾಗಿರುತ್ತದೆ.

ಇಂತಹ ರೈತರನ್ನು ಮತ್ತೇಕೆ ವ್ಯವಸಾಯ ಮಾಡುತ್ತೀರಿ, 'ಗಾರೆ ಕೆಲಸಕ್ಕೆ ಹೋಗಬಹುದಲ್ಲವೇ?' ಎಂದರೆ ಅದಕ್ಕವರು 'ಭೂಮಿ ತಾಯಿನಾ ಪಾಳು ಬಿಡುವುದಕ್ಕಾಗುತ್ತಾ?' ಎನ್ನುತ್ತಾರೆ.

ಇವತ್ತು ಮೊಬೈಲ್, ಟಿವಿ, ಫ್ರಿಡ್ಜ್, ಸ್ಕೂಟರ್, ಕಾರುಗಳಿಗೆ ಸಾವಿರಾರು ರೂಪಾಯಿ, ಲಕ್ಷಾಂತರ ರೂಪಾಯಿ ಬೆಲೆ ಇದೆ. ಇವುಗಳಿಲ್ಲದೆ ನಾವು ಆರಾಮವಾಗಿ ಬದುಕಬಹುದು. ಆದರೂ ಇವುಗಳನ್ನು ಉತ್ಪಾದಿಸುವ ಕೈಗಾರಿಕೋದ್ಯಮಿಗಳು ಕೋಟಿಗಳ ಒಡೆಯರು. ಅದೇ ಅನ್ನ, ಆಹಾರ, ಹಾಲು ಇಲ್ಲದೆ ಕೇವಲ ಮೂರು ದಿನ ಇರಲು ಸಾಧ್ಯವಿಲ್ಲ. ವಿಪರ್ಯಾಸವೆಂದರೆ ಮೊನ್ನೆ ಆದಿಚುಂಚನಗಿರಿ ಮಠದಲ್ಲಿ ನಡೆದ ವಧು-ವರರ ಸಮಾವೇಶದಲ್ಲಿ 'ವ್ಯವಸಾಯ ಮಾಡುವ ಸಾವಿರಾರು ಯುವಕರಿಗೆ ಹುಡುಗಿಯರೇ ಸಿಗುತ್ತಿಲ್ಲ' ಎಂಬುದು.

ಅಮೇರಿಕಾ, ಆಸ್ಟ್ರೇಲಿಯಾ, ಇಸ್ರೇಲ್‌ಗಳಲ್ಲಿ ರೈತರು ಶ್ರೀಮಂತ ಉದ್ಯಮಿಗಳಂತೆ ಬದುಕುತ್ತಾರೆ. ನಮ್ಮಲ್ಲಿ ಕೃಷಿಗೊಬ್ಬ, ಸಕ್ಕರೆಗೊಬ್ಬ, ರೇಷ್ಮೆಗೊಬ್ಬ, ಮೀನುಗಾರಿಕೆಗೊಬ್ಬ, ತೋಟಗಾರಿಕೆಗೊಬ್ಬ, ಹೈನುಗಾರಿಕೆಗೊಬ್ಬ ಸಚಿವರಿದ್ದಾರೆ. ಹೀಗಿದ್ದರೂ ಸಾಲದ ಶೂಲಕ್ಕೆ ಸಿಕ್ಕಿ ಸಾಯುವ ರೈತರ ಸಂಖ್ಯೆ ಕಡಿಮೆ ಆಗಿಲ್ಲ.

ಸಂಕಷ್ಟಕ್ಕೊಳಗಾದ ಕೈಗಾರಿಕೋದ್ಯಮಗಳನ್ನು ಪುನಶ್ಚೇತನಗೊಳಿಸಲು ಧಾರಾಳವಾಗಿ ಸಹಾಯ ಧನ ನೀಡುವ ಸರ್ಕಾರಗಳು, ರೈತರ ವಿಷಯದಲ್ಲಿ ಈವರೆಗೆ ಪ್ರಾಮಾಣಿಕ ಕಳಕಳಿ ವಹಿಸಿಲ್ಲ. ಹಸಿವಿಗೆ ಅನ್ನ ಕೊಡುವ ರೈತರ ಬದುಕು ಹಸನಾಗಬೇಕು. ಗೌರವ, ಘನತೆಯಿಂದ ಬದುಕಬೇಕು. ಹಾಗೆ ಮಾಡಲು ತುರ್ತಾಗಿ ಮತ್ತು ಗಂಭೀರವಾಗಿ ಚರ್ಚೆಯಾಗಬೇಕು. ಅದಕ್ಕಾಗಿ ಪ್ರಾಮಾಣಿಕ ಬುದ್ಧಿಜೀವಿಗಳನ್ನೊಳಗೊಂಡ 'ತಜ್ಞರ ಆಯೋಗ' ರಚಿಸಿ ವಿದೇಶಗಳಲ್ಲಿನ ವೈಜ್ಞಾನಿಕ ಬೆಳವಣಿಗೆಗಳನ್ನು ಅಭ್ಯಸಿಸಿ, ಕೈಗೊಳ್ಳಬೇಕಾದ ತುರ್ತು ಕ್ರಮಗಳ ಬಗ್ಗೆ ಶೀಘ್ರ ವರದಿ ಪಡೆದು ಜಾರಿ ಮಾಡಬೇಕಾದ ಅತೀ ಜರೂರು ಇದೆ.

– ಶ್ರೀಧರ, ಎಸ್. ಕಲ್ಕುಣಿಕೆ, ಬೋಗಾದಿ, ಮೈಸೂರು.

ಸಾರ್ವಜನಿಕರ ತೆರಿಗೆ ಹಣ ಪೋಲಲ್ಲವೇ?

ಮಾನ್ಯರೆ,

ಇತ್ತೀಚೆಗೆ ಮೈಸೂರಿನಲ್ಲಿ ಬಸ್ ತಂಗುದಾಣಗಳ ನೆಲಸಮ ಪ್ರವೃತ್ತಿ ಆರಂಭವಾಗಿದೆ. ಅಶೋಕ ವೃತ್ತದ ಬಳಿ ಬುದ್ಧವಿಹಾರ ಪಕ್ಕದ ಸುಸಜ್ಜಿತ ಬಸ್ ತಂಗುದಾಣ ನೆಲಸಮ ಮಾಡಿ ವರ್ಷವೇ ಆಗಿದೆ. ಮೊನ್ನೆ ಕೆಆರ್‌ಎಸ್ ರಸ್ತೆಯ ಮಂಟಿ ಬಳಿ ಆಂಜನೇಯಸ್ವಾಮಿ ದೇವಸ್ಥಾನ ಪಕ್ಕ ಹಾಗೂ ಲಕ್ಷ್ಮೀ ಟಾಕೀಸ್ ಪಕ್ಕ ಚಾಮರಾಜ ಜೋಡಿ ರಸ್ತೆಯ ಸುಸಜ್ಜಿತ ಸಾರ್ವಜನಿಕರಿಗೆ ಅತ್ಯಗತ್ಯವಾದ ಬಸ್ ತಂಗುದಾಣಗಳನ್ನು ರಾತ್ರೋರಾತ್ರಿ ನೆಲಸಮ ಮಾಡಲಾಗಿದೆ. ಒಡೆಯುವುದು ಏಕೆ? ನಿರ್ಮಿಸುವುದು ಏಕೆ? ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಬೇಕು. ಬಸ್ ತಂಗುದಾಣಗಳನ್ನು ರಕ್ಷಿಸಬೇಕಾಗಿದೆ.

– ಶಾಲಾ ವಿದ್ಯಾರ್ಥಿಗಳು, ಕಾರ್ಮಿಕರು, ಹಿರಿಯ ನಾಗರಿಕರು, ಮೈಸೂರು.

ಸಾರಿಗೆ ಬಸ್ ಬ್ರೇಕ್ ಶಬ್ದದಿಂದ ಕಿರಿಕಿರಿ!

ಮಾನ್ಯರೇ,

ಮೈಸೂರು ನಗರ ಬಸ್ ನಿಲ್ದಾಣದಿಂದ ಬೋಗಾದಿ 2ನೇ ಹಂತಕ್ಕೆ ಹೊರಡುವ ರೂಟ್ ನಂ.51-ಎ (ಕೆಎ-09 ಎಫ್ 4203) ಬಸ್ಸು ತುಂಬಾ ಹಳೆಯದಾಗಿದ್ದು,



ಬಸ್ಸಿನ ಚಾಲಕ ಬ್ರೇಕ್ ಹಾಕಿದರೆ ಫ್ಯಾಕ್ಟರಿಯಲ್ಲಿ ಸೈರನ್ ಶಬ್ದ ಬರುವ ಹಾಗೆ ಬಂದು ಪ್ರಯಾಣಿಕರಿಗೆ ತುಂಬಾ ಕಿರಿಕಿರಿ ಉಂಟಾಗುತ್ತಿದೆ. ಈ ಕರ್ಕಶ ಶಬ್ದ ಬಹುಶಃ ಹಿಂದಿನ ಬಸ್ ನಿಲ್ದಾಣದವರೆಗೂ ಕೇಳಿಸುತ್ತದೆ. ನಗರ ಸಾರಿಗೆ ಇಲಾಖೆ ಅಧಿಕಾರಿಗಳು ಇಂತಹ ಹಳೆಯ ಬಸ್ಸುಗಳನ್ನು ಸ್ಕ್ರ್ಯಾಪ್ ಮಾಡಬೇಕು. ಇಂತಹ ಹಳೆಯದಾದ ಸಾಕಷ್ಟು ಬಸ್ಸುಗಳು ನಗರ ಬಸ್ ನಿಲ್ದಾಣದಲ್ಲಿ ಕಂಡು ಬರುತ್ತದೆ. ಕೆಲವು ಬಸ್ಸುಗಳಲ್ಲಿ ಪ್ರಯಾಣಿಕರು ಹಿಡಿದುಕೊಳ್ಳಲು ಕಂಬಿಗಳೇ ಇರುವುದಿಲ್ಲ. ಜೊತೆಗೆ ರಸ್ತೆಗಳು ಸಹ ಹಳ್ಳ ಕೊಳ್ಳದಿಂದ ಕೂಡಿದ್ದು, ಈ ಬ್ರೇಕಿನ ಶಬ್ದ ಮತ್ತಷ್ಟು ಮುಜುಗರ ಎನಿಸುತ್ತದೆ. ದಯವಿಟ್ಟು ಇದಕ್ಕೆ ಸಂಬಂಧಪಟ್ಟ ರಸ್ತೆ ಸಾರಿಗೆ ಅಧಿಕಾರಿಗಳು ಇನ್ನು ಮುಂದಾದರೂ ಹಳೆಯ ಬಸ್ಸುಗಳಿಗೆ ವಿದಾಯ ಹೇಳಿ ಹೊಸ ಬಸ್ಸುಗಳಿಗೆ ಸ್ವಾಗತ ಹೇಳುತ್ತಾರೆ ಎಂದು ಆಶಿಸೋಣವೇ?

-ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು.

ವಿಧಾನಸಭಾ ಚುನಾವಣೆ ಜೊತೆ ಜಿಪಂ, ತಾಪಂಗೂ ಚುನಾವಣೆ ನಡೆಸಿ

ಮಾನ್ಯರೆ,

ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಚುನಾವಣೆ ನಡೆಸಲು ರಾಜ್ಯ ಸರ್ಕಾರ ಒಂದಿಲ್ಲೊಂದು ಕಾರಣ ಹೇಳಿ ವಿಳಂಬ ಮಾಡುತ್ತಿರುವುದಕ್ಕೆ ರಾಜ್ಯ ಹೈಕೋರ್ಟ್ ಐದು ಲಕ್ಷ ರೂಪಾಯಿ ದಂಡ ವಿಧಿಸುವ ಮೂಲಕ ರಾಜ್ಯ ಸರ್ಕಾರಕ್ಕೆ ಚಾಟಿ ಬೀಸಿದೆ.

ಹೇಗೂ, ಮುಂದಿನ ವರ್ಷದ ಏಪ್ರಿಲ್/ಮೇ ತಿಂಗಳಿನಲ್ಲಿ ರಾಜ್ಯ ವಿಧಾನಸಭಾ ಚುನಾವಣೆ ನಡೆಯುವುದರಿಂದ, ಈ ಅಸೆಂಬ್ಲಿ ಚುನಾವಣೆ ಜೊತೆಯಲ್ಲಿ ಜಿಪಂ, ತಾಪಂ ಚುನಾವಣೆ ಮಾಡುವುದರಿಂದ ರಾಜ್ಯ ಸರ್ಕಾರಕ್ಕೆ ಖರ್ಚು ಕಡಿಮೆಯಾಗಬಹುದು. ಚುನಾವಣಾಧಿಕಾರಿಗಳಿಗೆ ಸಮಯ ಉಳಿತಾಯವಾಗುತ್ತದೆ. ಅಲ್ಲದೆ, ಮತದಾರರು ಪದೇ ಪದೆ ಮತಗಟ್ಟೆಗೆ ಹೋಗುವುದು ತಪ್ಪುತ್ತದೆ. ಹಾಗೂ ರಾಜಕಾರಣಿಗಳು ಮತದಾರರ ಬಳಿ ಹೋಗಿ ಸುಳ್ಳು ಆಶ್ವಾಸನೆ ಕೊಡುವುದರಿಂದ ತಪ್ಪಿಸಿಕೊಳ್ಳಬಹುದು. ಈ ಬಗ್ಗೆ ಚುನಾವಣಾ ಆಯೋಗ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು.

– ಬೂಕನಕೆರೆ ವಿಜೇಂದ್ರ, ಮೈಸೂರು



ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ,

ಇತಿಹಾಸದ ಪುಟಗಳು


ಶ್ರೇಷ್ಠ ಅನುಭಾವಿ ಸಂತರು

ಮೊದಲನೆಯವರೇ, ಶಿಶುನಾಳ ಶರೀಫರು. ಇವರು ಶಿಗ್ಗಾಂವಿ ತಾಲೂಕಿನ ಶಿಶುವಿನಾಳ ಎಂಬ ಹಳ್ಳಿಯಲ್ಲಿ 7-3-1819ರಂದು ಜನಿಸಿದರು. ಕನ್ನಡದ ಮುಲ್ಕೀ (ಬಹುಶಃ ಈಗಿನ ಮಿಡಲ್ ಸ್ಕೂಲ್)ವರೆಗೆ ಓದಿದ ಇವರು, ಸ್ವಲ್ಪ ಕಾಲ ಶಿಶುವಿನಾಳ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಇವರ ಮನಸ್ಸು ಆಧ್ಯಾತ್ಮದ ಕಡೆಗೆ ತಿರುಗಿದ್ದುದರಿಂದ, ಶಿಕ್ಷಕರ ಕೆಲಸವನ್ನು ಬಿಟ್ಟು, ತಮ್ಮನ್ನು ಆಧ್ಯಾತ್ಮಕ್ಕೆ ಸಮರ್ಪಿಸಿಕೊಂಡರು.

ಶಿಶುನಾಳರು ಚಿಕ್ಕಂದಿನಿಂದಲೇ ಕಲಾವಿದರಾಗಿದ್ದವರು. ಹಳ್ಳಿಯ ಜಾತ್ರೆ ಹಾಗೂ ಉತ್ಸವಗಳಲ್ಲಿ ಶರಣರ ವಚನಗಳನ್ನು ಮತ್ತು ಅನುಭಾವ ಪದಗಳನ್ನೂ ಹಾಡುತ್ತಾ, ನಾಟಕಗಳಲ್ಲಿ ವಿವಿಧ ಪಾತ್ರಗಳನ್ನು ಮಾಡುತ್ತ ಎಲ್ಲರ ಮೆಚ್ಚುಗೆಯನ್ನು ಗಳಿಸಿದರು. ಮೊಹರಂ ಸಮಯದಲ್ಲಿ, ಅದಕ್ಕೆ ತಕ್ಕಂತಹ ಪದ್ಯಗಳನ್ನು ಬರೆದರು. ಶರೀಫರು ಹತ್ತಾರು ಲಾವಣಿಗಳನ್ನು ತಾವೇ ಬರೆದು, ಅವುಗಳನ್ನು ಬೇರೆ ಊರುಗಳಲ್ಲಿ ಹಾಡಿದರು. ಶರೀಫರು ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮರೆಂದೆನಿಸಿದರು.

ಕಳಸದ ಗುರುಗೋವಿಂದ ಭಟ್ಟರು, ಅಂಕಲಗಿಯ ಅಡವಿ ಸ್ವಾಮಿಗಳು, ಗರಗದ ಮಡಿವಾಳಪ್ಪನವರು, ನವಿಲುಗುಂದದ ನಾಗಲಿಂಗಪ್ಪನವರು, ಹುಬ್ಬಳ್ಳಿಯ ಸಿದ್ಧಾರೂಢಸ್ವಾಮಿಗಳು ಮುಂತಾದ ಸತ್ಪುರುಷರಿಂದ ಹಾಗೂ ಅವರೆಲ್ಲರ ಸಾನ್ನಿಧ್ಯದಿಂದ ಶರೀಫರು ಅನುಭಾವಿ ಸಿದ್ಧಾಂತವನ್ನು ರೂಢಿಸಿಕೊಂಡರು. ಕನ್ನಡ ನಾಡಿನ ಮುಖ್ಯ ಗುಣವಾದ ಸರ್ವಧರ್ಮಗಳನ್ನೂ ಭೇದವಿಲ್ಲದೆ ನೋಡುವ ತಮ್ಮ ಪದ್ಯಗಳಲ್ಲಿ ಸೇರಿಸಿಕೊಂಡು ನೂರಾರು ಪದ್ಯಗಳನ್ನು ಬರೆದರು. ಇದರಿಂದ ಶರೀಫರು ಜನಪ್ರಿಯರಾದುದು ಮಾತ್ರವಲ್ಲದೆ, ಎಲ್ಲರೂ ಶರೀಫರು ರಚಿಸಿದ ಪದಗಳನ್ನು ಹಾಡಲು ಆರಂಭಿಸಿದರು. ಈ ಪದ್ಯಗಳಲ್ಲಿ ದಿನನಿತ್ಯದ ಉಪಯೋಗದ ವಸ್ತುಗಳು, ಹಳ್ಳಿಯ ಜೀವನ, ಪಶುಗಳು ಮತ್ತು ಪಕ್ಷಿಗಳು ಮುಂತಾದವುಗಳನ್ನು ಸೇರಿಸಿಕೊಂಡರು. ಶರೀಫರು ತಮ್ಮ ಜೀವಿತ ಅವಧಿಯಲ್ಲಿ ಆಧ್ಯಾತ್ಮಿಕ ಸತ್ವವನ್ನು ಆಡುವ ಭಾಷೆಯಲ್ಲಿ ಬರೆದಿದ್ದರಿಂದ ಪ್ರತಿಯೊಬ್ಬರಿಗೂ ಅರ್ಥವಾಗಲು ಅನುಕೂಲವಾಯಿತು. ಹತ್ತಾರು ಬೋಧನೆಗಳಲ್ಲಿ, ಬೋಧನೆಗಳೆಲ್ಲವೂ ಒಂದೇ ತತ್ವವನ್ನು ಕುರಿತಾದದ್ದು. ಕೆಲವರು ಆ ತತ್ವವನ್ನು ಶಿವ ಎನ್ನುತ್ತಾರೆ. ಮತ್ತೆ ಕೆಲವರು ವಿಷ್ಣು ಎನ್ನಬಹುದು, ಇನ್ನೂ ಕೆಲವರು ಗಿಡ ಹಾಗೂ ಹೂವು ಎನ್ನಬಹುದು. ಈ ಎಲ್ಲವುಗಳಲ್ಲಿಯೂ ಇರುವ ದೇವರು ಒಬ್ಬನೇ ಎನ್ನುವುದನ್ನು ಎಲ್ಲರೂ ಅರಿಯಬೇಕು. ಹೀಗಾಗಿ ಕೆಲವರು ನಮ್ಮ ದೇವರೇ ಸರ್ವಶ್ರೇಷ್ಠ ಎಂದು ವಾದಿಸುವುದು ಹಾಸ್ಯಾಸ್ಪದ ಮಾತ್ರವಲ್ಲದೆ, ಜನಗಳನ್ನು ತಪ್ಪಿನ ಕಡೆಗೆ ಕೊಂಡೊಯ್ಯುತ್ತದೆ. ಶರೀಫರ ದೃಷ್ಟಿಯಲ್ಲಿ ಸನಾತನ ಧರ್ಮ ಪ್ರತಿಪಾದಿಸುವ ಬ್ರಹ್ಮತತ್ವ ಹಾಗೂ ಸಾಧುವಿನ ತತ್ವ ಇವೆಲ್ಲವೂ ಭಿನ್ನವಾಗಿ ಕಂಡರೂ, ಇವು ಪ್ರತಿಪಾದಿಸುವ ತತ್ವಗಳು ಒಂದೇ ಎಂದು ಶರೀಫದರು ಬೋಧಿಸಿದರು. ಈ ದೃಷ್ಟಿಯಿಂದ ಶರೀಫರು ಹಿಂದೂ-ಮುಸ್ಲಿಂ ಬಾಂಧವ್ಯದ ದೃಷ್ಟಿಗೆ ಉತ್ತಮ ಉದಾಹರಣೆಯಾಗಿದ್ದರು. ಶರೀಫರ ಬೋಧನೆಗಳನ್ನು ಗಮನಿಸಿದರೆ, ಇವರು ಮಹಾತ್ಮ ಕಬೀರರಂತೆ ಉತ್ತರ ಭಾರತದ ಜನಗಳ ಮನಸ್ಸನ್ನು ಗೆದ್ದರು. ಇದರಿಂದ ಉತ್ತರ ಭಾರತದಲ್ಲೂ ಅಭಿಮಾನಿಗಳ ಒಂದು ಗುಂಪು ಬೆಳೆಯಿತು.

ಇವರ ಬೋಧನೆಗಳು ಹೆಚ್ಚಿನ ಮಟ್ಟಿಗೆ ಹಳ್ಳಿಗಳಲ್ಲಿ ಇದ್ದುದರಿಂದ ಶರೀಫರು ಜನಪದ ಭಾಷೆಯನ್ನು ಬಳಸಲು ಆರಂಭಿಸಿದರು. ಜನಪದ ಭಾಷೆಯ ಸೊಗಡು ಹಾಗೂ ಲಯ, ಇವುಗಳಿಂದ ಶರೀಫರು ಜನಗಳಿಗೆ ಹತ್ತಿರವಾದರು. ಈ ರೀತಿ ಜನಗಳಿಗೆ ಬೋಧನೆ ಮಾಡುವುದಕ್ಕೋಸ್ಕರ, ಇವರು ತಮ್ಮ ಮನೆಯ ಹತ್ತಿರದಲ್ಲಿ ಕುಳಿತುಕೊಳ್ಳುತ್ತಿದ್ದ ಕಟ್ಟೆಯು ಇಂದಿಗೂ ಇದೆ. ಇದು ಬೋಧಪೀಠ ಎಂಬುದಾಗಿ ಪೂಜಿಸಲ್ಪಡುತ್ತದೆ. ಅನುಭಾವೀ ಸಂತ ಶಿಶುನಾಳ ಶರೀಫರು 7.3.1889 ರಂದು ನಿಧನರಾದರು.



ಸಂತ ಶಿಶುನಾಳ ಶರೀಫ

ಶರೀಫರ ಗೀತೆಗಳನ್ನು ಅಮರವಾಗಿ ಮಾಡಿರುವುದೆಂದರೆ ಸಿ.ಅಶ್ವಥ್, ಶಿವಮೊಗ್ಗ ಸುಬ್ಬಣ್ಣ, ರತ್ನಮಾಲಾ ಪ್ರಕಾಶ್ ಅವರು ಹಾಡಿರುವ ಧ್ವನಿಸುರುಳಿಗಳು ಕರ್ನಾಟಕದಲ್ಲಿ ಮನೆ ಮಾತಾಗಿವೆ. ಶಿಶುನಾಳ ಶರೀಫರ ಸಮಗ್ರ ಗೀತೆಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ಶರೀಫರ ಸಮಗ್ರ ಗೀತ ಸಂಕಲನವನ್ನು ಪ್ರಕಟಿಸಿದ್ದಾರೆ.

ಈಗ ಶ್ರೀಪಾದರಾಜರನ್ನು ಅಧ್ಯಯನ ಮಾಡಬಹುದು. ಇವರು 1450 ರಲ್ಲಿ ಜನಿಸಿದರು. ಇವರ ಪೂರ್ವಾಶ್ರಮದ ಹೆಸರು ಲಕ್ಷ್ಮೀನಾರಾಯಣ. ಇವರ ತಂದೆ ಶೇಷಗಿರಿ ಆಚಾರ್ಯ, ತಾಯಿ ಗಿರಿಯಮ್ಮ. ಶ್ರೀಪಾದರಾಜರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣದ ಸಮೀಪದ ಅಬ್ಬೂರಿನವರು. ಒಮ್ಮೆ ಸ್ವರ್ಣವರ್ಣತೀರ್ಥರೆಂಬ ಮಠಾಧಿಪತಿಗಳು, ಅಬ್ಬೂರಿನ ಮಠಾಧಿಪತಿಗಳಾಗಿದ್ದ ಪುರುಷೋತ್ತಮ ತೀರ್ಥರ ಸಂದರ್ಶನಕ್ಕಾಗಿ ಬಂದಾಗ, ಬಾಲಕ ಲಕ್ಷ್ಮೀನಾರಾಯಣನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ನಂತರ ಲಕ್ಷ್ಮೀನಾರಾಯಣನನ್ನು ಶ್ರೀರಂಗಕ್ಕೆ ಕರೆತಂದು, ಲಕ್ಷ್ಮೀನಾರಾಯಣನಿಗೆ ವಿದ್ಯಾಭ್ಯಾಸವನ್ನು ಕೊಡಿಸಿದರು. ವಿದ್ಯಾಭ್ಯಾಸವು ಮುಗಿದ ನಂತರ ಸ್ವರ್ಣವರ್ಣತೀರ್ಥರೇ ಲಕ್ಷ್ಮೀನಾರಾಯಣನಿಗೆ ಸನ್ಯಾಸ ದೀಕ್ಷೆಯನ್ನು ಕೊಟ್ಟು, ಇವರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ನಿರ್ಧರಿಸಿದರು. ರಾಯರ ಮಠದ ಪರಂಪರೆಗೆ ಸೇರಿದ ವಿಭುದೇಂದ್ರ ತೀರ್ಥರಲ್ಲಿ ಲಕ್ಷ್ಮೀನಾರಾಯಣನ ವೇದಾಂತ ವ್ಯಾಸಂಗ ನಡೆಯಿತು. ಈ ಬಾಲಕನ ವಿದ್ವತ್ತನ್ನು ಪರೀಕ್ಷಿಸುವುದಕ್ಕಾಗಿ ಅಂದಿನ ಉತ್ತರಾಧಿ ಮಠದ ರಘುನಾಥ ತೀರ್ಥರು ವಿದ್ವತ್ ಸಭೆಯನ್ನು ಏರ್ಪಡಿಸಿ ಲಕ್ಷ್ಮೀನಾರಾಯಣನ ಪಾಂಡಿತ್ಯವನ್ನು ಮೆಚ್ಚಿಕೊಂಡು, ಅವನನ್ನು ಶ್ರೀಪಾದರಾಜರೆಂದು ಕರೆದು ಆಶೀರ್ವದಿಸಿದರು. ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಬಂದ ಶ್ರೀಪಾದರಾಜರು, ಸ್ವರ್ಣವರ್ಣರು ಬೃಂದಾವನಸ್ಥರಾದ ಬಳಿಕ, ಮಠದ ಶಿಷ್ಯರೆಲ್ಲರೂ ಸೇರಿ ರಘುನಾಥತೀರ್ಥರನ್ನೇ ಶ್ರೀಮಠದ ಸಾರಥ್ಯವನ್ನು ವಹಿಸಿಕೊಳ್ಳಬೇಕೆಂದು ಪ್ರಾರ್ಥಿಸಿದರು.

ರಘುನಾಥ ತೀರ್ಥರು ಧರ್ಮ ಪ್ರವಚನೆಯ ಯಾತ್ರೆಯನ್ನು ಕೈಗೊಂಡು, ಇವರು ಕೋಲಾರ ಜಿಲ್ಲೆಯ ಮುಳಬಾಗಿಲಿಗೆ ಬಂದು ಅಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಹಾಗೂ ಅದನ್ನು ದ್ವೈತ ಸಿದ್ಧಾಂತದ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡರು.

ಶ್ರೀಪಾದರಾಜರು ಸಂಸ್ಕೃತ ಮತ್ತು ಕನ್ನಡ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದು, ರಂಗವಿಠಲ ಎಂಬ ಅಂಕಿತರಲ್ಲಿ, ಕನ್ನಡದಲ್ಲಿ ಉಗಾಭೋಗ, ಕೀರ್ತನೆ ಮತ್ತು ಸುಳಾದಿಗಳನ್ನು ರಚಿಸಿದ್ದಾರೆ. ಶ್ರೀಪಾದರಾಜರು ಸಂಸ್ಕೃತದಲ್ಲಿ ವಾಗ್ವಜ್ರವೆಂಬ ಕೃತಿಯನ್ನು ರಚಿಸಿದ್ದಾರೆ. ಇದು 3500 ಶ್ಲೋಕಗಳುಳ್ಳ ವ್ಯಾಖ್ಯಾನ ಗ್ರಂಥ. ಇದರಲ್ಲಿ ಕಷ್ಟವಾದ ವಿಷಯಗಳನ್ನು ಎಲ್ಲರಿಗೂ ಅರ್ಥವಾಗುವಂತೆ ಶ್ರೀಪಾದರಾಜರು ಬರೆದಿದ್ದಾರೆ. ಶ್ರೀಪಾದರಾಜರ 82 ಕೀರ್ತನೆಗಳು, 3 ಸುಳಾದಿಗಳು 15 ಉಗಾಭೋಗಗಳು ಮತ್ತು ಒಂದು ದಂಡಕವೂ ಸೇರಿವೆ.

ಈ ಗ್ರಂಥಗಳಲ್ಲಿ ಆತ್ಮ ಶೋಧನೆಯನ್ನೊಳಗೊಂಡ ಹಾಗೂ ದ್ವೈತ ಪ್ರತಿಪಾದಕ, ದೈವಭಕ್ತಿ ನಿರೂಪಣೆ

> ಶರೀಫರ ಗೀತೆಗಳನ್ನು ಅಮರವಾಗಿ ಮಾಡಿರುವುದೆಂದರೆ ಸಿ.ಅಶ್ವಥ್, ಶಿವಮೊಗ್ಗ ಸುಬ್ಬಣ್ಣ, ರತ್ನಮಾಲಾ ಪ್ರಕಾಶ್ ಅವರು ಹಾಡಿರುವ ಧ್ವನಿಸುರುಳಿಗಳು ಕರ್ನಾಟಕದಲ್ಲಿ ಮನೆ ಮಾತಾಗಿವೆ. ಶಿಶುನಾಳ ಶರೀಫರ ಸಮಗ್ರ ಗೀತೆಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ಶರೀಫರ ಸಮಗ್ರ ಗೀತ ಸಂಕಲನವನ್ನು ಪ್ರಕಟಿಸಿದ್ದಾರೆ.

ಮತ್ತು ನೀತಿ ಬೋಧಾತ್ಮಕ ಕೃತಿಗಳು ಎಂದು ವಿಂಗಡಿಸಬಹುದು. ಒಬ್ಬ ಭಕ್ತನು ಭಗವಂತನ ಅನುಗ್ರಹಕ್ಕಾಗಿ ನಾನಾ ರೀತಿಯಲ್ಲಿ ಹಂಬಲಿಸುತ್ತಿರುವುದನ್ನು ಕಾಣಬಹುದು. ಶ್ರೀಪಾದರಾಜರು ಶ್ರೀಹರಿಯನ್ನು ಕುರಿತ ಭಕ್ತಿ ಮಧುರ, ಸಖ್ಯ, ವಾತ್ಸಲ್ಯ, ದಾಸ, ಶಾಂತ ಎಂಬ ಪಂಚ ವಿಧಗಳಲ್ಲಿ ಕಾಣುತ್ತೇವೆ. ಶ್ರೀಪಾದ ರಾಜರು ಶ್ರೀಕೃಷ್ಣನನ್ನು, ಮಗು ಎಂದು ಭಾವಿಸಿ 'ಪೋಪು ಹೋಗೋಣ ಬಾರೋ ರಂಗ' ಎಂದು ಹೇಳುವಾಗ, ಎಲ್ಲಾಡಿ ಬಂದ್ಯೋ ಎನ್ನ ರಂಗಯ್ಯಾನೀ' ಎಲ್ಲಾಡಿ ಬಂದ್ಯೋ ಎನ್ನ ಕಣ್ಣ ಮುಂದಾಡದೆ' ಎಂದು ಕೇಳುವಾಗ ಮಗುವನ್ನು ಕುರಿತ ತಾಯಿಯ ತಳಮಳ ವ್ಯಕ್ತವಾಗಿದೆ. ಮಧುರ ಭಾವನದ ಕೀರ್ತನೆಯಲ್ಲಿ ಗೋಪಿಕಾ ಸ್ತ್ರೀಯರ ಚಿತ್ರಣ ಸುಂದರವಾಗಿ ಮೂಡಿಬಂದಿದೆ.

ಸಂಸಾರದ ಗೋಪಿಯರ ವಿರಹ ಭಾವನೆಗಳು ಶ್ರೀಪಾದರ ಸುಳಾದಿಯ ವಸ್ತುಗಳಾದರೆ, ಭಕ್ತಿ ಮತ್ತು ಭಕ್ತರ ಶ್ರೇಷ್ಠತೆಯನ್ನು ಇವರ ಉಗಾಭೋಗಗಳು ಬಿಂಬಿಸುತ್ತವೆ. 'ಮಾನನಿಧಿ ಶ್ರೀಕೃಷ್ಣ ಮಧುರೆಗೈದುವನಂತೆ ಏನು ಪಥವಮ್ಮ' ಎಂದು ಪ್ರಾರಂಭವಾಗಿ, ಹಬ್ಬಕ್ಕಾಗಿ ಶ್ರೀಕೃಷ್ಣನು ಮಧುರೆಗೆ ಹೋಗುವ ಸುದ್ದಿಯನ್ನು ಕೇಳಿದ ಗೋಪಿಯರ ಕಳವಳ ಹಾಗೂ ಆತಂಕಗಳನ್ನು ಶ್ರೀಪಾದರಾಜರು ಪಲ್ಲವಿ, ಅನುಪಲ್ಲವಿ, ಮೂರು ಪದ್ಯಗಳು, ಒಂದು ಶ್ಲೋಕ, ಒಂದು ಪದ್ಯ-ಒಟ್ಟು ಹನ್ನೆರಡು ಶ್ಲೋಕಗಳಲ್ಲಿ ಬರೆದಿದ್ದಾರೆ.

ಶ್ರೀಪಾದರಾಜರ ಮುಖ್ಯ ಕೊಡುಗೆಯೇ ದಾಸ ಸಾಹಿತ್ಯಕ್ಕೆ ನೀಡಿದ ದಂಡಕದ ರಚನೆ ಈ ಎಲ್ಲವೂ ಸಂಗೀತದ ತಳಹದಿಯ ಮೇಲೆ ರಚಿತವಾಗಿವೆ. ಈ ಕೀರ್ತನೆಗಳು ತಾಳ ಹಾಗೂ ರಾಗ ಸಹಿತವಾದವು. ಶ್ರೀಪಾದರಾಜರ ಸರಳ ಭಾಷೆಯು ಎಲ್ಲರ ಮನವನ್ನೂ ಮುಟ್ಟುತ್ತವೆ. ಶ್ರೀಪಾದರಾಜರ ಭ್ರಮರ ಗೀತೆಯು ರಗಳೆಯ ರೀತಿಯಲ್ಲಿ ರಚಿತವಾಗಿದ್ದು ಪಲ್ಲವಿ, ಅನುಪಲ್ಲವಿ ಮತ್ತು ಒಂಬತ್ತು ಚರಣಗಳಿಂದ ಕೂಡಿವೆ.

ಸಾಹಿತ್ಯ ದೃಷ್ಟಿಯಿಂದ ಹರಿದಾಸರಲ್ಲಿ ಮುಖ್ಯರಾದ ಶ್ರೀಪಾದರಾಜರ ಕೃತಿ ರಚನೆಯು ಮುಂದಿನ ಪೀಳಿಗೆಯವರಿಗೆ ಮಾರ್ಗದರ್ಶನವನ್ನು ಮಾಡಿತು. ಅಷ್ಟೇ ಅಲ್ಲದೆ, ದಾಸಕೂಟಕ್ಕೆ ಒಂದು ಹೊಸ ಚೈತನ್ಯವನ್ನು ತಂದುಕೊಟ್ಟಿತು. ಅದರಲ್ಲಿಯೂ ಮುಖ್ಯವಾಗಿ ದಶಾವತಾರದ ವರ್ಣನೆ, ಲೋಕನೀತಿ, ಆತ್ಮ ವಿಮರ್ಶೆ ಮುಂತಾದವುಗಳ ಚಿತ್ರಣವು, ಹರಿದಾಸ ಸಾಹಿತ್ಯದಲ್ಲಿ ಒಂದು ಪರಂಪರೆಯಾಗಿ ಉಳಿದುಬಂದಿತು.

ಈಗ ವೈಕುಂಠದಾಸರನ್ನು ಗಮನಿಸಬಹುದು. ಇವರು ವ್ಯಾಸರಾಯರು, ವಾದಿರಾಜರು, ಪುರಂದರ ದಾಸರು ಹಾಗೂ ಕನಕದಾಸರ ಸಮಕಾಲೀನವರು. ವೈಕುಂಠದಾಸರು ಹುಟ್ಟಿದ್ದು ಹಾಸನ ಜಿಲ್ಲೆಯ ಬೇಲೂರು. ಇವರ ಪೂರ್ವಾಶ್ರಮದ ಹೆಸರು ಕೇಶವ. ಬಾಲ್ಯದಿಂದಲೇ ವೈಕುಂಠದಾಸರು ವೈರಾಗ್ಯಕ್ಕೆ ಮನಸೋತಿದ್ದರು. ಇವರಿಗೆ ಸೌಮ್ಯ ನಾಯಕಿಯೊಡನೆ ವಿವಾಹವಾದ ನಂತರವೂ, ಗೃಹಸ್ಥ ಜೀವನವು ಒಗ್ಗಲಿಲ್ಲ. ವೈಕುಂಠದಾಸರು ಚೆನ್ನ ಕೇಶವ ಸ್ವಾಮಿಯನ್ನು ಭಕ್ತಿಯಿಂದ ಒಲಿಸಿಕೊಳ್ಳು ವುದರಲ್ಲಿಯೇ ತಲ್ಲೀನರಾಗಿದ್ದರು. ಚೆನ್ನಕೇಶವ ಸ್ವಾಮಿಯ ಸಾಕ್ಷಾತ್ಕಾರವಾದ ನಂತರ ವೈಕುಂಠ ಕೇಶವನೆಂಬ ಹೆಸರಿನಿಂದ ಕನ್ನಡದಲ್ಲಿ ದೇವರನಾಮಗಳನ್ನು ರಚಿಸಲು ಆರಂಭಿಸಿ ವೈಕುಂಠದಾಸರೆಂಬ ಹೆಸರಿನಿಂದ ಪ್ರಸಿದ್ಧರಾದರು.

ವೈಕುಂಠದಾಸರು ತಮ್ಮ ಕೃತಿಗಳಲ್ಲಿ ಹೆಚ್ಚಿನವು ಚೆನ್ನಕೇಶವಸ್ವಾಮಿಯು ತಮ್ಮೊಡನೆ ಆಟವಾಡಿದ ಸನ್ನಿವೇಶಗಳನ್ನು ಮತ್ತು ಪವಾಡಗಳನ್ನು ಚೆನ್ನಾಗಿ ವರ್ಣಿಸಿದ್ದಾರೆ. ಅಚ್ಯುತದಾಸರೆಂಬುವವರು ಬಿರುದುಗಳ ಆಸೆಯಿಂದ ಹಾಗೂ ವಿದ್ಯಾಹಂಕಾರದಿಂದ ಮೆರೆಯುತ್ತಿದ್ದಾಗ ಕಣ್ಣುಗಳನ್ನು ಕಳೆದುಕೊಂಡು ದುಃಖಪಡುತ್ತಿದ್ದಾಗ ವೈಕುಂಠದಾಸರೇ ಅಚ್ಯುತದಾಸರಿಗೆ ದೃಷ್ಟಿದಾನ ನೀಡಿದರಂತೆ. ಅಚ್ಯುತರಾಯರು ವೈಕುಂಠದಾಸರನ್ನು ಮಹಾಮಹಿಮರು ಎಂದು ಸ್ತುತಿಸಿರುವ ಕೀರ್ತನೆಯೂ ಇದೆ.

ಉಡುಪಿಯ ಸೋದೆ ಮಠದ ಗುರುಗಳಾದ ವಾದಿರಾಜರು ಬೇಲೂರಿಗೆ ಬಂದಾಗ ವೈಕುಂಠ ದಾಸರೊಂದಿಗೆ ಹಲವು ಕಾಲ ಇದ್ದರೆಂದು ಪ್ರತೀತಿ. ವಾದಿರಾಜರು, ವೈಕುಂಠದಾಸರನ್ನು ಕುರಿತು ವೇಲಾಪುರದರಸನ ಪ್ರತಿಬಿಂಬವಾದ ದಾಸೋತ್ತಮ, ಎನಗೆ ಶ್ರೀಹರಿಯನ್ನು ತೋರಿಸಿ ನನ್ನನ್ನು (ವಾದಿರಾಜ) ಧನ್ಯನನ್ನಾಗಿ ಮಾಡಿದೆ ಎಂದು ಹೇಳಿ ಹಾಡಿ ಹೊಗಳಿದ್ದಾರೆ. ವೈಕುಂಠದಾಸರು ಸುಮಾರು ಎಪ್ಪತ್ತು ವರ್ಷಗಳ ಕಾಲ, ವೈರಾಗ್ಯದಿಂದ ಕೂಡಿದ ಹಾಗೂ ಆಧ್ಯಾತ್ಮಿಕ ಬದುಕನ್ನು ಬಾಳಿ ಮಹಿಮಾ ಪುರುಷರೂ, ಪವಾಡ ಪುರುಷರೂ, ಲೋಕೋಪಕಾರಿಗಳೂ ಎಂದು ಪ್ರಸಿದ್ಧರಾದರು. ಇವರು ಕನ್ನಡದಲ್ಲಿ ನೂರಾರು ಕೃತಿಗಳನ್ನು ರಚಿಸಿರುವವರಾದರೂ, ಅವುಗಳನ್ನು ಪತ್ತೆ ಹಚ್ಚಬೇಕಾಗಿದೆ. ಆಗ ವೈಕುಂಠದಾಸರ ಕೊಡುಗೆಗಳು ಏನೆಂಬುದು ಎಲ್ಲರಿಗೂ ತಿಳಿಯುತ್ತದೆ. ದಾಸರಿಗೆ ಒಬ್ಬಳು ಮಗಳು ಇದ್ದಂತೆ ತಿಳಿಯುತ್ತದೆ. ವೈಕುಂಠದಾಸರ ಶಿಷ್ಯ ವರದ ಎಂಬುವವನು ವೈಕುಂಠದಾಸರ ಕೃತಿಗಳನ್ನು ತಾಳೆಗರಿಗಳ ಮೇಲೆ ಬರೆದಿದ್ದರಂತೆ.

ಈಗ ಶ್ರೀ ವಿಠಲದಾಸರನ್ನು ಗಮನಿಸಬಹುದು. ಇವರಿಗೆ ಕರ್ಜಗಿ ದಾಸಪ್ಪ ಎಂಬ ಹೆಸರೂ ಇದ್ದಿತು. ವಿಠಲದಾಸರು ಹದಿನೆಂಟನೆಯ ಶತಮಾನದ ಶ್ರೇಷ್ಠ ಹರಿದಾಸರಲ್ಲೊಬ್ಬರು. ಅಪರೋಕ್ಷ ಜ್ಞಾನಿಗಳೆಂದು ಪ್ರಸಿದ್ಧರಾಗಿದ್ದ ಜಗನ್ನಾಥದಾಸರ ಶಿಷ್ಯರು. ಪೂರ್ವಾಶ್ರಮದ ಇವರ ಹೆಸರು ದಾಸಪ್ಪ. ವರದಾ ನದಿಯ ತೀರದಲ್ಲಿರುವ ಕರ್ಜಗಿ ಇವರ ಸ್ಥಳ. ಇವರ ಹೆಂಡತಿಯ ಹೆಸರು ಗುಂಡಮ್ಮ. ಜಗನ್ನಾಥ ದಾಸರು ಮೈಸೂರು ದೇಶದಲ್ಲಿ ಸಂಚರಿಸುತ್ತಿದ್ದಾಗ ಶಾಸ್ತ್ರಗಳನ್ನು ಬಲ್ಲವರಾಗಿದ್ದರೂ, ಆಧ್ಯಾತ್ಮಿಕದಲ್ಲಿ ಆಸೆಯಿರಲಿಲ್ಲ. ದಾಸಪ್ಪನವರನ್ನು ಕಂಡ ಜಗನ್ನಾಥ ದಾಸರ ಶಿಷ್ಯರಾಗಿದ್ದ ಪ್ರಾಣೇಶ ದಾಸರು, 'ಆದದ್ದಾಯಿತು ಇನ್ನಾದರೂ ಒಳ್ಳೆಯ ದಾರಿಯನ್ನು ಹಿಡಿಯೋ ಪ್ರಾಣಿ' ಒಳ್ಳೆಯದು ಉಂಟಾಗುತ್ತದೆ ಎಂದು ಜಗನ್ನಾಥರು ಹಾಡಿದರು. ಅಂದಿನಿಂದ ದಾಸಪ್ಪನವರು ಜಗನ್ನಾಥದಾಸರ ಶಿಷ್ಯರಾದರು. ಜಗನ್ನಾಥದಾಸರಿಂದ ದಾಸಪ್ಪನವರು ಶ್ರೀ ವಿಠಲ ಎಂಬ ಹೆಸರನ್ನು ಪಡೆದರು. ಕರ್ಜಗಿದಾಸರೆಂದು ಪ್ರಖ್ಯಾತರಾದರು. ಕರ್ಜಗಿ ದಾಸರು ಜಗನ್ನಾಥ ದಾಸರ ಹರಿಕಥಾಮೃತ ಸಾರಕ್ಕೆ ಇಪ್ಪತ್ತ ನಾಲ್ಕು ಷಟ್ಪದಿಗಳಲ್ಲಿ ಫಲಶ್ರುತಿಯನ್ನು (ಇದನ್ನು ಕೇಳಿದರೆ ಒಳ್ಳೆಯದು ಉಂಟಾಗುತ್ತದೆ) ಬರೆದಿದ್ದಾರೆ. ಸಾರವೆಂದರೆ ಹರಿಕಥಾಮೃತಸಾರ ಎಂದು ಇವರ ಗುರುಗಳಾದ ಜಗನ್ನಾಥದಾಸರು ಹೊಗಳಿದ್ದಾರೆ.

ಕರ್ಜಗಿದಾಸರು, ತಮ್ಮ ಗುರು ಜಗನ್ನಾಥ ದಾಸರನ್ನು ಕುರಿತು 'ಸಂಗ ಸುಖವ ಬಯಸಿ ಬದುಕಿರೋ ರಂಗನೊಲಿದ ಭಾಗವತರು ತೆರಳಿದರು. ಶ್ರೀಜಗನ್ನಾಥಾರ್ಯರು, ತಿರುಪತಿಯ ಸ್ಮರಿಸಿ ಹರಿಹರ ಪುರಕೆ ಹರುಷದಲಿ ಎಂಬ ಎರಡು ಕೀರ್ತನೆಗಳನ್ನು ರಚಿಸಿದ್ದಾರೆ.

ಈ ಮೂರೂ ಲೇಖನಗಳನ್ನು ಬರೆಯಲು ಪ್ರಸ್ತುತ ಲೇಖಕನು ಕನ್ನಡ ವಿಶ್ವಕೋಶ. ಹದಿನಾಲ್ಕನೆಯ ಸಂಪುಟವನ್ನು ಆಶ್ರಯಿಸಿದ್ದಾರೆ. ಈ ಸಂಪುಟದ ಪ್ರಧಾನ ಸಂಪಾದಕರಿಗೆ ಕೃತಜ್ಞನಾಗಿದ್ದಾನೆ.


ಲೋಕಾಯುಕ್ತ ಅಧಿಕಾರಿಗಳ ತಾಲೂಕು ಭೇಟಿ ಕಾರ್ಯಕ್ರಮ

ಮೈಸೂರು, ಡಿ.18- ಪೊಲೀಸ್ ಅಧೀಕ್ಷಕರ ಕಚೇರಿ ವತಿಯಿಂದ ಕರ್ನಾಟಕ ಲೋಕಾಯುಕ್ತ ಮೈಸೂರು ಜಿಲ್ಲಾ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳು ಮೈಸೂರು ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ, ಸಾರ್ವಜನಿಕ ಮತ್ತು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಬಗ್ಗೆ ಸಂಬಂಧಪಟ್ಟ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಅಡಿಯಲ್ಲಿ ಕ್ರಮಬದ್ಧವಾಗಿ ಭರ್ತಿಮಾಡಿದ ದೂರುಗಳನ್ನು ನಮೂನೆ 01 ಮತ್ತು 02 ರಲ್ಲಿ ಪ್ರಮಾಣ ಪತ್ರಗಳನ್ನು ಅಗತ್ಯ ದಾಖಲಾತಿಗಳೊಡನೆ ಸ್ವೀಕರಿಸುವ ಕಾರ್ಯಕ್ರಮವನ್ನು ಡಿ.20 ರಿಂದ 26 ರವರೆಗೆ ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ವಿವಿಧ ತಾಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಡಿ.20ರಂದು ಎಚ್.ಡಿ.ಕೋಟೆ ತಾಲೂಕಿನ ಕೋಟೆ ಪಿಡಬ್ಲ್ಯೂಡಿ ಅತಿಥಿಗೃಹ, ಡಿ.22 ರಂದು ಮೈಸೂರು ನಗರ ಮತ್ತು ತಾಲೂಕಿನ ಮೈಸೂರು ನಗರದ ಜೆಎಲ್‌ಬಿ ರಸ್ತೆಯ ಚಾಮುಂಡಿ ಅತಿಥಿಗೃಹ, ಡಿ.23 ರಂದು ಸಾಲಿಗ್ರಾಮ ತಾಲೂಕಿನ ಸಾಲಿಗ್ರಾಮದ ಪ್ರವಾಸಿ ಮಂದಿರ, ಡಿ.2 6ರಂದು ಪಿರಿಯಾಪಟ್ಟಣ ತಾಲೂಕಿನ ಪಿ.ಪಟ್ಟಣ ಪಿಡಬ್ಲ್ಯೂಡಿ ಅತಿಥಿಗೃಹದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕನ್ನಡ ರಾಜ್ಯೋತ್ಸವ, ಅಪ್ಪು ಪ್ರಥಮ ಪುಣ್ಯಸ್ಮರಣೆ

ಮೈಸೂರು, ಡಿ.18(ಆರ್‌ಕೆಬಿ)-ಮೈಸೂರಿನ ವಿವೇಕಾನಂದನಗರ ವೃತ್ತದಲ್ಲಿ ಕರ್ನಾಟಕ ಸೇನಾ ಪಡೆ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಪುನೀತ್ ರಾಜಕುಮಾರ್ ಅವರ ಪ್ರಥಮ ಪುಣ್ಯಸ್ಮರಣೆ ಹಾಗೂ ಕನ್ನಡ ರಸ ಮಂಜರಿ ಕಾರ್ಯಕ್ರಮಕ್ಕೆ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರು ಭಾನುವಾರ ಉದ್ಘಾಟಿಸಿದರು.



ನಂತರ ಮಾತನಾಡಿದ ಅವರು, ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಕಡಿಮೆಯಾಗುತ್ತಿದ್ದು, ಬೆಂಗಳೂರಿನಲ್ಲಿ ವಲಸಿಗರು- ಅನ್ಯ ಭಾಷಿಗರು ಹೆಚ್ಚಾಗುತ್ತಿದ್ದಾರೆ. ಇಂತಹ ಸಮಯದಲ್ಲಿ ಕನ್ನಡದ ಕಾರ್ಯಕ್ರಮಗಳು ಹೆಚ್ಚು ನಡೆಯಬೇಕು. ಕನ್ನಡ ಭಾಷೆಯನ್ನು ಎಲ್ಲರೂ ಉಳಿಸಿ ಬೆಳೆಸಬೇಕು ಎಂದು ಹೇಳಿದರು.

ನಂತರ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಅವರು ತಾಯಿ ಭುವನೇಶ್ವರಿ ಹಾಗೂ ಪುನೀತ್ ರಾಜಕುಮಾರ್ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಕನ್ನಡ ಹೋರಾಟಗಾರರು, ಆಟೋ ಚಾಲಕರು ಹಾಗೂ ಇನ್ನಿತರ ಮಧ್ಯಮ ವರ್ಗದವರಿಂದ ಕನ್ನಡ ಕಾರ್ಯಕ್ರಮಗಳು ಹೆಚ್ಚು ನಡೆಯುತ್ತಿವೆ. ಇದನ್ನು ಮುಂದುವರಿಸಿಕೊಂಡು ಹೋದರೆ ಕನ್ನಡ ಭಾಷೆ, ಸಂಸ್ಕೃತಿ ರಕ್ಷಿಸಿಕೊಳ್ಳಲು ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಾದ ಚುಟುಕು ಸಾಹಿತ್ಯ ಕ್ಷೇತ್ರದ ಹಾಲಪ್ಪ ಗೌಡ, ಮಾಧ್ಯಮ ಕ್ಷೇತ್ರದ ಎಸ್. ಪಲ್ಲವಿ, ಸಮಾಜ ಸೇವಾ ಕ್ಷೇತ್ರದ ಗೋಲ್ಡ್ ಸುರೇಶ್, ಶಿಕ್ಷಣ ಕ್ಷೇತ್ರದ ಆರ್.ಎಂ.ನವೀನ್ ಕುಮಾರ್, ಸೇವಾ ಕ್ಷೇತ್ರದ ಆರ್.ಮಹದೇವ್, ಆಟೋ ಕ್ಷೇತ್ರದ ಆರ್.ರವಿಕುಮಾರ್ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಾಹುಲ್ ಗಾಂಧಿ-ಪ್ರಿಯಾಂಕಾ ಗಾಂಧಿ ಫೋರಂ ಅಧ್ಯಕ್ಷೆ ಡಾ.ಮಂಜುಳ ಉಮೇಶ್, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಕಾಂಗ್ರೆಸ್ ಮುಖಂಡ ನವೀನ್ ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಬಡಮಕ್ಕಳಿಗೆ ಬಟ್ಟೆ, ಪುಸ್ತಕ, ಪೆನ್ನು ವಿತರಿಸಲಾಯಿತು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಕೆ.ರಾಮು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಬಿಜೆಪಿ ಮುಖಂಡ ಶಿವೇಗೌಡ, ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ಲೋಕೇಶ್ ಗೌಡ ಇನ್ನಿತರರು ಉಪಸ್ಥಿತರಿದ್ದರು.

ಬಾಲಕ ನಾಪತ್ತೆ

ಮೈಸೂರು,ಡಿ.18- ಮೈಸೂರು ಯರಗನಹಳ್ಳಿಯ ಸುಮಾರು 15 ವರ್ಷದ ಆದರ್ಶ, ಅ.10 ರಂದು ಬೆಳಗ್ಗೆ 9 ಗಂಟೆಗೆ ಶಾಲೆಗೆ ಹೋದವನು ವಾಪಸ್ಸು ಬಂದಿಲ್ಲ. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಣೆಯಾಗಿರುವ ಬಾಲಕನ ಚಹರೆ: 15 ವರ್ಷ ವಯಸ್ಸು, 5.6 ಅಡಿ ಎತ್ತರ, ಗೋಧಿ ಮೈ ಬಣ್ಣ ಹೊಂದಿರುತ್ತಾರೆ, ನೀಲಿ ಬಣ್ಣದ ಟಿ ಶರ್ಟ್, ಕಪ್ಪು ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾರೆ.

ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಎಸ್ಪಿ ಅವರ ದೂ.ಸಂ: 2520040, ಮೈಸೂರು ನಗರ ನಿಸ್ತಂತು ಕೊಠಡಿ ದೂ.ಸಂ: 0821-2444800, ಹಾಗೂ ಮೈಸೂರು ಸೌತ್ ಪೊಲೀಸ್ ಠಾಣೆಯ ದೂ.ಸಂ:0821-2444955 ಸಂಪರ್ಕಿಸಲು ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸರ್ಕಾರಿ ವಿಶ್ರಾಂತ ಉದ್ಯೋಗಿಗಳ ಸಂಘದಿಂದ ಪಿಂಚಣಿದಾರರ ದಿನಾಚರಣೆ



ಮೈಸೂರು, ಡಿ.18–ಕರ್ನಾಟಕ ರಾಜ್ಯ ಸರ್ಕಾರಿ ವಿಶ್ರಾಂತ ಉದ್ಯೋಗಿಗಳ ಸಂಘದ ವತಿಯಿಂದ ರಾಮಕೃಷ್ಣ ನಗರದಲ್ಲಿರುವ ಗಣಪತಿ ದೇವಸ್ಥಾನದ ಸಭಾಂಗಣದಲ್ಲಿ ಪಿಂಚಣಿದಾರರ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಸಂಘದ ಹಿರಿಯರು ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಉಮಾಕಾಂತ್ ಅಧ್ಯಕ್ಷತೆ ವಹಿಸಿ, ಪಿಂಚಣಿದಾರರ ದಿನಾಚರಣೆಯ ಮಹತ್ವ ತಿಳಿಸಿದರಲ್ಲದೆ, ಸಂಘದ ಬಗ್ಗೆ ವಿವರ ನೀಡಿದರು. ಸಂಘದ ಹಿರಿಯ ಮಹಿಳಾ ಸದಸ್ಯರು, ಹಿರಿಯ ಪುರುಷ ಸದಸ್ಯರುಗಳನ್ನು ಇದೇ ವೇಳೆ ಸನ್ಮಾನಿಸಲಾಯಿತು.

ಇದಕ್ಕೂ ಮೊದಲು ಇತ್ತೀಚೆಗೆ ನಿಧನರಾದ ಸಂಘದ ಸದಸ್ಯರಿಗೆ ಸಂತಾಪ ಸೂಚಿಸಿ, ಮೌನಾಚರಣೆ ಮೂಲಕ ಗೌರವ ಸಲ್ಲಿಸಲಾಯಿತು. ಸಮಾರಂಭದಲ್ಲಿ ಸಂಘದ ಹಿರಿಯ ಸದಸ್ಯರು ಮತ್ತು ವೈದ್ಯರುಗಳಿಂದ ಆರೋಗ್ಯ ಕುರಿತು ಮಾಹಿತಿ ನೀಡಲಾಯಿತು.

ಎಎಸ್‌ಜಿ ಕಣ್ಣಿನ ಆಸ್ಪತ್ರೆಯ ನುರಿತ ವೈದ್ಯರು ಸದಸ್ಯರುಗಳೊಂದಿಗೆ ಸಂವಾದ ನಡೆಸಿ, ಅವರುಗಳ ಪ್ರಶ್ನೆಗಳಿಗೆ ಉತ್ತರಿಸಿದರು. ನಿವೃತ್ತ ಪ್ರಾಂಶುಪಾಲರಾದ ಶ್ರೀಮತಿ ಶಶಿಕಲಾ ಅವರು ಪ್ರಾರ್ಥಿಸಿದರು. ಖಜಾಂಚಿ ಕೆ.ಎಂ.ನಾಗರಾಜ್ ಸ್ವಾಗತಿಸಿದರು. ಕಾರ್ಯದರ್ಶಿ ಚಿಕ್ಕಲಿಂಗಸ್ವಾಮಿ ವಂದಿಸಿದರು ಎಂದು ಸಂಘದ ಅಧ್ಯಕ್ಷ ಬಿ.ಆರ್.ಉಮಾಕಾಂತ್ ತಮ್ಮ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಗಮವಾಗಿ ನಡೆದ ಸಂಗೀತ, ನೃತ್ಯ, ತಾಳವಾದ್ಯ ಶಾಸ್ತ್ರ ಪರೀಕ್ಷೆ



ಮೈಸೂರು, ಡಿ.18(ಆರ್‌ಕೆಬಿ)– ಮೈಸೂರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ವತಿಯಿಂದ 2022ನೇ ಸಾಲಿನ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಭಾನುವಾರ ವಿಶೇಷ ಸಂಗೀತ, ನೃತ್ಯ ಮತ್ತು ತಾಳವಾದ್ಯ ಕುರಿತ ಶಾಸ್ತ್ರ ಪರೀಕ್ಷೆ ನಡೆಯಿತು. ಮೈಸೂರಿನ ಮಹಾರಾಣಿ ಕಾಲೇಜು ಮತ್ತು ಕುವೆಂಪುನಗರ ಸರ್ಕಾರಿ ಕಾಲೇಜು ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಯ ಸುಮಾರು 300 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸಿದ್ದರು.

2023ರ ಜನವರಿ 7ರಿಂದ ಫೆಬ್ರವರಿ 22ರವರೆಗೆ ವಿಶೇಷ ಸಂಗೀತ, ನೃತ್ಯ ಮತ್ತು ತಾಳವಾದ್ಯದ ಪ್ರಾಯೋಗಿಕ ಪರೀಕ್ಷೆಗಳು ಪ್ರಾರಂಭವಾಗಲಿವೆ.

ನ್ಯಾಯಬೆಲೆ ಅಂಗಡಿಗಳ ಪರಿಶೀಲನೆ



ಮೈಸೂರು, ಡಿ.18(ಎಂಕೆ)– ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ನಿರ್ದೇಶಕ ಕೆ.ಎಂ.ಎಸ್.ಖಲ್ಸಾ ಮೈಸೂರಿನಲ್ಲಿ ನ್ಯಾಯಬೆಲೆ ಅಂಗಡಿಗಳ ಪರಿಶೀಲನೆ ನಡೆಸಿದ್ದಾರೆ.

ಮೈಸೂರು ನಗರ ಮತ್ತು ಮೈಸೂರು ತಾಲ್ಲೂಕಿನ ವಿವಿಧ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ನೀಡಲ್ಪಡುವ ಪಡಿತರಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಿದರು. ಮೈಸೂರು ಸಿಟಿ ಸಿದ್ಧಾರ್ಥನಗರದ ಬಳಕೆದಾರರ ಸಹಕಾರ ಸಂಘ, ಲಕ್ಷ್ಮೀಪುರಂ ಬಳಕೆದಾರರ ಸಹಕಾರ ಸಂಘ, ವಿದ್ಯಾರಣ್ಯಪುರಂ ಬಳಕೆದಾರರ ಸಹಕಾರ ಸಂಘ ಹಾಗೂ ಮೈಸೂರು ತಾಲೂಕಿನ ಇಲವಾಲದ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ದಾಸನಕೊಪ್ಪಲು ಗ್ರಾಮದ ನ್ಯಾಯಬೆಲೆ ಅಂಗಡಿಗಳಿಗೆ ಕೇಂದ್ರದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಆಹಾರ ಇಲಾಖೆಯ ಜಂಟಿ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಆಹಾರ ನಿರೀಕ್ಷಕರು ಉಪಸ್ಥಿತರಿದ್ದರು.

ವಸತಿ ಸೌಲಭ್ಯ: ಅರ್ಜಿ ಆಹ್ವಾನ

ಮೈಸೂರು,ಡಿ.18–ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯ ವತಿಯಿಂದ ಡಾ.ಅಂಬೇಡ್ಕರ್ ನಗರ ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆಯಡಿ ಪರಿಶಿಷ್ಟ ಜಾತಿ–9, ಪರಿಶಿಷ್ಟ ಪಂಗಡ–3, ಸಾಮಾನ್ಯ–33, ಅಲ್ಪಸಂಖ್ಯಾತರರು–5 ಒಟ್ಟು 50 ಫಲಾನುಭವಿಗಳಿಗೆ ವಸತಿ ವಸತಿ ಸೌಲಭ್ಯ ಕಲ್ಪಿಸಲು ಗುರಿ ನಿಗದಿಪಡಿಸಿದ್ದು ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನಿಗದಿತ ನಮೂನೆಯಲ್ಲಿ ದೃಢಿಕೃತ ದಾಖಲೆಗಳೊಂದಿಗೆ 2022ರ ಡಿ. 29ರ ಒಳಗಾಗಿ ಅರ್ಜಿ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.



ಮೈಸೂರಿನ ಜೀವನಿಧಿ ಟ್ರಸ್ಟ್‌ನ 4ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಜೀವಿನಿಧಿ ವೃದ್ಧಾಶ್ರಮದ ವ್ಯವಸ್ಥಾಪಕಿ ಶ್ರೀಮತಿ ಆಯಿಷ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸನ್ಮಾನಿಸಿದರು. ಈ ವೇಳೆ ಟ್ರಸ್ಟ್ ಸದಸ್ಯರಾದ ಸಂಜಯ್ ಚಕ್ರವರ್ತಿ, ನಿವೃತ್ತ ಪೊಲೀಸ್ ಅಧಿಕಾರಿ ಶಾಂತರಾಜ್, ಡಾ.ರವೀಂದ್ರ ಇನ್ನಿತರರು ಉಪಸ್ಥಿತರಿದ್ದರು.


ಕೆ.ಎಸ್.ಚಿನ್ನಪ್ಪ ನಿಧನ



ಮೈಸೂರು,ಡಿ.18–ಮೈಸೂರಿನ ಬೆಮೆಲ್ ಲೇಔಟ್ ನಿವಾಸಿ, ಬೆಮೆಲ್ ನಿವೃತ್ತ ಉದ್ಯೋಗಿ ಕೆ.ಎಸ್.ಚಿನ್ನಪ್ಪ(65) ಅವರು ಶನಿವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ವಿಜಯನಗರ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹಿಳೆಯರ ಏಳಿಗೆಗಾಗಿ ಒನಕೆ ಓಬವ್ವ ನಿಗಮ ರಚನೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ



ಚಿತ್ರದುರ್ಗ,ಡಿ.18–ಒನಕೆ ಓಬವ್ವನವರ ಹೆಸರಿನಲ್ಲಿ ಮಹಿಳೆಯರಿಗಾಗಿ ವಿಶೇಷ ಕಾರ್ಯಕ್ರಮವನ್ನು ಮುಂದಿನ ಆಯವ್ಯಯದಲ್ಲಿ ರೂಪಿಸಿ, ಓಬ್ಬನದ ಹೆಸರಿನ ನಿಗಮವನ್ನು ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅವರು ಇಂದು ವೀರವನಿತೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಓಬವ್ವನವರ ಹೆಸರಿನಲ್ಲಿ ಮಹಿಳಾ ಕಾಲೇಜನ್ನು ಸ್ಥಾಪಿಸಲಾಗುವುದು. ಒನಕೆ ಓಬವ್ವ ಟ್ರಸ್ಟ್ ಹೆಸರಿನಲ್ಲಿ ಸಮುದಾಯಕ್ಕೆ 80 ಎಕರೆ ಜಮೀನನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು. ಒನಕೆ ಓಬವ್ವನ ಜೀವನ ಸಾಧನೆಗಳ ಸಂಶೋಧನೆಗಾಗಿ ವಿಶ್ವವಿದ್ಯಾಲಯಲದಲ್ಲಿ ಅಧ್ಯಯನ ಪೀಠ ರಚಿಸಲಾಗುವುದು. ಸಮುದಾಯಕ್ಕೆ ಉದ್ಯೋಗ, ಭೂ ಒಡೆತನ ಸಮಸ್ಯೆಗಳಿಗೆ ಸೂಕ್ತ ಸಮಯದಲ್ಲಿ ನ್ಯಾಯ ಒದಗಿಸಲಾಗುವುದು ಎಂದರು.

ಒನಕೆ ಓಬವ್ವ ಕತೆಯನ್ನು ಕೇಳಿಸಿಕೊಂಡು ಬೆಳೆದಿದ್ದೇವೆ. ಯಾವುದೇ ಅಧಿಕಾರವಿಲ್ಲದೇ ಸಾಧನೆ ಮಾಡುವುದು ಅಪರೂಪದ ಗುಣ. ತನ್ನ ಸರ್ವಸ್ವವನ್ನು ದೇಶಕ್ಕಾಗಿ ಅರ್ಪಿಸಿದ ಒನಕೆ ಓಬವ್ವನ ತ್ಯಾಗದ ಚರಿತ್ರೆಯನ್ನು ಸುವರ್ಣಾಕ್ಷರದಲ್ಲಿ ಬರೆದಿಡುವಂಥದ್ದು. ಪತ್ನಿಧರ್ಮವನ್ನು ಅನುಸರಿಸಿದ ಓಬವ್ವ ಕೋಟೆಯನ್ನು ಸುತ್ತುವರಿದ ಶತ್ರುಗಳನ್ನು ಸಂಹರಿಸಿ, ಹಿಮ್ಮೆಟ್ಟಿಸಿದ ದಿಟ್ಟ ಮಹಿಳೆ. ಅಬಲೆ ಎಂದು ಗುರುತಿಸಲಾಗುತ್ತಿದ್ದ ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ಅವರೂ ಸಬಲರು ಎಂದು ನಿರೂಪಿಸಿದರು. ಕರ್ತವ್ಯ ನಿಷ್ಠೆ, ದೇಶಪ್ರೇಮ, ತ್ಯಾಗ ಮನೋಭಾವಗಳು ತಮ್ಮ ಕುಲಸಮುದಾಯದಿಂದ ಬಂದಿದೆ. ಒನಕೆ ಓಬವ್ವನ ತ್ಯಾಗ ಆದರ್ಶಗಳು ಇಂದಿನ ಯುವಪೀಳಿಗೆಗೆ ತಿಳಿಸಬೇಕೆಂಬ ಉದ್ದೇಶದಿಂದ ಒನಕೆ ಓಬವ್ವನ ದಿನಾಚರಣೆಯನ್ನು ಸರ್ಕಾರದ ವತಿಯಿಂದ ಆಚರಿಸಲಾಗುತ್ತಿದೆ ಎಂದರು. ಶ್ರೀ ಬಸವ ನಾಗದೇವ ಸ್ವಾಮೀಜಿ, ಜ್ಞಾನ ಪ್ರಕಾಶ್ ಸ್ವಾಮೀಜಿ, ವಿಜಯ ಮಹಾಂತೇಶ ಸ್ವಾಮೀಜಿ, ಬಸವ ಲಿಂಗ ಮೂರ್ತಿ ಸ್ವಾಮೀಜಿ, ಶಾಸಕರಾದ ನೆಹರು ಒಲೆಕರ್, ತಿಪ್ಪಾರೆಡ್ಡಿ, ಚಂದ್ರಪ್ಪ, ಗೂಳಿಹಟ್ಟಿ ಶೇಖರ್, ಪೂರ್ಣಿಮಾ, ಛಲವಾದಿ ನಾರಾಯಣಸ್ವಾಮಿ, ನವೀನ್, ಶಿವರಾಮ್, ಮಾಜಿ ಸಚಿವೆ ಮೋಟಮ್ಮ, ಮೊದಲಾದವರು ಉಪಸ್ಥಿತರಿದ್ದರು.

ವೀರಶೈವ ಲಿಂಗಾಯತ ಮಹಾಸಭಾ ಅಧಿವೇಶನ ಫೆಬ್ರವರಿಗೆ ಮುಂದೂಡಿಕೆ



ದಾವಣಗೆರೆ, ಡಿ.18– ವೀರಶೈವ ಲಿಂಗಾಯತ ಮಹಾಸಭಾದಿಂದ ಆಯೋಜನೆ ಮಾಡಿದ ಮಹಾಅಧಿವೇಶನವನ್ನು ಮುಂದೂಡಲಾಗಿದೆ. ಡಿಸೆಂಬರ್‌ನಲ್ಲಿ ನಡೆಯಬೇಕಿದ್ದ ಮಹಾಅಧಿವೇಶನ ಫೆಬ್ರವರಿಯಲ್ಲಿ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಈ ಬಗ್ಗೆ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಹಿರಿಯ ಶಾಸಕ, ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಡಿಸೆಂಬರ್ 24, 25, 26ರಂದು ನಡೆಯಬೇಕಿದ್ದ ಮಹಾ ಅಧಿವೇಶನವನ್ನು, ಬೆಳಗಾವಿಯ ಸುವರ್ಣಸೌಧದಲ್ಲಿ ಚಳಿಗಾಲದ ಅಧಿವೇಶನ ಇರುವುದರಿಂದ ಮುಂದೂಡಲಾಗಿದೆ. ಈ ಅಧಿವೇಶನವನ್ನು ಫೆಬ್ರವರಿ 11,12,13ರಂದು ನಡೆಸಲು ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ವೀರಶೈವ ಮಹಾಸಭಾವನ್ನು ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬ ಕೆಂಪಣ್ಣ ಆರೋಪ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ನಮಗೆ ನೋಟಿಸ್ ನೀಡುವುದಾಗಿ ಕೆಂಪಣ್ಣ ಹೇಳಿಕೆ ನೀಡಿದ್ದರು. ನಮಗೆ ಯಾವುದೇ ನೋಟಿಸ್ ಬಂದಿಲ್ಲ. ಅವನಿಗೂ ಮಹಾಸಭೆಗೂ ಮತ್ತು ನಮಗೆ ಏನು ಸಂಬಂಧ ಎಂದು ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ದಕ್ಷಿಣ ಗಾಂಧಿ ಕೆ.ಕಾಮರಾಜ್ ಕೃತಿ ಬಿಡುಗಡೆ ಕಾರ್ಯಕ್ರಮ

ರಾಷ್ಟ್ರ ನಾಯಕರನ್ನು ಸೃಷ್ಟಿಸುವ ಶಕ್ತಿ ಹೊಂದಿದ್ದ ಕಾಮರಾಜ್

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಭಿಮತ



ಮಂಡ್ಯ, ಡಿ.18– ಪ್ರಧಾನಿ ಮೋದಿ ಅವರನ್ನು ಹಿಂದೆ–ಮುಂದಿಲ್ಲದವರು ಎಂದು ಅತ್ಯಂತ ಲಘುವಾಗಿ ಟೀಕಿಸುತ್ತಾರೆ. ಆದರೆ, ರಾಷ್ಟ್ರನಾಯಕರನ್ನು ಸೃಷ್ಟಿಸುವ ಶಕ್ತಿ ಹೊಂದಿದ್ದ ಕೆ.ಕಾಮರಾಜ್ ನಾಡಾರ್ ಅವರು ಆಜನ್ಮ ಬ್ರಹ್ಮಚಾರಿಯಾಗಿದ್ದರು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ತಿಳಿಸಿದರು.

ನಗರದ ಕರ್ನಾಟಕ ಸಂಘ ಮತ್ತು ಸಂಕಥನ ಮಂಡ್ಯ ವತಿಯಿಂದ ಆಯೋಜಿಸಿದ್ದ ಜಗದೀಶ್ ಕೊಪ್ಪ ಅವರ 'ದಕ್ಷಿಣದ ಗಾಂಧಿ ಕೆ.ಕಾಮರಾಜ್' ಎಂಬ ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, 1967ರಲ್ಲಿ ನಾನು ಹಾಗೂ ಹೆಚ್.ಕೆ.ವೀರಣ್ಣಗೌಡರು ಅಂದಿನ ಚುನಾವಣೆಯಲ್ಲಿ ಸೋಲನುಭವಿಸಿದ್ದೆವು. ಆಗ ಆಕಾಶವಾಣಿ ವಾರ್ತೆಯಲ್ಲಿ ಕೆ.ಕಾಮರಾಜ್ ನಾಡಾರ್ ಕೂಡ ಚುನಾವಣೆಯಲ್ಲಿ ಸೋಲನುಭವಿಸಿದ ಸುದ್ದಿ ಬಿತ್ತರಗೊಂಡಿತ್ತು. ಆಗ ನಾವು ಅಂತಹ ದೊಡ್ಡ ವ್ಯಕ್ತಿಯೇ ಸೋತಿದ್ದಾರೆ. ನಮ್ಮದೇನು ಮಹಾ ಎಂದು ಸಮಾಧಾನ ಪಟ್ಟುಕೊಂಡಿದ್ದೆವು. ಆದರೆ, ಸಭ್ಯತೆ ವ್ಯಾಪ್ತಿ ಮೀರಿ ಎದುರಾಳಿ ಟೀಕಿಸುವ ಮಟ್ಟಕ್ಕೆ ನಾವು ಇಳಿಯುತ್ತಿರಲಿಲ್ಲ. ಒಮ್ಮೆ ಕೆ.ವಿ.ಶಂಕರಗೌಡ ಕೂಡ ನನ್ನ ಎದುರಾಳಿಯಾಗಿದ್ದರು. ಪ್ರಚಾರದ ದಿನಗಳಲ್ಲಿ ಒಂದು ದಿನವೂ ಅವರ ವಿರುದ್ಧ ಲಘುವಾಗಿ ಮಾತನಾಡಿಲ್ಲ. ಏಕೆಂದರೆ, ಶಂಕರಗೌಡರು ಜಿಲ್ಲೆಗೆ ಕೊಟ್ಟಿರುವ ಕೊಡುಗೆ ಅನನ್ಯವಾದುದು ಎಂಬ ಸೂಕ್ಷ್ಮತೆ ನಮ್ಮಲ್ಲಿತ್ತು ಎಂದರು.

ಆ ನಂತರದಲ್ಲಿ ಜಿಲ್ಲೆಯ ಜನರು ನನ್ನನ್ನು ಸಂಸತ್ತಿಗೆ ಕಳುಹಿಸಿದರು. ಅಲ್ಲಿ ಕೆ.ಕಾಮರಾಜ್ ಅವರ ರಾಜಕೀಯ ಕಾರ್ಯವೈಖರಿಯನ್ನು ಹತ್ತಿರದಿಂದ ಕಾಣುವಂತಾಯಿತು. ಇಂತಹ ಅವಕಾಶ ಕೊಟ್ಟಿದ್ದಕ್ಕಾಗಿ ಜಿಲ್ಲೆಯ ಜನರನ್ನು ಮನಃತುಂಬಿ ಅಭಿನಂದಿಸುತ್ತೇನೆ ಎಂದರು.

ಜಗದೀಶ್ ಕೊಪ್ಪ ಅವರು ಪುಸ್ತಕಗಳನ್ನು ಬರೆಯುತ್ತಾ ದೊಡ್ಡ ಮನುಷ್ಯರ ಸಮಾಜಮುಖಿ ಕೆಲಸಗಳನ್ನು ದಾಖಲಿಸುವಂತಹ ಕೆಲಸ ಮಾಡುತ್ತಿದ್ದಾರೆ. ಇಂತಹ ದಾಖಲೀಕರಣಗಳು ಮುಂದುವರೆದರೆ ಭವಿಷ್ಯದ ಪ್ರಜೆಗಳ ನೈತಿಕ ಶಕ್ತಿ ಹೆಚ್ಚಿಸುವಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ನಾನು ಸಂಗೀತ, ಸಾಹಿತ್ಯ, ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನಿರಂತರ ತೊಡಗಿಸಿಕೊಳ್ಳುವಿಕೆಯಿಂದ 91ರ ಈ ಇಳಿ ವಯಸ್ಸಿನಲ್ಲೂ ನನ್ನ ಜೀವನೋತ್ಸಾಹ ಕುಂದಿಲ್ಲ ಎಂದರು. ಕೃತಿ ಕುರಿತು ಮಾತನಾಡಿದ ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಡಾ.ಬಿ.ಎಲ್.ಶಂಕರ್, ಪ್ರಸ್ತುತ ಒಬ್ಬ ಗ್ರಾಪಂ ಸದಸ್ಯನಾಗಿ ಗೆದ್ದ ಬಳಿಕ ಅಧ್ಯಕ್ಷನಾಗಬೇಕು. ತಾಪಂ, ಜಿಪಂ ಅಧ್ಯಕ್ಷನಾಗಿ ಏಕಾಏಕಿ ಶಾಸಕನಾಗಿ ಬಿಡಬೇಕು ಎಂಬ ಹಪಾಹಪಿಯಲ್ಲಿದ್ದಾರೆ. ಆದರೆ, ತಮಿಳುನಾಡಿನಲ್ಲಿ ಅತ್ಯಂತ ಜನಪ್ರಿಯ ಆಡಳಿತಗಾರನೆನಿಸಿಕೊಂಡ ಕೆ.ಕಾಮರಾಜ್ ಅವರನ್ನೇ ಸೋಲಿಸಿ ಬಿಡುತ್ತಾರೆ. ಇದು ಸಾಮಾಜಿಕ ವಿಪ್ಲವಗಳ ಒಂದು ಮುಖವನ್ನು ತೋರಿಸುತ್ತದೆ ಎಂದರು.

ದೇಶದ ಪ್ರಥಮ ಪ್ರಧಾನಿ ನೆಹರು ಅವರು ಪಂಚವಾರ್ಷಿಕ ಯೋಜನೆ ಚಿಂತನೆಯಲ್ಲಿದ್ದಾಗ ಕೆ.ಕಾಮರಾಜ್ ಅವರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಹಣಕಾಸು ಮೀಸಲಿರಿಸುವಂತೆ ಒತ್ತಡ ಹಾಕಿ ಅದರಲ್ಲಿ ಯಶಸ್ವಿಯಾಗುತ್ತಾರೆ. ಅದರ ಪ್ರತಿಫಲವನ್ನು ತಮಿಳುನಾಡು ಜನತೆ ನಿರಂತರವಾಗಿ ಅನುಭವಿಸಿಕೊಂಡು ಬಂದಿದ್ದಾರೆ ಎಂದು ನುಡಿದರು.

ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ ದರು. ಲೇಖಕ ಜಗದೀಶ್ ಕೊಪ್ಪ ಉಪಸ್ಥಿತರಿ ದ್ದರು. ಕರ್ನಾಟಕ ಸಂಘದ ಅಧ್ಯಕ್ಷ ಬಿ.ಜಯಪ್ರಕಾಶಗೌಡ ಅಧ್ಯಕ್ಷತೆ ವಹಿಸಿದ್ದರು.

ರಮಣ ಮಹರ್ಷಿ ಅಂಧರ ಪರಿಷತ್‌ನಿಂದ ವಿಶ್ವ ವಿಕಲಚೇತನ ದಿನಾಚರಣೆ

ಹಿಂಜರಿಕೆ ಬಿಡಿ, ಸೌಲಭ್ಯ ಪಡೆಯಿರಿ: ತಹಸೀಲ್ದಾರ್ ರೂಪ



ಕೆ.ಆರ್.ಪೇಟೆ, ಡಿ.18– ಅಂಗವಿಕಲರು ಹಿಂಜರಿಕೆ ಬಿಟ್ಟು ತಮಗೆ ಸಿಗುವ ಸೌಲಭ್ಯ ಪಡೆಯಬೇಕು ಎಂದು ತಹಶೀಲ್ದಾರ್ ಎಂ.ವಿ.ರೂಪ ತಿಳಿಸಿದರು.

ತಾಲೂಕಿನ ರಮಣ ಮಹರ್ಷಿ ಅಂಧರ ಪರಿಷತ್‌ನಿಂದ ಭಾನುವಾರ ನಡೆದ ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ಸಾಧನ ಸಲಕರಣೆ, ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶ್ರೀರಮಣ ಮಹರ್ಷಿ ಅಂಧರ ಪರಿಷತ್ ಮುಖ್ಯಸ್ಥ ಕುಮಾರಸ್ವಾಮಿ ಮಾತನಾಡಿ, ಸಂಸ್ಥೆಯಿಂದ ಅಂಗವಿಕಲರಿಗೆ ವೀಲ್‌ಚೇರ್, ಏರ್‌ಬೆಡ್, ವಾಟರ್ ಬೆಡ್ ಮುಂತಾದ ಸಾಧನ ಸಲಕರಣೆ ವಿತರಿಸಲಾಗುತಿದೆ. 1ರಿಂದ 5ನೇ ತರಗತಿ ಮಕ್ಕಳಿಗೆ ಸಾವಿರ, 6, 7ನೇ ತರಗತಿ ಮಕ್ಕಳಿಗೆ 2 ಸಾವಿರ, 8, 9, 10ನೇ ತರಗತಿ ಮಕ್ಕಳಿಗೆ 3 ಸಾವಿರ ರೂ. ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ ಎಂದರು. ತಾಲೂಕು ಆರೋಗ್ಯಾಧಿಕಾರಿ ಡಾ.ಮಧುಸೂದನ್ ಮಾತನಾಡಿ, ಆರೋಗ್ಯ ಇಲಾಖೆಯಿಂದ ಸಿಗಬಹುದಾದ ಯುಡಿಐಡಿ ಕಾರ್ಡ್, ವೈದ್ಯಕೀಯ ತಪಾಸಣೆ, ಉಚಿತ ಔಷಧೋಪಚಾರ ನೀಡಲಾಗುವುದು ಎಂದರು.

ಪುರಸಭೆ ಮುಖ್ಯಾಧಿಕಾರಿ ಬಸವರಾಜು ಮಾತನಾಡಿ, ಪುರಸಭೆಯಿಂದ ಶೇ.5ರ ಅನುದಾನದಲ್ಲಿ ಅವಶ್ಯವಿರುವ ಎಲ್ಲಾ ಸೌಲಭ್ಯ ಕೊಡಿಸುವುದಾಗಿ ತಿಳಿಸಿದರು.

ತಾಲೂಕು ಅಂಗವಿಕಲರ ಸಂಘದ ಅಧ್ಯಕ್ಷ ಲಿಂಗರಾಜಗೌಡ, ಕ್ಷೇತ್ರ ಸಮನ್ವಯಾಧಿಕಾರಿ ಲಿಂಗರಾಜು ಮಾತನಾಡಿದರು. ರಮಣ ಮಹರ್ಷಿ ಅಂಧರ ಪರಿಷತ್ ಮುಖ್ಯಸ್ಥ ಮಹಾಂತೇಶ್ ಅಧ್ಯಕ್ಷತೆ ವಹಿಸಿದ್ದರು. ರಮಣ ಮಹರ್ಷಿ ಅಂಧರ ಪರಿಷತ್ ಮುಖ್ಯಸ್ಥ ಸಂತೋಷ್ ಕುಮಾರ್ ಮಕ್ಕಳಿಗೆ ವಿದ್ಯಾರ್ಥಿ ವೇತನದ ಚೆಕ್ ವಿತರಿಸಿದರು.

ಈ ವೇಳೆ ಜಲೇಂದ್ರ, ಬಸವರಾಜು, ಜಿಲ್ಲಾ ಅಂಗವಿಕಲರ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ್ ಹಾಗೂ ತಾಲೂಕು ರಮಣ ಮಹರ್ಷಿ ಅಂದರ ಪರಿಷತ್‌ನ ವಿವಿಧ ಪುನರ್ವಸತಿ ಕಾರ್ಯಕರ್ತರಿದ್ದರು.

ಇಂದು ಮಂಡ್ಯ ನಗರ ಬಂದ್

ಮಂಡ್ಯ, ಡಿ.18– ಕಬ್ಬು ಹಾಗೂ ಹಾಲಿಗೆ ಬೆಂಬಲ ಬೆಲೆ ನೀಡಬೇಕೆಂದು ಒತ್ತಾಯಿಸಿ ಕಳೆದೊಂದು ತಿಂಗಳಿಂದ ನಗರದ ಸರ್‌ಎಂವಿ ವೃತ್ತದ ಬಳಿ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿಯಿಂದ ನ್ಯಾಯ ಸಿಗದ ಹಿನ್ನೆಲೆಯಲ್ಲಿ ಜಿಲ್ಲಾ ರೈತ ಸಂಘಟನೆ ಮಂಡ್ಯ ನಗರ ಬಂದ್‌ಗೆ ಸೋಮವಾರ ಕರೆ ನೀಡಿದೆ.

ನಾಳೆ ಬೆಳಗ್ಗೆ 6ರಿಂದ ಮಧ್ಯಾಹ್ನ 2 ಗಂಟೆವರೆಗೆ ಬಂದ್ ನಡೆಯಲಿದ್ದು, ಈಗಾಗಲೇ ರೈತ ಸಂಘಟನೆ ಹಾಗೂ ಪ್ರಗತಿಪರ ಸಂಘಟನೆಗಳು ಬಂದ್‌ಗೆ ಬೆಂಬಲಿಸಬೇಕೆಂದು ರೈತ ಮುಖಂಡರು ಮನವಿ ಮಾಡಿದ್ದಾರೆ.

ರೈತ ಸಂಘಕ್ಕೆ ಕರವೇ, ಕನ್ನಡ ಸೇನೆ, ವರ್ತಕರ ಸಂಘಗಳು ಸೇರಿದಂತೆ ಅನೇಕ ಸಂಘಟನೆಗಳು ಬೆಂಬಲ ಸೂಚಿಸಿದ್ದು, ಬಂದ್ ಯಶಸ್ವಿಯಾಗುವ ಸಾಧ್ಯತೆ ಇದೆ. ಇನ್ನು ಸಾರಿಗೆ ಸಂಚಾರ ಎಂದಿನಂತೆ ಇರಲಿದ್ದು, ಶಾಲಾ, ಕಾಲೇಜು ತೆರೆಯಲಿವೆ. ಮಂಡ್ಯದ ಸಂಜಯ ವೃತ್ತದಿಂದ ಡಿಸಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಲಿದೆ.

ಸ್ಮಶಾನಕ್ಕೆ ಸಂಪರ್ಕ ರಸ್ತೆ ಕಲ್ಪಿಸಲು ಮನವಿ



ಶ್ರೀರಂಗಪಟ್ಟಣ, ಡಿ.18– ತಾಲೂಕಿನ ಅರಕೆರೆ ಹೋಬಳಿಯ ಗೊಬ್ಬರಗಾಲ ಗ್ರಾಮದ ಸ್ಮಶಾನಕ್ಕೆ ಸಂಪರ್ಕ ರಸ್ತೆ ನಿರ್ಮಿಸುವಂತೆ ಗ್ರಾಮಸ್ಥರು ತಹಶೀಲ್ದಾರ್ ಶ್ವೇತಾ ಎನ್ ರವೀಂದ್ರ ಅವರನ್ನು ಒತ್ತಾಯಿಸಿದರು.

ತಹಶೀಲ್ದಾರ್ ನೇತೃತ್ವದಲ್ಲಿ ನಡೆದ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಶ್ವೇತಾ ಎನ್ ರವೀಂದ್ರ ಹಾಗೂ ಕಂದಾಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳನ್ನು ಕರೆದುಕೊಂಡು ಗ್ರಾಮ ಸುತ್ತು ಹಾಕಿಸಿ ಸಮಸ್ಯೆಗಳನ್ನು ಪರಿಚಯಿಸಿದರು. ಗ್ರಾಮಸ್ಥರು ಸ್ಮಶಾನಕ್ಕೆ ಹೋಗುವ ರಸ್ತೆಯಲ್ಲಿರುವ ಕೆರೆ ಏರಿಯನ್ನು ಹಲವರು ಒತ್ತುವರಿ ಮಾಡಿಕೊಂಡಿದ್ದು, ಅದನ್ನು ತೆರೆವುಗೊಳಿಸಿ, ರಸ್ತೆ ನಿರ್ಮಿಸಿ ಕೊಡವಂತೆ ಮನವಿ ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ತಹಶೀಲ್ದಾರ್ ತಕ್ಷಣ ತಾಲೂಕು ಸರ್ವೆ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಈ ರಸ್ತೆಯನ್ನು ಅಳತೆ ಮಾಡಿಸಿ ಒತ್ತುವರಿ ತೆರವು ಮಾಡುವಂತೆ ಸೂಚಿಸಿದರು.

ಹೆಚ್ಚು ಜನರು ಪ್ರಯಾಣಿಸುವುದಿಲ್ಲ ಎಂದು ಗ್ರಾಮಕ್ಕೆ ಸಾರಿಗೆ ಬಸ್ ಬರುತಿಲ್ಲ. ಊರು ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿದ್ದು, ಶಾಲಾ ಮಕ್ಕಳು ಹಾಗೂ ಸ್ತ್ರೀಯರು ನಡೆದುಕೊಂಡೆ ಹೋಗಬೇಕು. ಪ್ರಾಣರಕ್ಷಣೆ ಹಾಗೂ ಸುರಕ್ಷತೆಯ ಹಿತದೃಷ್ಟಿಯಿಂದ ಈ ಮಾರ್ಗವಾಗಿ ಶೀಘ್ರ ಬಸ್ ವ್ಯವಸ್ಥೆ ಕಲ್ಪಿಸುವಂತೆ ತಹಶೀಲ್ದಾರ್‌ಗೆ ಗ್ರಾಮಸ್ಥರು ಮನವಿ ಮಾಡಿದರು.

ಕೆಇಬಿ, ನೀರಾವರಿ ಇಲಾಖೆ, ಒತ್ತುವರಿ, ಪಿಂಚಣಿ, ಆರ್.ಆರ್.ಟಿ, ತಾ.ಪಂ ಸೇರಿದಂತೆ ವಿವಿಧ ಇಲಾಖೆಗಳ 16 ಕ್ಕೂ ಹೆಚ್ಚು ಸಮಸ್ಯೆಗಳನ್ನು ಹೊತ್ತು ಗ್ರಾಮಸ್ಥರು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಈ ವೇಳೆ ಗ್ರೇಡ್ 2 ತಹಶೀಲ್ದಾರ್ ರೇಖಾ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ನಿಶಾಂತ್, ಪಶುಸಂಗೋಪನೆಯ ಸಹಾಯಕ ನಿರ್ದೇಶಕ ಡಾ. ಶಿವಲಿಂಗಯ್ಯ, ಸಿಡಿಪಿಒ ಅಶೋಕ್, ಆರ್.ಐ ಗೋವರ್ಧನ್, ಗ್ರಾಪಂ ಅಧ್ಯಕ್ಷೆ ಭವ್ಯ, ಉಪಾಧ್ಯಕ್ಷ ದೇವರಾಜು, ಸದಸ್ಯ ರಘು, ಇತರರು ಇದ್ದರು.

ಡಿ.24ರಂದು ಮೇಲುಕೋಟೆಗೆ ಪಂಚರತ್ನ ಯಾತ್ರೆ



ಪಾಂಡವಪುರ, ಡಿ.18– ಈ ತಿಂಗಳ ಡಿ.24 ರಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ಮೇಲುಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಪಂಚರತ್ನ ಯಾತ್ರೆ ಆಗಮಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸುವಂತೆ ಶಾಸಕ ಸಿ.ಎಸ್.ಪುಟ್ಟರಾಜು ಮನವಿ ಮಾಡಿದರು.

ತಾಲೂಕಿನ ಬೇಬಿ ಬೆಟ್ಟದಲ್ಲಿ ಚಿನಕುರಳಿ ಜಿಪಂ ಕ್ಷೇತ್ರ, ಎಲೆಕೆರೆ ಹ್ಯಾಂಡ್‌ಪೋಸ್ಟ್ ಅಕ್ಷಯ್ ಕನ್ವೆನ್ಷನ್ ಹಾಲ್‌ನಲ್ಲಿ ಕ್ಯಾತನಹಳ್ಳಿ ಜಿಪಂ, ಕುಂತಿಬೆಟ್ಟದಲ್ಲಿ ಚಿಕ್ಕಾಡೆ ಜಿಪಂ ಕ್ಷೇತ್ರ, ಲಕ್ಷ್ಮೀಸಾಗರ ಜಿಪಂ ಕ್ಷೇತ್ರ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಕೆಆರ್‌ಎಸ್‌ನಿಂದ ಹೊರಡುವ ಪಂಚರತ್ನ ಯಾತ್ರೆ ನಾರ್ಥ್ ಬ್ಯಾಂಕ್, ಕಟ್ಟೇರಿ, ಅರಳಕುಪ್ಪೆ, ಹರವು, ಕ್ಯಾತನಹಳ್ಳಿ, ಕೆನ್ನಾಳು ಮಾರ್ಗವಾಗಿ ಪಟ್ಟಣ ಪ್ರವೇಶಿಸಲಿದೆ. ಈ ವೇಳೆ ಸಾರ್ವಜನಕರನ್ನು ಉದ್ದೇಶಿಸಿ ಕುಮಾರಸ್ವಾಮಿ ಮಾತನಾಡಲಿದ್ದಾರೆ. ಬಳಿಕ ಚಿಕ್ಕಾಡೆ, ಚಿಕ್ಕಬ್ಯಾಡರಹಳ್ಳಿ ಸರ್ಕಲ್, ಕನಗನಮರಡಿ, ಹುಲಿಕೆರೆ ಮಾರ್ಗವಾಗಿ ಶಿವಳ್ಳಿ ತಲುಪಲಿದೆ. ಡಿ.25ರಂದು ಬೆಳಗ್ಗೆ ಶಿವಳ್ಳಿಯಿಂದ ಹೊರಟು ದುದ್ದ ಮಾರ್ಗವಾಗಿ ಜಕ್ಕನಹಳ್ಳಿ ಸರ್ಕಲ್, ಮೇಲುಕೋಟೆ, ನಾರಾಯಣಪುರ, ಚಿನಕುರಳಿ ಮಾರ್ಗವಾಗಿ ಕೆ.ಆರ್.ಪೇಟೆ ತಾಲೂಕಿನ ಅಶೋಕ ನಗರ ತಲುಪಲಿದೆ. ಪಟ್ಟಣ ಸೇರಿದಂತೆ ಪ್ರತಿ ಗ್ರಾಪಂ ಮಟ್ಟದಲ್ಲೂ ಊಟ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಹಿಂದಿನ ಸರ್ಕಾರದ ಎಲ್ಲಾ ಯೋಜನೆಗಳನ್ನು ತಡೆಹಿಡಿಯಿತು. ಆದರೆ ಮಾಜಿ ಸಿಎಂ ಯಡಿಯೂರಪ್ಪನವರಿಗೆ ನನ್ನ ಮೇಲಿನ ಪ್ರೀತಿ ಇದ್ದಿದ್ದರಿಂದ ನನ್ನ ಕ್ಷೇತ್ರದ ಯಾವುದೇ ಅನುದಾನ ತಡೆ ಹಿಡಿಯಲಿಲ್ಲ. ಬೇಬಿ ಮಠದ ಕಾರ್ಯಕ್ರಮಕ್ಕೆ ಆಗಮಿಸದಾಗಲೂ ನನ್ನ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದ್ದರು ಎಂದ ಅವರು, ಕುರುಬ ಸಮುದಾಯದ ದೇವಸ್ಥಾನ ಉದ್ಘಾಟನೆಗೆ ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲು ಹೋದಾಗ ಪುಟ್ಟರಾಜು ಕಾಂಗ್ರೆಸ್ ಸೇರಲಿದ್ದಾರೆ ಎಂದು ನನ್ನ ವಿರೋಧಿಗಳು ಸುಳ್ಳು ಸುದ್ದಿ ಹಬ್ಬಿಸಿದರು. ಆದರೆ ನಾನು ಕೊನೆವರೆಗೂ ಜೆಡಿಎಸ್‌ನಲ್ಲೆ ಇರುತ್ತೇನೆ ಎಂದು ಸ್ಪಷ್ಟಪಡಿಸಿದರು. ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಕುಮಾರಸ್ವಾಮಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರಲಿದೆ. ರಾಜ್ಯದೆಲ್ಲೆಡೆ ಜೆಡಿಎಸ್ ಪರ ಅಲೆ ಸೃಷ್ಟಿಯಾಗಿದೆ.

ಈ ವೇಳೆ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ. ಯಶ್ವಂತ್ ಕುಮಾರ್, ತಾಪಂ ಮಾಜಿ ಸದಸ್ಯ ಸಿ.ಎಸ್. ಗೋಪಾಲಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ಮಧು ಸೂದನ್, ರಾಮಕೃಷ್ಣೇಗೌಡ, ಬಿ.ಪಿ.ಶ್ರೀನಿ ವಾಸ್, ಪ್ರವೀಣ್, ಚೇತನ್, ನಿಂಗೇಗೌಡ, ಚೇತನ್ ತಿಮ್ಮೇಗೌಡ, ಪ್ರಸನ್ನ, ಬೊಮ್ಮ ರಾಜು, ಎಚ್‌ಎಸ್‌ವಿ ಸ್ವಾಮೀಗೌಡ, ಎಚ್.ಎಲ್. ನಂಜೇಗೌಡ, ಪುರಸಭೆ ಅಧ್ಯಕ್ಷೆ ಅರ್ಚನ, ಗ್ರಾಪಂ ಅಧ್ಯಕ್ಷ ಚಂದ್ರಶೇಖರಯ್ಯ, ಮಿಥುನ್, ಮಹದೇವು, ಶ್ವೇತ, ಸಿಂಧು ಹಲವರಿದ್ದರು.

ಸುಶಿಕ್ಷಿತರಿಂದಲೇ ಸಮಾಜ ಒಡೆಯುವ ಕೆಲಸ: ವಿಷಾದ



ನಂಜನಗೂಡು, ಡಿ.18– ಸುಶಿಕ್ಷಿತರಿಂದಲೇ ಸಮಾಜ ಒಡೆಯುವ ಕೆಲಸ ಆಗುತ್ತಿದೆ. ಶಿಕ್ಷಿತರಾದರಷ್ಟೇ ಸಾಲದು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳುವ ಮೂಲಕ ಸದೃಢ ಸಮಾಜ ಕಟ್ಟುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ಬಿಜೆಪಿ ರಾಜ್ಯ ಎಸ್ಟಿ ಮೋರ್ಚಾ ಉಪಾಧ್ಯಕ್ಷ ಸಿ.ಚಿಕ್ಕರಂಗನಾಯಕ ತಿಳಿಸಿದರು.

ನಗರದ ಮಹರ್ಷಿ ವಾಲ್ಮೀಕಿ ನಾಯಕರ ಸಮುದಾಯ ಭವನದಲ್ಲಿ ಚುಟುಕು ಸಾಹಿತ್ಯ ಪರಿಷತ್ ಹಾಗೂ ಅನುರಾಗ್ ಸೇವಾ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ದಸರಾ ಕವಿಗೋಷ್ಠಿ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೆಚ್ಚು ಓದಿದ ಶಿಕ್ಷಿತರೇ ಸಮಾಜ ದಿಕ್ಕು ತಪ್ಪಿಸುವ ಕೆಲಸದಲ್ಲಿ ತೊಡಗಿಸಿರುವುದು ಕಳವಳಕಾರಿ ಅಂಶ. ನಮ್ಮ ವ್ಯಕ್ತಿತ್ವವನ್ನು ಸರಿಯಾದ ರೀತಿ ರೂಪಿಸಿಕೊಂಡಾಗ ಮಾತ್ರ ನಮ್ಮ ಓದಿಗೂ ಒಂದು ಅರ್ಥ ಬರುತ್ತದೆ. ಆಗ ಸಮಾಜವನ್ನು ಕಟ್ಟುವಲ್ಲಿ ಗಣನೀಯ ಪಾತ್ರ ತೋರಬಹುದು ಎಂದು ತಿಳಿಸಿದರು.

ಸಮಾಜದಲ್ಲಿ ಬೇರೂರಿದ್ದ ಕಂದಾಚಾರ, ಮೂಢನಂಬಿಕೆ, ಅಸಮಾನತೆ ವಿರುದ್ಧ 3 ಸಾಲುಗಳಲ್ಲಿ ತಮ್ಮ ಸಾತ್ವಿಕ ನಿಲುವುಗಳನ್ನು ಜಗತ್ತಿಗೆ ಸಾರಿದ ಸರ್ವಜ್ಞ, ತ್ರಿಪದಿಗಳ ಬ್ರಹ್ಮ ದಿನಕರ ದೇಸಾಯಿಯಂತಹ ಮಹಾಶಯರು ಇಂದಿನ ಯುವಕರಿಗೆ ಆದರ್ಶವಾಗಬೇಕು. ನಾವು ಹೇಳುವ ವಿಚಾರ, ನಿಲುವುಗಳನ್ನು ಸ್ಪಷ್ಟವಾಗಿ ಹೇಳುವಂತಹ ಸಾಹಿತ್ಯ ರಚನೆಯಾಗಬೇಕು ಎಂದು ಆಶಿಸಿದರು.

ಕವಿತೆ ವಾಚನ: ಯುವ ಸಾಹಿತಿಗಳಾದ ಗೋಳೂರು ನಾರಾಯಣ, ಮುನಾ.ರಮೇಶ್, ನಾರಾಯಣಸ್ವಾಮಿ, ಆರ್.ರೇಖಾ, ಸಿ. ರಮೇಶ್ ಸೇರಿದಂತೆ ಹಲವರು ಕವಿತೆಗಳನ್ನು ವಾಚಿಸುವ ಮೂಲಕ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಯಕ್ಷಗಾನ ಕಲಾವಿದ ಶಿವಬುದ್ಧಿ ಹಲ್ಲರೆ, ರಂಗಭೂಮಿ ಕಲಾವಿದ ಬಸವರಾಜು, ಯುವ ಸಾಹಿತಿಗಳಾದ ಗೋಳೂರು ನಾರಾಯಣ, ಆರ್.ರೇಖಾ, ಹುಸ್ಕೂರು ಮಲ್ಲಿಕಾರ್ಜುನ, ಮಣಿಕಂಠ, ಚಿತ್ರ ಕಲಾವಿದ ಅನಿಲ್‌ಭೋಗಶೆಟ್ಟಿ, ಸಾಮಾಜಿಕ ಕಾರ್ಯಕರ್ತೆ ಪಿ.ಎನ್. ರೇಣುಕಾ, ಸಂಗೀತಗಾರ ಆರ್.ಪ್ರಜ್ವಲ್ ಅವರನ್ನು ಸನ್ಮಾನಿಸಲಾಯಿತು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಎಸ್.ಸದಾಶಿವಮೂರ್ತಿ, ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷೆ ರತ್ನ ಹಾಲಪ್ಪಗೌಡ, ರಾಜ್ಯ ಪ್ರಧಾನ ಸಂಚಾಲಕ ಎಂಜಿಆರ್ ಅರಸ್, ತಾಲೂಕು ಅಧ್ಯಕ್ಷ ಜವರನಾಯ್ಕ, ಅನುರಾಗ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ಜಿ.ಸೋಮಶೇಖರ್‌ಮೂರ್ತಿ, ಜೆಡಿಎಸ್ ಮುಖಂಡ ಮಾದೇಶ್, ಮಂಜುನಾಥ್, ಅರುಣ್‌ಕುಮಾರ್, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಅಶೋಕ್, ಎಂ.ರವಿಕುಮಾರ್ ಇದ್ದರು.

ನಿಮ್ಮ ಭವಿಷ್ಯಕ್ಕೆ ನೀವೇ ಶಿಲ್ಪಿ: ಹೆಚ್‌ಪಿಎಂ ಕಿವಿಮಾತು

ಹಿರೀಕ್ಯಾತನಹಳ್ಳಿ, ಡಿ.18– ಮಹಿಳೆಯರು ನಿಮ್ಮ ಭವಿಷ್ಯಕ್ಕೆ ನೀವೇ ಶಿಲ್ಪಿಗಳಾಗಬೇಕು ಎಂದು ಶಾಸಕ ಹೆಚ್.ಪಿ. ಮಂಜುನಾಥ್ ಮಹಿಳೆಯರಿಗೆ ಕಿವಿಮಾತು ಹೇಳಿದರು.

ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲಾ ವರಣದಲ್ಲಿ ಏರ್ಪಡಿಸಿದ್ದ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಬಿ.ಸಿ ಯೋಜನೆ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳಾ ಸಬಲಿಕರಣ ಧರ್ಮಸ್ಥಳ ಸಂಸ್ಥೆಯ ಮುಖ್ಯ ಉದೇಶವಾಗಿದ್ದು, ಸಂಸ್ಥೆಯೊಂದಿಗೆ ಮಹಿಳೆಯರೂ ಕೈ ಜೋಡಿಸಬೇಕು ಎಂದರು.

ಸಂಸ್ಥೆ ಜಿಲ್ಲಾ ನಿರ್ದೇಶಕ ಮುರಳಿ ಮಾತನಾಡಿ, ಧರ್ಮದ ಬದುಕನ್ನು ಕಟ್ಟಿಕೊಂಡು ಜೀವನ ನಡೆಸಬೇಕು. ಯಾವುದು ತಪ್ಪು ಯಾವುದು ಸರಿ ಎಂದು ತಿಳಿದು ಜೀವನ ಕಟ್ಟಿಕೊಳ್ಳುವುದು, ಶಿಸ್ತು ರೂಢಿ ಜೊತೆಗೆ ಸಾಮಾಜಿಕ ಕಳಕಳಿಯೂ ಮುಖ್ಯ ಎಂದರು.



15 ವರ್ಷದ ರಾಜಕಾರಣದಲ್ಲಿ ಕುಟುಂಬದವರ ಜತೆ ಅದರಲ್ಲೂ ನನ್ನ ತಾಯಿ ಜೊತೆ ಮೊದಲ ಸಲ ವೇದಿಕೆ ಹಂಚಿಕೊಂಡಿದ್ದು ಇದೆ ಪ್ರಥಮ. ನಾನು ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಕಾಣಿಸಿಕೊಂಡರು ಇಲ್ಲಿಯವರೆಗೂ ನಮ್ಮ ಕುಟುಂಬದವರ ಜತೆ ವೇದಿಕೆ ಹಂಚಿಕೊಂಡಿರಲಿಲ್ಲ. –ಮಂಜುನಾಥ್, ಶಾಸಕ.

ಕಾರ್ಯಕ್ರಮದಲ್ಲಿ ಸಾಯಿ ಮಂದಿರದ ಧರ್ಮದರ್ಶಿಗಳಾದ ರತ್ನಮ್ಮ ಪ್ರೇಮ್‌ಕುಮಾರ್, ಗ್ರಾಪಂ ಅಧ್ಯಕ್ಷ ಜವರೇಗೌಡ, ಉಪಾಧ್ಯಕ್ಷೆ ವತ್ಸಲ, ಗ್ರಾಮದ ಯಜಮಾನರಾದ ಜಗದೀಶ್ ಪಾಪೇಗೌಡ, ಪಿಎಸಿಎಸ್ ಅಧ್ಯಕ್ಷ ಮಂಜು, ವೇಣುಗೋಪಾಲ ವಿದ್ಯಾ ಸಂಸ್ಥೆ ಅಧ್ಯಕ್ಷ ವಿಶ್ವೇಶ್ವರಯ್ಯ, ಸಂಸ್ಥೆ ತಾಲೂಕು ಯೋಜನಾಧಿಕಾರಿ ರಮೇಶ್, ಪ್ರೌಢಶಾಲಾ ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಹರೀಶ್, ಮುಖ್ಯ ಶಿಕ್ಷಕಿ ಸರಳ, ಸಂಸ್ಥೆಯ ವಿಸ್ತರಣಾಧಿಕಾರಿ ಲಕ್ಷ್ಮಿ, ಸುನಂದ, ಸೇವಾ ಪ್ರತಿನಿಧಿ ಭಾರತಿ ಸುರೇಶ್, ಪ್ರಗತಿ ಬಂಧು ಒಕ್ಕೂಟದ ಅಧ್ಯಕ್ಷ ಶಿವರಾಜ್, ಜಯಮಾಲ, ಲೀಲಾವತಿ, ದ್ರಾಕ್ಷಾಯಿಣಿ, ಸರಸ್ವತಿ, ಜ್ಯೋತಿ, ಶಿಲ್ಪ ಹಾಗೂ ಹಲವಾರು ಸಂಘ ಸಂಸ್ಥೆಯ ಪ್ರತಿನಿಧಿಗಳು ಹಾಜರಿದ್ದರು.

ನೀರಿನ ಕರ ಹೆಚ್ಚಿಸುವುದು ಸರಿಯಲ್ಲ

ಮಾಜಿ ಮೇಯರ್ ಬಿ.ಎಲ್.ಭೈರಪ್ಪ



ಮೈಸೂರು,ಡಿ.18(ಎಂಟಿವೈ)– ಒಳಚರಂಡಿ ವ್ಯವಸ್ಥೆ ನಿರ್ವಹಣೆ ಹಾಗೂ ವಿವಿಧ ಕಾರಣವನ್ನು ಮುಂದಿಟ್ಟುಕೊಂಡು ಮಹಾನಗರ ಪಾಲಿಕೆ ವಾಣಿಜ್ಯ ಕಟ್ಟಡ ಹಾಗೂ ಅಪಾರ್ಟ್‌ಮೆಂಟ್‌ಗಳ ನಿವಾಸಗಳಿಗೆ ನೀರಿನ ತೆರಿಗೆ ಹೆಚ್ಚಿಸುವ ನಿರ್ಣಯ ಕೈಗೊಂಡಿರುವುದು ಸರಿಯಲ್ಲ ಎಂದು ಮಾಜಿ ಮೇಯರ್ ಬಿ.ಎಲ್. ಭೈರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀರಿನ ಶುಲ್ಕ ಹೆಚ್ಚಳಕ್ಕೆ ಒಳಚರಂಡಿ ವ್ಯವಸ್ಥೆ ಹಾಗೂ ಇನ್ನಿತರ ನಿರ್ವಹಣೆಗೆ ಸಂಪನ್ಮೂಲ ಕ್ರೂಢೀಕರಣ ಮಾಡಬೇಕಾಗಿದೆ ಎಂದು ಕಾರಣ ನೀಡಿರುವುದು ಸಮರ್ಥನೀಯವಲ್ಲ. ವಾಣಿಜ್ಯ ಕಟ್ಟಡ ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿರುವವರೆಲ್ಲರೂ ಸಕಾಲಿಕವಾಗಿ ತೆರಿಗೆ ಕಟ್ಟುತ್ತಿರುವವರೇ ಆಗಿದ್ದಾರೆ. ಹೀಗಾಗಿ ಇವರಿಗೆ ಹೊರೆ ಹೇರದೇ, ಬಾಕಿ ಉಳಿಸಿಕೊಂಡಿರುವ ಬಡಾವಣೆ, ಪ್ರದಶಗಳಲ್ಲಿನ ನೀರಿನ ಕರ ಸಂಗ್ರಹ ಮಾಡಲು ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

ಸೋರಿಕೆ ಆಗುತ್ತಿರುವ ಕಡೆ ಪಾಲಿಕೆ ಕರ ವಸೂಲಿಗೆ ಕ್ರಮ ಕೈಗೊಳ್ಳುವ ಬದಲು ಸಕಾಲಿಕವಾಗಿ ತೆರಿಗೆ ಪಾವತಿಸುವವರ ಮೇಲೆ ಹೊರೆ ಹೇರುವುದು ಸರಿಯಲ್ಲ. ಈಗಾಗಲೇ ಈ ರೀತಿ 120 ಕೋಟಿ ರೂ., ನೀರಿನ ಹಾಗೂ ಇನ್ನಿತರ ಕರ ಬಾಕಿ ಉಳಿದಿದೆ. ಆದರೆ ರಾಜಕಾರಣ ಹಾಗೂ ಜಾತಿ ಕಾರಣದಿಂದಾಗಿ ಕೆಲ ಬಡಾವಣೆ, ಪ್ರದೇಶಗಳಲ್ಲಿನ ಬಾಕಿ ಸಂಗ್ರಹಣೆಗೆ ಪಾಲಿಕೆ ಮುಂದಾಗಿಲ್ಲ. ಹೀಗಾಗಿ ಅಲ್ಲಿ ಪೋಲಾಗುತ್ತಿರುವ ನೀರಿನ ಪ್ರಮಾಣವೂ ಹೆಚ್ಚಾಗಿದೆ. ಆದ್ದರಿಂದ ಬಾಕಿ ಕರ ಸಂಗ್ರಹಣೆಗೆ ಗಮನ ಹರಿಸಿ, ಸಕಾಲಿಕವಾಗಿ ಪಾವತಿಸುವವರ ಮೇಲಿನ ಹೆಚ್ಚಳ ನಿರ್ಧಾರ ಕೈಬಿಡಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ವಾಸು, ವೆಂಕಟೇಶ್ ಇದ್ದರು.

ಎಫ್‌ಐಎಚ್ ನೇಷನ್ಸ್ ಕಪ್: ಚೊಚ್ಚಲ ಟ್ರೋಫಿ ಗೆದ್ದ ಭಾರತ ಮಹಿಳಾ ಹಾಕಿ ತಂಡ



ಸ್ಪೇನ್, ಡಿ.18– ವೆಲೆನ್ಸಿಯಾದಲ್ಲಿ ನಡೆದ ಎಫ್‌ಐಎಚ್ ಮಹಿಳಾ ನೇಷನ್ಸ್ ಕಪ್ 2022ರ ಫೈನಲ್‌ನಲ್ಲಿ ಭಾರತೀಯ ಮಹಿಳಾ ಹಾಕಿ ತಂಡವು ಸ್ಪೇನ್ ಅನ್ನು 1–0 ಗೋಲುಗಳಿಂದ ಸೋಲಿಸಿ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಈ ಪಂದ್ಯಾವಳಿಯನ್ನು ಗೆಲ್ಲುವ ಮೂಲಕ ಭಾರತ ಮಹಿಳಾ ಹಾಕಿ ಪ್ರೊ ಲೀಗ್ 2023–24ಗೆ ಅರ್ಹತೆ ಪಡೆದಿದೆ. ಅಂತಿಮ ಪಂದ್ಯದಲ್ಲಿ ಭಾರತದ ಪರ ಗುರ್ಜಿತ್ ಕೌರ್ (6ನೇ ನಿಮಿಷದಲ್ಲಿ) ಏಕೈಕ ಗೋಲು ದಾಖಲಿಸಿದರು.

ಸವಿತಾ ಪುನಿಯಾ ನೇತೃತ್ವದ ಭಾರತ ಮಹಿಳಾ ತಂಡ ಫೈನಲ್ ಪಂದ್ಯದಲ್ಲಿ ಭರ್ಜರಿ ಆರಂಭ ಪಡೆದಿತ್ತು. ಪಂದ್ಯದ ಆರನೇ ನಿಮಿಷದಲ್ಲಿ ಗುರ್ಜಿತ್ ಕೌರ್ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ತಂಡದ ಖಾತೆ ತೆರೆದರು.

ಪಂದ್ಯದ ಎರಡನೇ ಕ್ವಾರ್ಟರ್‌ನಲ್ಲೂ ತಮ್ಮ ಪ್ರಾಬಲ್ಯವನ್ನು ಮುಂದುವರಿಸಿದ ಭಾರತದ ಆಟಗಾರರು ಪಂದ್ಯದ 18ನೇ ನಿಮಿಷದಲ್ಲಿ ಮತ್ತೊಂದು ಪೆನಾಲ್ಟಿ ಕಾರ್ನರ್ ಗಳಿಸಿದರು. ಆದರೆ ಈ ಬಾರಿ ಗುರ್ಜಿತ್ ಈ ಅವಕಾಶವನ್ನು ಸದು ಪಯೋಗಪಡಿಸಿಕೊಳ್ಳಲು ವಿಫಲರಾದರು. ಇದಾದ ಬಳಿಕ ಪಂದ್ಯದ 22ನೇ ನಿಮಿಷದಲ್ಲಿ ಸ್ಪೇನ್ ತಂಡ ಪ್ರತಿದಾಳಿ ನಡೆಸಿ ಪೆನಾಲ್ಟಿ ಕಾರ್ನರ್ ಅವಕಾಶ ಪಡೆದರೂ ಭಾರತದ ಬಲಿಷ್ಠ ರಕ್ಷಣಾ ಪಡೆ ತಮ್ಮ ಅವಕಾಶವನ್ನು ವಿಫಲಗೊಳಿಸಿತು.

ದ್ವಿತೀಯಾರ್ಧದ ಆರಂಭದಲ್ಲಿ ಸ್ಪೇನ್ ಆಕ್ರಮಣಕಾರಿ ಆಟವಾಡಿತು. ಆದರೆ ಭಾರತೀಯ ಮಹಿಳೆಯರ ವಿರುದ್ಧ ಈ ಶೈಲಿಯನ್ನು ಹೆಚ್ಚು ಕಾಲ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಪಂದ್ಯದ 32ನೇ ನಿಮಿಷದಲ್ಲಿ ಟೀಂ ಇಂಡಿಯಾ ಮತ್ತೊಂದು ಪೆನಾಲ್ಟಿ ಗಳಿಸಿತು. ಆದರೆ ಈ ವೇಳೆ ಗುರ್ಜಿತ್ ಗೋಲು ಹೊಡೆಯುವಲ್ಲಿ ವಿಫಲರಾದರು.

ಎಫ್‌ಐಎಚ್ ಮಹಿಳಾ ನೇಷನ್ಸ್ ಕಪ್ 2022 ಗೆದ್ದ ಭಾರತೀಯ ಮಹಿಳಾ ಹಾಕಿ ತಂಡದ ಪ್ರತಿ ಆಟಗಾರನಿಗೆ ರೂ 2 ಲಕ್ಷ ಮತ್ತು ಪ್ರತಿ ಸಹಾಯಕ ಸಿಬ್ಬಂದಿಗೆ ರೂ 1 ಲಕ್ಷವನ್ನು ಹಾಕಿ ಇಂಡಿಯಾ ಘೋಷಿಸಿದೆ.

ಮನೆಗೆ ಆಕಸ್ಮಿಕ ಬೆಂಕಿ, ನಿದ್ರೆಯಲ್ಲಿದ್ದ ಆರು ಮಂದಿ ಸಜೀವ ದಹನ

ತೆಲಂಗಾಣ, ಡಿ.18– ತೆಲಂಗಾಣದ ಮಂಚಿರ್ಯಾಲ್‌ದಲ್ಲಿ ಭೀಕರ ಅಗ್ನಿ ದುರಂತ ಸಂಭವಿಸಿದೆ. ಮನೆಗೆ ಆಕಸ್ಮಿಕ ಬೆಂಕಿ ತಗುಲಿ ಒಂದೇ ಕುಟುಂಬ ಆರು ಮಂದಿ ಸಜೀವ ದಹನವಾಗಿದ್ದಾರೆ.

ಮದ್ಯರಾತ್ರಿ ಆಕಸ್ಮಿಕವಾಗಿ ಬೆಂಕಿ ತಗುಲಿದ್ದು, ಮನೆ ಮಾಲೀಕ ಸೇರಿ ಒಂದೇ ಕುಟುಂಬದ ಆರು ಜನ ಸಜೀವ ದಹನವಾಗಿದ್ದಾರೆ. ಈ ಬೆಂಕಿ ಅವಘಡದಲ್ಲಿ ಮನೆ ಯಜಮಾನ ಶಿವಯ್ಯ (50), ಅವರ ಪತ್ನಿ ಪದ್ಮಾ (45), ಪದ್ಮಾ ಅವರ ಅಕ್ಕನ ಮಗಳು ಮೌನಿಕಾ (23) ಮತ್ತು ಆಕೆಯ ಇಬ್ಬರು ಪುತ್ರಿಯರು ಹಾಗು ಸಂಬಂಧಿ ಶಾಂತಯ್ಯ ಸಾವನ್ನಪ್ಪಿದ್ದಾರೆ. ಮಾಹಿತಿ ಪಡೆದ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದಾರೆ. ಮೃತರಲ್ಲಿ ಸಿಂಗರೇಣಿ ಉದ್ಯೋಗಿ ಶಾಂತಯ್ಯ ಕೂಡ ಸೇರಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸುವಷ್ಟರಲ್ಲಿ ಮನೆಯಲ್ಲಿದ್ದವರು ಸಜೀವ ದಹನವಾಗಿದ್ದಾರೆ.

ಮೊದಲ ಟೆಸ್ಟ್: ಬಾಂಗ್ಲಾದೇಶ ವಿರುದ್ಧ ಭಾರತಕ್ಕೆ 188 ರನ್‌ಗಳ ಭರ್ಜರಿ ಜಯ



ಢಾಕಾ, ಡಿ.18– ಬಾಂಗ್ಲಾದೇಶ ವಿರುದ್ಧದ ಮೊದಲ ಟೆಸ್ಟ್‌ಪಂದ್ಯವನ್ನು ಭಾರತ 188 ರನ್‌ಗಳಿಂದ ಭರ್ಜರಿಯಾಗಿ ಗೆದ್ದಿದ್ದು, ಈ ಮೂಲಕ ಎರಡು ಪಂದ್ಯಗಳ ಸರಣಿಯಲ್ಲಿ 1–0 ಅಂತರದ ಮುನ್ನಡೆ ಸಾಧಿಸಿದೆ.

ಚತ್ತೊಗ್ರಾಮ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ ನೀಡಿದ 513 ರನ್‌ಗಳ ಬೃಹತ್ ಮೊತ್ತವನ್ನು ಬೆನ್ನು ಹತ್ತಿದ ಬಾಂಗ್ಲಾದೇಶ ತಂಡ ಎರಡನೇ ಇನ್ನಿಂಗ್ಸ್‌ನಲ್ಲಿ 324 ರನ್‌ಗಳಿಗೆ ಆಲೌಟ್ ಆಯಿತು. ಆ ಮೂಲಕ ಭಾರತ 188 ರನ್‌ಗಳಿಂದ ಪಂದ್ಯ ಗೆದ್ದಿದ್ದು, ಈ ಮೂಲಕ ಎರಡು ಪಂದ್ಯಗಳ ಸರಣಿಯಲ್ಲಿ 1–0 ಅಂತರದ ಮುನ್ನಡೆ ಸಾಧಿಸಿದೆ.

ಇನ್ನು ಮೊದಲ ಇನ್ನಿಂಗ್ಸ್‌ನಲ್ಲಿ ಭಾರತ 133.05 ಓವರ್‌ಗಳಲ್ಲಿ 404 ರನ್ ಗಳಿಸಿ ಆಲೌಟ್ ಆಗಿತ್ತು. ಇದಕ್ಕೆ ಪ್ರತಿಯಾಗಿ ಬಾಂಗ್ಲಾ ತಂಡ 55.5 ಓವರ್‌ಗಳಲ್ಲಿ ಕೇವಲ 150 ರನ್ ಗಳಿಸಿ ಸರ್ವ ಪತನ ಕಂಡಿತ್ತು. ಎರಡನೇ ಇನ್ನಿಂಗ್ಸ್‌ನಲ್ಲಿ 61.4 ಓವರ್ ಆಡಿ ಎರಡು ವಿಕೆಟ್ ನಷ್ಟದೊಂದಿಗೆ 258 ರನ್ ಗಳಿಸಿದ್ದ ಭಾರತ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡು, ಬಾಂಗ್ಲಾ ತಂಡಕ್ಕೆ 513 ರನ್‌ಗಳ ಗುರಿ ನೀಡಿತ್ತು.

ಮೊದಲ ಇನ್ನಿಂಗ್ಸ್‌ನಲ್ಲಿ ಭಾರತದ ಪರ 90 ರನ್‌ಗಳಿಸಿದ ಪೂಜಾರ ಮಿಂಚಿದ್ದರು. ಬೌಲಿಂಗ್‌ನಲ್ಲಿ ಕುಲದೀಪ್‌ಯಾದವ್5 ವಿಕೆಟ್‌ಗಳಿಸಿ ಗಮನ ಸೆಳೆದಿದ್ದರು. ಎರಡನೇ ಇನ್ನಿಂಗ್ಸ್‌ನಲ್ಲಿ ಭಾರತದ ಬ್ಯಾಟರ್‌ಗಳಾದ ಶುಭಮನ್ ಗಿಲ್110, ಚೇತೇಶ್ವರ ಪೂಜಾರ 102 ರನ್‌ಸಿಡಿಸಿದ್ದು ಪಂದ್ಯದ ಮತ್ತೊಂದು ವಿಶೇಷವಾಗಿತ್ತು. ಎರಡನೇ ಇನ್ನಿಂಗ್ಸ್‌ನಲ್ಲಿ ಬಾಂಗ್ಲಾ ಬ್ಯಾಟರ್‌ಜಾಕಿರ್ ಹುಸೇನ್100 ಗಳಿಸಿ ಗಮನಾರ್ಹ ಪ್ರದರ್ಶನ ನೀಡಿದರು. ಈ ಪಂದ್ಯದಲ್ಲಿ ಅದ್ಭುತ ಬೌಲಿಂಗ್ ಮಾಡಿ 9 ವಿಕೆಟ್ ಕಬಳಿಸಿದ ಕುಲದೀಪ್ ಯಾದವ್ ಅರ್ಹವಾಗಿಯೇ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. 2–1 ಅಂತರದಿಂದ ಏಕದಿನ ಸರಣಿಯನ್ನು ಗೆದ್ದಿದ್ದ ಬಾಂಗ್ಲಾ, ಟೆಸ್ಟ್ ಸರಣಿಯಲ್ಲಿ 1–0 ಅಂತರದ ಹಿನ್ನಡೆ ಕಂಡಿದೆ.

ಇಂದು ಪ್ರತಿಭಟನೆ

ವಿರಾಜಪೇಟೆ, ಡಿ.18– ನಿವೇಶನ ನೀಡುವಂತೆ ಆಗ್ರಹಿಸಿ ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಕಾರ್ಮಾಡು ಗ್ರಾಮದ ನಿವೇಶನ ರಹಿತ ಆದಿವಾಸಿಗಳು ಮತ್ತು ದಲಿತರು ಸಿ.ಪಿ.ಐ(ಎಂ) ವತಿಯಿಂದ ಡಿ.19 ರಂದು ಅಮ್ಮತ್ತಿ ಕಾರ್ಮಾಡು ಗ್ರಾಮ ಪಂಚಾಯತಿ ಎದುರು ಪ್ರತಿಭಟನೆ ಹಮ್ಮಿಕೊಂಡಿದ್ದಾರೆ.

ಅನೇಕ ವರ್ಷಗಳಿಂದಲೂ ಬಾಡಿಗೆ ಮನೆ ಹಾಗೂ ಲೈನ್ ಮನೆಗಳಲ್ಲಿ ವಾಸ ಮಾಡುತ್ತಿರುವ ಜನರು ಸ್ವಂತ ನಿವೇಶನಕ್ಕಾಗಿ ಎಲ್ಲಾ ಅಧಿಕಾರಿಗಳಿಗೂ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಆದ್ದರಿಂದ ನಿವೇಶನ ನೀಡುವಂತೆ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಿ.ಪಿ.ಐ(ಎಂ) ಕಾರ್ಯದರ್ಶಿ ಎ. ಮಹದೇವ್ ತಿಳಿಸಿದ್ದಾರೆ.

ಕಂದಾಯ ಅಧಿಕಾರಿಗಳು ಅವರ ಕೈಗೊಂಬೆಗಳಾಗಿದ್ದಾರೆ. ನಿವೇಶನ ರಹಿತರಿಗೆ ನಿವೇಶನ ನೀಡುವಂತೆ ಸ್ಥಳೀಯ ಪಂಚಾಯಿತಿಗೆ ಮನವಿ ನೀಡಿದರೆ, ತಹಶಿಲ್ದಾರ್ ಬಳಿ ಹೋಗಿ ಎನ್ನುತ್ತಾರೆ. ತಹಶಿಲ್ದಾರ್ ಬಳಿ ಹೋದಾಗ, ಜಿಲ್ಲಾಧಿಕಾರಿಯನ್ನು ಕೇಳಬೇಕು ಎನ್ನುತ್ತಾರೆ. ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದಾಗ, ಸ್ಥಳಿಯ ಪಂಚಾಯಿತಿಗೆ ನಿವೇಶನ ನೀಡಲು ಅಧಿಕಾರವಿದೆ ಎನ್ನುತ್ತಾರೆ. ಜನಪ್ರತಿನಿಧಿಗಳು ಬಡ ಕಾರ್ಮಿಕರ ದಲಿತರ ಬಗ್ಗೆ ಗಮನ ಹರಿಸುತ್ತಿಲ್ಲ ಅದರಿಂದ ನಿವೇಶನ ನೀಡುವವರೆಗೂ ಪಂಚಾಯಿತಿ ಎದುರು ಪ್ರತಿಭಟನೆ ಮುಂದುವರೆಯಲಿದೆ ಎಂದರು.

ಅಧಿವೇಶನದಲ್ಲಿ ಮಾಜಿ ಸೈನಿಕರ ಸಮಸ್ಯೆ ಬಗ್ಗೆ ಚರ್ಚೆ

ಮಾಜಿ ಸೈನಿಕರ, ಕುಟುಂಬದವರ ಕ್ರೀಡಾಕೂಟದಲ್ಲಿ ಶಾಸಕ ಕೆ.ಜಿ. ಬೋಪಯ್ಯ ಭರವಸೆ



ಮಡಿಕೇರಿ, ಡಿ.18– ಜಿಲ್ಲೆಯಲ್ಲಿರುವ ಮಾಜಿ ಸೈನಿಕರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಮತ್ತು ಹಲವು ಬೇಡಿಕೆಗಳನ್ನು ಜಿಲ್ಲಾಡಳಿತದ ಮುಂದಿಟ್ಟಿದ್ದಾರೆ. ಇವುಗಳ ಬಗ್ಗೆ ಈ ಬಾರಿ ನಡೆಯುವ ಅಧಿವೇಶನದಲ್ಲಿ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆಯುವುದಾಗಿ ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಭರವಸೆ ನೀಡಿದ್ದಾರೆ.

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಕೊಡಗು ಜಿಲ್ಲಾ ಘಟಕದ ವತಿಯಿಂದ ಮಾಜಿ ಸೈನಿಕರಿಗೆ ಹಾಗೂ ಅವರ ಕುಟುಂಬ ವರ್ಗದವರಿಗಾಗಿ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಪ್ರಥಮ ವರ್ಷದ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಯ ತವರೂರು ಮತ್ತು ಯೋಧರ ನೆಲೆಬೀಡು ಕೊಡಗಿನ ಯೋಧರು ದೇಶಕ್ಕಾಗಿ ತ್ಯಾಗ, ಬಲಿದಾನಗೈದಿದ್ದಾರೆ. ಫೀ.ಮಾ. ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಅವರುಗಳು ಸೇನೆಯ ನೇತೃತ್ವ ವಹಿಸಿ ವಿಶ್ವದ ಗಮನ ಸೆಳೆದಿದ್ದಾರೆ. ನಾಲ್ವರು ಜನರಲ್‌ಗಳಿದ್ದು, ಪುಟ್ಟ ಜಿಲ್ಲೆ ಕೊಡಗು ಸೇನಾ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದೆ ಎಂದರು.

ಜಿಲ್ಲೆಯ ಮಾಜಿ ಯೋಧರುಗಳಿಗೆ ಅನೇಕ ಸಮಸ್ಯೆಗಳಿವೆ ಮತ್ತು ವಿವಿಧ ಬೇಡಿಕೆಗಳ ಬಗ್ಗೆ ಪ್ರಸ್ತಾಪಿಸುತ್ತಲೇ ಇದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ದೇಶವನ್ನು ರಕ್ಷಿಸುವ ಯೋಧರಿಗೆ ಮೊದಲ ಆದ್ಯತೆ ನೀಡುತ್ತಿದೆ. ಪ್ರಧಾನಮಂತ್ರಿಗಳು 'ಒನ್ ರ್‍ಯಾಂಕ್ ಒನ್ ಪೆನ್‌ಷನ್' ಬೇಡಿಕೆಯನ್ನು ವಿಳಂಬ ಮಾಡದೆ ಈಡೇರಿಸಿದ್ದಾರೆ ಎಂದರು.

ನಿವೃತ್ತಿಯಾದ ನಂತರ ನೆಮ್ಮದಿಯ ಬದುಕು ಸಾಗಿಸಬೇಕೆಂದು ಮಾಜಿ ಸೈನಿಕರು ಕೃಷಿಯನ್ನು ಅವಲಂಬಿಸುತ್ತಾರೆ. ಇದಕ್ಕಾಗಿ ಕೃಷಿಭೂಮಿ ಬೇಕು ಮತ್ತು ವಾಸಕ್ಕೆ ನಿವೇಶನಕ್ಕೆ ಬೇಕು ಎನ್ನುವ ಬೇಡಿಕೆ ಇದೆ. ಸಾಮಾಜಿಕ ಅರಣ್ಯವಾಗಿ ಮಾರ್ಪಟ್ಟಿರುವ ಜಿಲ್ಲೆಯ ಕಂದಾಯ ಭೂಮಿಯನ್ನು ಮರಳಿ ಪಡೆದು ಜಮೀನಿಗಾಗಿ ಅರ್ಜಿ ಸಲ್ಲಿಸಿದವರಿಗೆ ಹಂಚಿಕೆ ಮಾಡುವ ಬಗ್ಗೆ ಚಿಂತನೆ ಇದೆ. ಈ ಪ್ರಕರಣ ನ್ಯಾಯಾಲಯದಲ್ಲಿದ್ದು, ಭೂಮಿ ಕಂದಾಯ ಇಲಾಖೆಗೆ ಶೀಘ್ರ ಮರಳಲಿದೆ ಎನ್ನುವ ವಿಶ್ವಾಸವಿದೆ. ಯಾರೂ ನಿರಾಶರಾಗಬೇಡಿ ಎಂದು ಬೋಪಯ್ಯ ಹೇಳಿದರು.

ಮಾಜಿ ಯೋಧರ ಬೇಡಿಕೆಗಳಿಗೆ ಸ್ಪಂದಿಸುವ ಆಸಕ್ತಿ ಸರ್ಕಾರಕ್ಕಿದೆ, ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿಗಳು ಕೂಡ ಘೋಷಿಸಿದ್ದಾರೆ. ಆದರೂ ಅಧಿವೇಶನದಲ್ಲಿ ಮಾಜಿ ಸೈನಿಕರ ಪರವಾಗಿ ಮಾತನಾಡುವೆ. ನಾನೂ ಸರ್ಕಾರದ ಪ್ರತಿನಿಧಿಯಾಗಿರುವುದರಿಂದ ಸರ್ಕಾರಕ್ಕೆ ಮುಜುಗರವಾಗದ ರೀತಿಯಲ್ಲಿ ಬೇಡಿಕೆಗಳ ಬಗ್ಗೆ ಮನವರಿಕೆ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ, ದೇಶದ ರಕ್ಷಣೆಗಾಗಿ ಶ್ರಮಿಸಿ ನಿವೃತ್ತರಾದ ಯೋಧರಿಗಾಗಿ ನನ್ನಿಂದಾದ ಉತ್ತಮ ಕಾರ್ಯವನ್ನು ನಾನು ಮಾಡಲೇಬೇಕಾಗಿದೆ. ಈ ಪ್ರಕ್ರಿಯೆ ಪ್ರಗತಿಯಲ್ಲಿದೆ, ಈಗಲೇ ಏನನ್ನೂ ಹೇಳಲಾರೆ, ಆದ ಮೇಲೆ ಘೋಷಿಸುವೆ ಎಂದರು. ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಕೊಡಗು ಜಿಲ್ಲಾಧ್ಯಕ್ಷ ಕೆ.ಪಿ.ಸೋಮಣ್ಣ ಅಧ್ಯಕ್ಷತೆಯಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ರಾಷ್ಟ್ರಮಟ್ಟದ ಪದಕ ವಿಜೇತ ಕ್ರೀಡಾಪಟು ಹಾಗೂ ಮಾಜಿ ಸೈನಿಕ ಬಾರನ ರಂಗನಾಥ್, ಸಂಘದ ಉಪಾಧ್ಯಕ್ಷ ಸುಧೀರ್, ಮಡಿಕೇರಿ ತಾಲೂಕು ಅಧ್ಯಕ್ಷ ಪಾನಿಕುಟ್ಟಿರ ಕುಟ್ಟಪ್ಪ, ಕೊಡಗು ಗೌಡ ಮಾಜಿ ಸೈನಿಕರ ಸಂಘದ ಕಾರ್ಯದರ್ಶಿ ತಳೂರು ಕಾಳಪ್ಪ ಸಂಚಾಲಕ ಸಿ.ಜಿ.ತಿಮ್ಮಯ್ಯ, ನಾಟೋಳಂಡ ಸೋಮಯ್ಯ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಅಂತ ರಾಷ್ಟ್ರೀಯ ಮಟ್ಟದ ಪದಕ ವಿಜೇತ ಕ್ರೀಡಾಪಟು ಹಾಗೂ ಮಾಜಿ ಸೈನಿಕ ಹೆಚ್.ಎ.ಚಿನ್ನಪ್ಪ ಅವರು ನಗರದ ಶ್ರೀಓಂಕಾರೇಶ್ವರ ದೇವಾಲಯದ ಬಳಿಯಿಂದ ಕ್ರೀಡಾಜ್ಯೋತಿಯೊಂದಿಗೆ ಜಿಲ್ಲಾ ಕ್ರೀಡಾಂಗಣಕ್ಕೆ ಆಗಮಿಸಿದರು. ಇದೇ ಸಂದರ್ಭ ಶಾಸಕ ಕೆ.ಜಿ. ಬೋಪಯ್ಯ ಹಾಗೂ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಅವರುಗಳು ಪಾರಿವಾಳಗಳನ್ನು ಹಾರಿಬಿಡುವ ಮೂಲಕ ಕ್ರೀಡಾಕೂಟವನ್ನು ಉದ್ಘಾಟಿಸಿದರು. ಬಳಿಕ ಜಿಲ್ಲೆಯ ಎಲ್ಲಾ ಮಾಜಿ ಸೈನಿಕರು, ವಿಧವಾ ವೇತನ ಪಡೆಯುತ್ತಿರುವ ಮಾಜಿ ಸೈನಿಕರ ಪತ್ನಿಯರು ಹಾಗೂ ಅವರ ಮಕ್ಕಳಿಗಾಗಿ ಕ್ರೀಡಾಕೂಟ ನಡೆಯಿತು. ಮಕ್ಕಳು, ಪುರುಷರು, ಮಹಿಳೆಯರಿಗೆ ವಿವಿಧ ವಿಭಾಗಗಳಲ್ಲಿ ನಡೆದ ಕ್ರೀಡಾಕೂಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಗಳು ಪಾಲ್ಗೊಂಡು ಸಂಭ್ರಮಿಸಿದರು. ಕ್ರೀಡಾಂಗಣದ ಸಮೀಪದ ಅರಸು ಭವನದಲ್ಲಿ ನಡೆದ ವೈದ್ಯಕೀಯ ತಪಾಸಣಾ ಶಿಬಿರದ ಲಾಭವನ್ನು ಮಾಜಿ ಯೋಧರು ಹಾಗೂ ಕುಟುಂಬ ವರ್ಗದವರು ಪಡೆದುಕೊಂಡರು.

ವಿಶ್ವ ಶಿಟಾರಿಯೋ ಕರಾಟೆ ಒಕ್ಕೂಟದಿಂದ ಅರುಣ್ ಮಾಚಯ್ಯಗೆ ಜೀವಮಾನ ಸಾಧನೆ ಪ್ರಶಸ್ತಿ

ಸಿಂಗಾಪುರದಲ್ಲಿ ನಡೆದ ವಾರ್ಷಿಕೋತ್ಸವದಲ್ಲಿ ಗೌರವ ಸ್ವೀಕಾರ

ಮಡಿಕೇರಿ, ಡಿ.18– ಕಳೆದ 5 ದಶಕಗಳಿಂದ ಕರಾಟೆ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಗಾಗಿ ಕೊಡಗಿನ ಚೆಪ್ಪುಡಿರ ಎಸ್.ಅರುಣ್ ಮಾಚಯ್ಯ ಅವರಿಗೆ ವಿಶ್ವ ಶಿಟಾರಿಯೋ ಕರಾಟೆ ಒಕ್ಕೂಟದ ವತಿಯಿಂದ ಜೀವಮಾನ ಸಾಧನೆಗಾಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಸಿಂಗಾಪುರದಲ್ಲಿ ನಡೆದ ಶಿಟಾರಿಯೋ ಕರಾಟೆ ಸಂಸ್ಥೆಯ 58ನೇ ವಾರ್ಷಿಕೋತ್ಸವದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸದಸ್ಯರೂ ಆಗಿರುವ ಚೆಪ್ಪುಡಿರ ಅರುಣ್ ಮಾಚಯ್ಯ ಅವರು ಈ ಗೌರವವನ್ನು ಸ್ವೀಕರಿಸಿದರು. ಶಿಟಾರಿಯೋ ಕರಾಟೆ ಶೈಲಿಯನ್ನು ಭಾರತದಲ್ಲಿ ಮಾತ್ರವಲ್ಲದೆ ಏಷ್ಯಾದಲ್ಲಿಯೂ ಪರಿಚಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಅರುಣ್ ಮಾಚಯ್ಯ ಅವರು ಇದನ್ನು ಮುಂದಿನ ಪೀಳಿಗೆ ಮುಂದುವರಿಸುವಂತೆ ಮಾಡುವಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಶಿಟಾರಿಯೋ ಕ್ಷೇತ್ರದಲ್ಲಿ ಅರುಣ್ ಮಾಚಯ್ಯ ಅವರ ಬದ್ಧತೆ ಮತ್ತು ನಿಷ್ಠೆಗೆ ಎಂದಿಗೂ ಬೆಲೆ ಕಲ್ಪಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯನ್ನು ಪರಿಗಣಿಸಿ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗಿದೆ ಎಂದು ಪ್ರಶಸ್ತಿ ಪತ್ರದಲ್ಲಿ ವಿವರಿಸಲಾಗಿದೆ.

ಜಗತ್ತಿನ 70 ರಾಷ್ಟ್ರಗಳು ಪಾಲ್ಗೊಂಡಿದ್ದ ಲಂಡನ್ ಕಾಮನ್‌ವೆಲ್ತ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಇತ್ತೀಚಿಗೆ ಪಾಲ್ಗೊಂಡಿದ್ದ ಅರುಣ್ ಮಾಚಯ್ಯ ಅವರು ಭಾರತ ತಂಡಕ್ಕೆ ಆಯ್ಕೆಗೊಂಡಿರುವ 70 ಕರಾಟೆಪಟುಗಳ ತಂಡದ ನಾಯಕತ್ವ ವಹಿಸಿದ್ದರು.

ಅಖಿಲ ಭಾರತ ಶಿಟಾರಿಯೋ ಕರಾಟೆ ಸಂಸ್ಥೆಯ ಮತ್ತು ದಕ್ಷಿಣ ಭಾರತ ಕರಾಟೆ ಫೆಡರೇಷನ್ ಅಧ್ಯಕ್ಷರಾಗಿ, ಕರಾಟೆ ಇಂಡಿಯಾ ಆರ್ಗನೈಜೇಷನ್ ಹಿರಿಯ ಉಪಾಧ್ಯಕ್ಷರು ಹಾಗೂ ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಸಿ.ಎಸ್. ಅರುಣ್ ಮಾಚಯ್ಯ ಅವರು ಅಂತರಾಷ್ಟ್ರೀಯ ಕರಾಟೆ ತೀರ್ಪುಗಾರರಾಗಿದ್ದಾರೆ. ಕರಾಟೆಯಲ್ಲಿ 8ನೇ ಡ್ಯಾನ್ ಬ್ಲಾಕ್ ಬೆಲ್ಟ್ ಪದವೀಧರಾಗಿರುವ ಅರುಣ್ ಮಾಚಯ್ಯ, ಈ ಹಿಂದೆ ವಿಶ್ವದ ಹಲವೆಡೆ ನಡೆದ ಹಲವಾರು ಅಂತರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು.

ಇಂದು ಗೃಹರಕ್ಷಕರ ದಿನಾಚರಣೆ

ಮಡಿಕೇರಿ, ಡಿ.18– ಕೊಡಗು ಜಿಲ್ಲಾ ಗೃಹರಕ್ಷಕ ದಳದ ವತಿಯಿಂದ ಗೃಹ ರಕ್ಷಕರ ದಿನಾಚರಣೆಯು ಡಿ.19 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ಗೃಹರಕ್ಷಕ ದಳ ಕಚೇರಿ ಆವರಣದಲ್ಲಿ ನಡೆಯಲಿದೆ.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ, ಜಿಲ್ಲಾ ಪೊಲೀಸ್ ಉಪಾಧೀಕ್ಷಕರು ಮತ್ತು ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟರಾದ ಜಿ.ಎಸ್. ಗಜೇಂದ್ರ ಪ್ರಸಾದ್, ವಿರಾಜಪೇಟೆ ಪೊಲೀಸ್ ಉಪಾಧೀಕ್ಷಕರಾದ ಎನ್. ನಿರಂಜನ್ ರಾಜೇ ಅರಸ್, ಸೋಮವಾರಪೇಟೆ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಆರ್.ವಿ.ಗಂಗಾಧರಪ್ಪ ಇತರರು ಪಾಲ್ಗೊಳ್ಳಲಿದ್ದಾರೆ.

ಹೆಚ್.ಎಂ.ವೀರಾಚಾರ್ ನಿಧನ



ಕುಶಾಲನಗರ, ಡಿ.18– ಸಮೀಪದ ಹೆಬ್ಬಾಲೆ ಗ್ರಾಮದ ನಿವಾಸಿ ರಾಜ್ಯ ಪ್ರಶಸ್ತಿ ಪುರಸ್ಕೃತ ನಿವೃತ್ತ ಮುಖ್ಯ ಶಿಕ್ಷಕರಾಗಿದ್ದ ಹೆಚ್.ಎಂ.ವೀರಾಚಾರ್ (91) ಭಾನುವಾರ ಸ್ವಗೃಹದಲ್ಲಿ ನಿಧನ ಹೊಂದಿದ್ದಾರೆ. ಮೃತರು ಮೂವರು ಪುತ್ರಿಯರು ಹಾಗೂ ಮೂವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ (ಡಿ.19) ಸ್ವಗ್ರಾಮ ಹೆಬ್ಬಾಲೆಯಲ್ಲಿ ನಡೆಯಲಿದೆ ಎಂದು ಅವರ ಪುತ್ರ ಅಪ್ಪಣ ತಿಳಿಸಿದ್ದಾರೆ.

ಪೊನ್ನಚ್ಚನ ನಾಣಯ್ಯ



ನಾಪೋಕ್ಲು, ಡಿ.18– ಇಲ್ಲಿಗೆ ಸಮೀಪದ ಪಾರಾಣೆ ಗ್ರಾಮ ಪಂಚಾಯತಿಯ ಬಾವಲಿ ಗ್ರಾಮದ ಮಾಜಿ ಸೈನಿಕ ಪೊನ್ನಚ್ಚನ ನಾಣಯ್ಯ (ಸಿದ್ದಣ) ಶನಿವಾರ ನಿಧನರಾಗಿದ್ದಾರೆ. ಅವರಿಗೆ 72 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆ ಭಾನುವಾರ ಸ್ವಗ್ರಾಮದಲ್ಲಿ ನೆರವೇರಿತು. ಶ್ರೀಯುತರು ಪತ್ನಿ ತಾರಾಮಣಿ, ಪುತ್ರ ರೋಹಿತ್, ಪುತ್ರಿ ಭವಿತ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

ಜನವರಿಯಲ್ಲಿ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ

ಕುಶಾಲನಗರ ಹೊಸ ತಾಲೂಕಿನ ಜನರ ಉತ್ಸವವಾಗಿಸಲು ಕರೆ



ಕುಶಾಲನಗರ, ಡಿ.18– ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಜನವರಿ ತಿಂಗಳಲ್ಲಿ ಆಯೋಜಿಸಲಿರುವ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ಸಿಗೆ ಕೈಜೋಡಿಸುವಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಮನವಿ ಮಾಡಿದರು.

ಕುಶಾಲನಗರದ ಕನ್ನಿಕಾ ಇಂಟರ್ ನ್ಯಾಶನಲ್ ಹೋಟೆಲ್ ಸಭಾಂಗಣದಲ್ಲಿ ಸಂಘ ಸಂಸ್ಥೆಗಳ ಪ್ರಮುಖರ ಹಾಗೂ ಊರಿನ ಹಿರಿಯರ ಉಪಸ್ಥಿತಿಯಲ್ಲಿ ನಡೆದ ಸಮ್ಮೇಳನದ ಪೂರ್ವ ಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಕನ್ನಡ ಸಾಹಿತ್ಯಸಮ್ಮೇಳನವನ್ನು ಅರ್ಥ ಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬ ಕನ್ನಡಿಗರ ಶ್ರಮ ಇಲ್ಲಿ ಮುಖ್ಯ. ತಾಲ್ಲೂಕಿನ ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಮೂಲಕ ಸಮ್ಮೇಳನ ಊರಿನ ಉತ್ಸವ ವಾಗಬೇಕಿದೆ.

ಕಸಾಪ ಜಿಲ್ಲಾ ನಿಕಟ ಪೂರ್ವ ಅಧ್ಯಕ್ಷ ಟಿ.ಪಿ. ರಮೇಶ್ ಮಾತನಾಡಿ, ಸಾಹಿತ್ಯ ಸಮ್ಮೇಳನಗಳು ಯುವಜನರನ್ನು ಸಾಹಿತ್ಯದೆಡೆಗೆ ಆಕರ್ಷಿಸುವ ಹಬ್ಬವಾಗಬೇಕಿದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹನೀಯರನ್ನು ಗುರುತಿಸಿ ಗೌರವಿಸುವ ವೇದಿಕೆ ಇದಾಗಿದೆ. ಆ ನಿಟ್ಟಿನಲ್ಲಿ ತಾಲೂಕಿನ ಪ್ರತಿಯೊಬ್ಬರು ಸಾಹಿತ್ಯ ಸಮ್ಮೇಳನಕ್ಕೆ ಸಾಕ್ಷಿಯಾಗಬೇಕೆಂದರು.

ಕಸಾಪ ವಿಶೇಷ ಆಹ್ವಾನಿತರಾದ ವಿ.ಪಿ.ಶಶಿಧರ್ ಮಾತನಾಡಿ, ಕುಶಾಲನಗರ ತಾಲೂಕಾಗಿ ಘೋಷಣೆಯಾದಾಗ ಮನತುಂಬಿ ಬಂದಿತ್ತು. ಇದೀಗ ಈ ಹೊಸ ತಾಲೂಕಿನಲ್ಲಿ ಜರುಗುತ್ತಿರುವ ಸಾಹಿತ್ಯ ಸಮ್ಮೇಳನ ಇತಿಹಾಸದಲ್ಲಿ ದಾಖಲಾಗುವಷ್ಟರ ಮಟ್ಟಿಗೆ ಅತ್ಯಂತ ಯಶಸ್ವಿಯಾಗಿ ಸಂಘಟಿಸಬೇಕಿದೆ ಎಂದರು

ಮತ್ತೋರ್ವ ನಿಕಟ ಪೂರ್ವ ಅಧ್ಯಕ್ಷ ಬಿ.ಎಸ್. ಲೋಕೇಶ್ ಸಾಗರ್, ಪುರಸಭಾ ಅಧ್ಯಕ್ಷ ಜಯವರ್ಧನ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ.ಎಸ್.ಮೂರ್ತಿ ಮಾತನಾಡಿದರು. ಪುರಸಭಾ ಉಪಾಧ್ಯಕ್ಷೆ ಸುರಯ್ಯಾ ಭಾನು, ತಾಲೂಕು ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ.ಡಿ.ರಂಗಸ್ವಾಮಿ, ತೊರೆನೂರು ಗ್ರಾಪಂ ಅಧ್ಯಕ್ಷೆ ರೂಪ ಮಹೇಶ್, ಉಪಾಧ್ಯಕ್ಷ ಎಂ.ಟಿ.ಬೇಬಿ, ನಂಜರಾಯಪಟ್ಟಣ ಗ್ರಾಪಂ ಅಧ್ಯಕ್ಷ ಸಿ.ಎಲ್. ವಿಶ್ವ, ಜಿಲ್ಲಾ ಕಸಾಪ ಪದಾಧಿಕಾರಿಗಳಾದ ಎಂ.ಇ.ಮೊಹಿದ್ದೀನ್, ಫ್ಯಾನ್ಸಿ ಮುತ್ತಣ್ಣ, ಟಿ.ಜಿ.ಪ್ರೇಮಕುಮಾರ್ ಇದ್ದರು.

ಇದೇ ಸಂದರ್ಭ ಸಮ್ಮೇಳನದ ರೂಪು ರೇಷೆಗಳ ಬಗ್ಗೆ ವಿಸ್ತೃತವಾಗಿ ಚರ್ಚಿಸಿ, ಸಮ್ಮೇಳನದ ಯಶಸ್ಸಿಗೆ ಪೂರಕವಾಗುವಂತೆ ಸ್ವಾಗತ ಸಮಿತಿ, ಹಣಕಾಸು ಸಮಿತಿ ಸೇರಿದಂತೆ ವಿವಿಧ ಉಪ ಸಮಿತಿಗಳನ್ನು ರಚಿಸಲಾಯಿತು.

ಸಮ್ಮೇಳನದ ದಿವಸ ಆತಿಥ್ಯಕ್ಕೆ ಸಾಹಿತ್ಯ ಪರಿಷತ್ತಿಗೆ ಅಗತ್ಯವಿದ್ದಲ್ಲಿ ಹತ್ತು ಕೊಠಡಿಗಳನ್ನು ಉದಾರವಾಗಿ ನೀಡುವುದಾಗಿ ಉದ್ಯಮಿಯೂ ಆದ ಕಸಾಪ ಸದಸ್ಯ ರವೀಂದ್ರ ರೈ ಸಭೆಯಲ್ಲಿ ಘೋಷಿಸಿದರು. ಕುಶಾಲನಗರ ಪುರಸಭೆ ಸದಸ್ಯರಾದ ರೂಪ ಉಮಾಶಂಕರ್, ವಿ.ಎಸ್. ಆನಂದಕುಮಾರ್, ಎಂ.ವಿ.ನಾರಾಯಣ, ಕೆ.ಜಿ.ಮನು, ನಿವೃತ್ತ ಪ್ರಾಂಶುಪಾಲ ಹೆಚ್.ಬಿ.ಲಿಂಗಮೂರ್ತಿ, ಸಬಲಂ ಭೋಜಣ್ಣ ರೆಡ್ಡಿ, ಉಪನ್ಯಾಸಕ ಫಿಲಿಪ್ ವಾಸ್, ಉ.ರಾ.ನಾಗೇಶ್, ಹೇಮಲತಾ, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಾದ ವೆಂಕಟೇಶ್ ಪೂಜಾರಿ, ಎಂ.ಕೃಷ್ಣ, ರಾಮದಾಸ್, ರವೀಂದ್ರ ರೈ, ನಾಗೇಗೌಡ, ಲೇಖನಾ, ಚಂದ್ರು, ಡಿ.ವಿ.ರಾಜೇಶ್, ಉಮಾಶಂಕರ್, ಕೆಬಿ.ರಾಜು, ಎಸ್.ಎನ್.ರಾಜೇಂದ್ರ ಜಗದೀಶ್, ಎಂ.ಎನ್. ಚಂದ್ರಮೋಹನ್,ಕೊಡವ ಸಮಾಜದ ಅಧ್ಯಕ್ಷ ಮೊಣ್ಣಪ್ಪ, ಬಿ.ಸಿ.ಶಂಕರಯ್ಯ, ಹೆಚ್.ಡಿ.ಚಂದ್ರು ಇತರರು ಇದ್ದರು.

ಭತ್ತ, ರಾಗಿ ಖರೀದಿ ನೋಂದಣಿ ಪ್ರಕ್ರಿಯೆ ಆರಂಭ

ಮಡಿಕೇರಿ, ಡಿ.18– 2022–23ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಸರ್ಕಾರದ ಆದೇಶದಂತೆ ಎಫ್‌ಎಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್ ಭತ್ತ ಸಾಮಾನ್ಯ 2,040 ರೂ. ಮತ್ತು ಗ್ರೇಡ್ ಎ 2,060 ರೂ. ರಂತೆ ಹಾಗೂ ರಾಗಿಯನ್ನು ಪ್ರತಿ ಕ್ವಿಂಟಾಲ್‌ಗೆ 3,578 ರೂ.ಗೆ ಖರೀದಿ ಮಾಡಲಾಗುವುದು. ಭತ್ತವನ್ನು ನೊಂದಾಯಿಸಿ ಕೊಂಡ ಪ್ರತಿ ರೈತರಿಂದ ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ, ಗರಿಷ್ಠ 40 ಕ್ವಿಂಟಾಲ್ ಭತ್ತವನ್ನು ಒಬ್ಬ ರೈತರಿಂದ ಖರೀದಿಸಲಾಗುವುದು ಎಂದು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಸಹಾಯಕ ಪ್ರಧಾನ ವ್ಯವಸ್ಥಾಪಕರು ತಿಳಿಸಿದ್ದಾರೆ.

ವಿಜೃಂಭಣೆಯ ಹನುಮ ಜಯಂತ್ಯೋತ್ಸವ

ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಶ್ರೀಆಂಜನೇಯಸ್ವಾಮಿ ಮೂರ್ತಿ ಮೆರವಣಿಗೆ



ಚಾಮರಾಜನಗರ, ಡಿ.18– ಶ್ರೀಹನುಮ ಜಯಂತ್ಯೋತ್ಸವ ಸಮಿತಿ ವತಿಯಿಂದ ಹನುಮ ಜಯಂತಿಯ ಪ್ರಯುಕ್ತ ನಗರದಲ್ಲಿ ಶ್ರೀ ಆಂಜನೇಯಸ್ವಾಮಿ ಮೂರ್ತಿಯನ್ನು ಸಾಂಸ್ಕೃತಿಕ ಕಲಾತಂಡಗಳೊಂದಿಗೆ ವಿಜೃಂಭಣೆಯಿಂದ ಮೆರವಣಿಗೆ ನಡೆಸಲಾಯಿತು.

ನಗರದ ಹಳೆಯ ಖಾಸಗಿ ಬಸ್ ನಿಲ್ದಾಣದಲ್ಲಿರುವ ಶ್ರೀ ಅಭಯ ಕಾರ್ಯಸಿದ್ದಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಬೆಳಿಗ್ಗೆ ವಿಶೇಷ ಪೂಜೆ, ಹೋಮ–ಹವನ ನಡೆದು ಮಧ್ಯಾಹ್ನ ಮಹಾಮಂಗಳಾರತಿ ನೆರವೇರಿತು. ತದನಂತರ ಪ್ರಸಾದ ವಿತರಿಸಲಾಯಿತು. ಮಧ್ಯಾಹ್ನ 3 ಗಂಟೆಯಲ್ಲಿ ಹನುಮ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ ಉಪವಿಭಾಗಾಧಿಕಾರಿ ಗೀತಾ ಉಡೆದಾಲ ಹಾಗೂ ತಹಸೀಲ್ದಾರ್ ಬಸವರಾಜು ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ನಂದಿಧ್ವಜ, ವೀರಗಾಸೆ, ಚೆಂಡೆ ವಾದ್ಯ, ಡೊಳ್ಳು ಕುಣಿತ, ಗಾಡಿಗೊಂಬೆ ಸೇರಿ ನಾನಾ ಕಲಾತಂಡಗಳೊಂದಿಗೆ ಯುವಕರು ಕೇಸರಿ ಧ್ವಜಾ ಹಿಡಿದು ಜೈ ಶ್ರೀರಾಮ್, ಜೈ ಹನುಮ ಘೋಷಣೆ ಕೂಗಿ ಸಂಭ್ರಮಿಸಿದರು. ಶ್ರೀ ಅಭಯ ಕಾರ್ಯಸಿದ್ದಿ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಹೊರಟ ಮೆರವಣಿಗೆ ತರಕಾರಿ ಮಾರುಕಟ್ಟೆ ರಸ್ತೆ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ರಸ್ತೆ, ವಾಣಿಯರ್ ರಸ್ತೆ ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ, ರಥದಬೀದಿ ಮಾರ್ಗವಾಗಿ ಆಂಜನೇಯಸ್ವಾಮಿ ದೇವಸ್ಥಾನ ಬಳಿ ಸಮಾಪ್ತಿಗೊಂಡಿತು. ಮೆರವಣಿಗೆಯಲ್ಲಿ ಶ್ರೀಹನುಮ ಜಯಂತ್ಯೋತ್ಸವ ಸಮಿತಿ ಸಂಚಾಲಕರಾದ ಶಿವು ವಿರಾಟ್, ಪ್ರವೀಣ್, ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಅಮ್ಮನಪುರ ಮಲ್ಲೇಶ್, ಜಿಪಂ ಮಾಜಿ ಅಧ್ಯಕ್ಷೆ ನಾಗಶ್ರೀ ಪ್ರತಾಪ್, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ, ನಿಜಗುಣ ರಾಜು, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಸಮಿತಿಯ ಸದಸ್ಯರಾದ ಮಹೇಶ್, ಮಧು, ಹರ್ಷತ್‌ಗೌಡ, ಮಹೇಂದ್ರ, ಸಿ.ವಿ. ಮಣಿಕಂಠ ಇತರರು ಭಾಗವಹಿಸಿದ್ದರು.

ಪ್ರೇಕ್ಷಕರನ್ನು ರೋಮಾಂಚನಗೊಳಿಸಿದ ದೇಶಿ ಕುಸ್ತಿ



ಚಾಮರಾಜನಗರ, ಡಿ.18– ಚಾಮರಾಜನಗರದಲ್ಲಿ ಪ್ರಥಮ ಬಾರಿಗೆ ನಡೆದ ದೇಶಿ ಕುಸ್ತಿ ಪಂದ್ಯಾವಳಿಯು ಪ್ರೇಕ್ಷಕರಲ್ಲಿ ರೋಮಾಂಚನವನ್ನುಂಟು ಮಾಡಿತು. ಸುಮಾರು 30 ಜೋಡಿ ಕುಸ್ತಿಪಟುಗಳು ಪಾಲ್ಗೊಂಡು ತಮ್ಮ ವಿವಿಧ ಪಟ್ಟುಗಳ ಮೂಲಕ ಪ್ರೇಕ್ಷಕರ ಶಿಳ್ಳೆ, ಚಪ್ಪಾಳೆ ಗಿಟ್ಟಿಸಿದರು.

ನಗರದ ತಹಸೀಲ್ದಾರ್ ಕಾರ್ಯಾಲಯದ ಪಕ್ಕದ ಮೈದಾನದಲ್ಲಿ ಯುವಸೇನೆ ಕರ್ನಾಟಕ ಸೇವಾ ಸಂಘ, ಸುವರ್ಣ ಕನ್ನಡ ರಕ್ಷಣಾ ವೇದಿಕೆ, ಕನ್ನಡಪರ ಸಂಘಟನೆಗಳ ಒಕ್ಕೂಟದ ಸಹಯೋಗದಲ್ಲಿ ಚಾಮರಾಜನಗರ ಜಿಲ್ಲಾ ಬೆಳ್ಳಿ ಹಬ್ಬದ ಅಂಗವಾಗಿ ಅಯೋಜಿಸಿದ್ದ ದೇಶಿ ಕುಸ್ತಿ ಪಂದ್ಯಾವಳಿಗೆ ಮೈಸೂರಿನ ವಕೀಲರಾದ ಉಮೇಶ್ ಚಾಲನೆ ನೀಡಿ ಮಾತನಾಡಿ, ಕುಸ್ತಿ ಗ್ರಾಮೀಣ ಭಾಗದ ದೇಶಿಯ ಕ್ರೀಡೆಯಾಗಿದೆ. ಇದೊಂದು ಗಂಡು ಕ್ರೀಡೆಯಾಗಿದೆ. ಕ್ರಿಕೆಟ್ ಸೋಮಾರಿಗಳ ಆಟವಾಗಿದೆ ಎಂದರು. ಕರುನಾಡ ವಿಜಯ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಆರ್.ಪಿ. ನಂಜುಂಡಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ ಚಾಮರಾಜನಗರದಲ್ಲಿ ಕುಸ್ತಿ ಪಂದ್ಯಾವಳಿ ಅಯೋಜಿಸುವುದು ಬಹಳ ದಿನದ ಆಸೆಯಾಗಿತ್ತು. ಗ್ರಾಮೀಣ ಕ್ರೀಡೆಯಾದ ಕುಸ್ತಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕುಸ್ತಿ ಪಂದ್ಯಾವಳಿಯನ್ನು ಆಯೋಜನೆ ಮಾಡಲಾಗಿದೆ. ಜಿಲ್ಲಾಡಳಿತ ಚಾಮರಾಜನಗರದಲ್ಲಿ ಗರಡಿಮನೆ ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿದರು.

ಪೊಲಿಸ್ ಇಲಾಖೆಯ ಪುಟ್ಟಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕೊಳ್ಳೇಗಾಲದ ಓಲೆ ಮಾದೇವಣ್ಣ, ಯುವ ಸೇನೆ ಕರ್ನಾಟಕ ಸೇವಾ ಸಂಘದ ಜಿಲ್ಲಾಧ್ಯಕ್ಷ ನಮ್ಮನೆ ಪ್ರಶಾಂತ್, ಸುವರ್ಣ ಕನ್ನಡ ವೇದಿಕೆ ಜಿಲ್ಲಾಧ್ಯಕ್ಷ ಸುರೇಶ್ ವಾಜಪೇಯಿ, ಕೇಬಲ್ ರಾಘವೇಂದ್ರ, ಅಂಬೇಡ್ಕರ್ ಸೇನೆ ಜಿಲ್ಲಾಧ್ಯಕ್ಷ ಗಣೇಶ್‌ಪ್ರಸಾದ್, ನಲ್ಲೂರು ಮಹದೇವಸ್ವಾಮಿ, ವಕೀಲರಾದ ಪ್ರಸನ್ನ ಕುಮಾರ್, ರಾಮಸಮುದ್ರದ ದೊಡ್ಡ ಬೀದಿಯ ಚನ್ನಂಜಯ್ಯ, ರೇವಣ್ಣ, ಮಾದೇವಸ್ವಾಮಿ, ಕರುನಾಡ ವಿಜಯಸೇನೆಯ ಜಿಲ್ಲಾಧ್ಯಕ್ಷ ಮಂಜುನಾಯಕ ಬಾಗಳಿರೇವಣ್ಣ ವೈಕೆಮೋಳೆ ನಾಗರಾಜು ಆನಂದ್ ವೀರಶೈವ ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಮೋಹನ್ ಕುಮಾರ್ ಇದ್ದರು.

ಕನ್ನಡಪರ ಹೋರಾಟಗಾರರ ಮೇಲಿನ ಮೊಕದ್ದಮೆ ಹಿಂಪಡೆಯಲು ಎಂಎಲ್‌ಸಿ ಮಂಜೇಗೌಡ ಆಗ್ರಹ



ಚಾಮರಾಜನಗರ, ಡಿ.18– ಕನ್ನಡದ ಪರ ಹೋರಾಟದ ಸಂದರ್ಭದಲ್ಲಿ ಕನ್ನಡ ಸಂಘಟನೆಗಳ ಮೇಲೆ, ಹೋರಾಟಗಾರರ ಮೇಲೆ ಹಾಕಿರುವ ಮೊಕದ್ದಮೆಗಳನ್ನು ಸರ್ಕಾರ ಹಿಂದಕ್ಕೆ ಪಡೆಯುವುದರ ಮೂಲಕ ಕನ್ನಡಿಗರ ಹಿತವನ್ನು ಕಾಪಾಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಚಾಮರಾಜನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಯುವಸೇನೆ ಕರ್ನಾಟಕ ಸೇವಾ ಸಂಘ, ಸುವರ್ಣ ಕನ್ನಡ ರಕ್ಷಣಾ ವೇದಿಕೆ ವತಿಯಿಂದ 'ಗಂಧದ ನಾಡು', ಕನ್ನಡ ವೈಭವ 2022ರ ದೇಶಿ ಕುಸ್ತಿ ಪಂದ್ಯಾವಳಿಯ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಅನ್ಯಭಾಷಿಗರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ದೇಶದ ಎಲ್ಲಾ ಭಾಗಗಳಿಂದ ಲಕ್ಷಾಂತರ ಜನರು ಬರುತ್ತಿದ್ದಾರೆ. ಕನ್ನಡನಾಡಿನಲ್ಲಿ ಕನ್ನಡಿಗನೇ ಅಲ್ಪಸಂಖ್ಯಾತರಾಗುವ ಕಾಲ ಬಂದರೂ ಆಶ್ಚರ್ಯ ಪಡಬೇಕಾಗಿಲ್ಲ ಎಂದರು.

ಕನ್ನಡನಾಡಿನಲ್ಲಿ ಕನ್ನಡಿಗರಿಗೆ ಸರ್ಕಾರ ಹೆಚ್ಚಿನ ಶಕ್ತಿಯನ್ನು ಕೊಡಬೇಕು. ಕಂಪೆನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡಬೇಕು. ಅನ್ಯಭಾಷಿಗರು ಕನ್ನಡ, ನೆಲ ಜಲ ಭಾಷೆಯನ್ನು ಗೌರವಿಸಬೇಕು. ಕನ್ನಡಕ್ಕೋಸ್ಕರವಾಗಿ 2000 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಮೀಸಲಿಡಬೇಕು ಎಂದು ವಿಧಾನ ಪರಿಷತ್‌ನಲ್ಲಿ ಹೋರಾಟ ಮಾಡುತ್ತೇನೆ ಎಂದ ಅವರು, ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮನಾಗಿ ಮೆರೆಯಬೇಕು ಎಂದರು. ಸಮಾರಂಭದಲ್ಲಿ ಮಾಜಿ ಶಾಸಕರಾದ ಜಯಣ್ಣ, ಬಾಲರಾಜ್, ಮಹಾದೇವಯ್ಯ, ನಂಜುಂಡಸ್ವಾಮಿ ಮತ್ತಿತರರು ಹಾಜರಿದ್ದರು.

ನಿವೃತ್ತ ಸರ್ಕಾರಿ ನೌಕರರಿಗೆ ನಗದು ರಹಿತ ಆರೋಗ್ಯ ಭಾಗ್ಯ ಯೋಜನೆಗೆ ಆಗ್ರಹ

ಜಿಲ್ಲಾ ನಿವೃತ್ತ ಸರ್ಕಾರಿ ನೌಕರರ ಸಂಘದ 15ನೇ ವಾರ್ಷಿಕೋತ್ಸವ ಸಮಾರಂಭ



ಚಾಮರಾಜನಗರ, ಡಿ. 18– ಸರ್ಕಾರಿ ನಿವೃತ್ತಿ ನೌಕರರು ಹಾಗೂ ಕುಟುಂಬ ಪಿಂಚಣಿದಾರರಿಗೆ ನಗದು ರಹಿತ ಆರೋಗ್ಯ ಭಾಗ್ಯ ಯೋಜನೆಯನ್ನು ಕೂಡಲೇ ಜಾರಿಗೆ ತರಬೇಕು ಎಂದು ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ರಾಜ್ಯಾಧ್ಯಕ್ಷ ಡಾ.ಎಲ್. ಬೈರಪ್ಪ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ಜಿಲ್ಲಾ ನಿವೃತ್ತ ಸರ್ಕಾರಿ ನೌಕರರ ಸಂಘದ 15ನೇ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ರಾಜ್ಯ ಸರ್ಕಾರದ ನಾನಾ ಇಲಾಖೆಗಳಲ್ಲಿ ಸುಮಾರು 30 ರಿಂದ 35 ವರ್ಷಗಳ ಕಾಲ ಸೇವೆ ಸಲ್ಲಿಸಿ ರಾಜ್ಯದ ಶ್ರೇಯೋಭಿವೃದ್ಧಿಗೆ ಶ್ರಮಿಸಿ ಸರ್ಕಾರಿ ಸೇವೆಯಿಂದ ವಯೋ ನಿವೃತ್ತಿ ಹೊಂದಿರುವ ಸುಮಾರು 4.20 ಲಕ್ಷ ಪಿಂಚಣಿದಾರರು ಹಾಗೂ 1.50 ಲಕ್ಷಕುಟುಂಬ ಪಿಂಚಣಿದಾರರು ಸರ್ಕಾರದಿಂದ ನಿವೃತ್ತಿವೇತನ ಪಡೆಯುತ್ತಿದ್ದಾರೆ ಎಂದರು.

2 ಗುಂಟೆ ಭೂಮಿ ಕೊಡಿಸುವೆ: ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಮಾತನಾಡಿ, ನಮ್ಮ ಸಂಘದ 2 ಗುಂಟೆ ಭೂಮಿಯಿದ್ದು ಅದನ್ನು ಬೇರೆಯವರು ವಶಪಡಿಸಿಕೊಂಡಿದ್ದರು. ಅದನ್ನು ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ್ದು ಸಂಘದ ಪರವಾಗಿ ನ್ಯಾಯಾಲಯದ ಆದೇಶ ಬಂದಿದೆ ಸದ್ಯದಲ್ಲೇ ಸಂಘದ ರಾಜ್ಯಾಧ್ಯಕ್ಷರಾದ ಷಡಕ್ಷರಿ ಅವರ ನೇತೃತ್ವದಲ್ಲಿ ಜಿಲ್ಲಾ ನಿವೃತ್ತ ಸರ್ಕಾರಿ ನೌಕರರ ಸಂಘಕ್ಕೆ ಹಸ್ತಾಂತರ ಮಾಡಿಸಲಾಗುವುದು ಎಂದರು.

ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಜಿಲ್ಲಾಧ್ಯಕ್ಷ ಎನ್. ನಾಗೇಶ್ ಮಾತನಾಡಿದರು. ಸಂಘದ ಹಿರಿಯ ಸದಸ್ಯರುಗಳನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತನೌಕರು ಸಂಘದ ಸಂಘಟನಾ ಕಾರ್ಯದರ್ಶಿ ಪ್ರಭ, ಗುರುಲಿಂಗಸ್ವಾಮಿ, ಉಪಾಧ್ಯಕ್ಷ ಎನ್.ನಂಜಪ್ಪ, ಖಜಾಂಚಿ ಎಸ್.ಎಂ.ಆನಂದಪ್ಪ, ಜಿಲ್ಲಾ ಉಪಾಧ್ಯಕ್ಷ ಹೊನ್ನೂರಯ್ಯ, ಎಲ್.ದೇವಣ್ಣ, ಖಜಾಂಚಿ ಎಂ.ಶಿವಣ್ಣ, ಕಾರ್ಯದರ್ಶಿ ರಾಜು, ಕೊಳ್ಳೇಗಾಲ ತಾಲೂಕು ಪ್ರಧಾನ ಕಾರ್ಯದರ್ಶಿ ಚೆನ್ನಮಾದೇಗೌಡ, ಲೆಕ್ಕ ಪರಿಶೋಧಕ ರಾಮು, ಜಿಲ್ಲಾ ಜಂಟಿ ಕಾರ್ಯದರ್ಶಿ ಜಿ. ರಾಘವೇಂದ್ರ, ಸಂಘಟನಾ ಕಾರ್ಯದರ್ಶಿ ಎ.ಸಿದ್ದಯ್ಯ, ನಿರ್ದೇಶಕರಾದ ಕೆ.ಮಹದೇವಯ್ಯ, ಕೆ.ಸೋಮಣ್ಣ, ಹೆಚ್.ಬಿ.ಕೃಷ್ಣಸ್ವಾಮಿನಾಯಕ, ಶ್ರೀಕಂಠಸ್ವಾಮಿ, ಕೆ.ಸಿ.ಮರಿಸ್ವಾಮಿ, ಎಂ.ಬಿ.ಕೃಷ್ಣಮೂರ್ತಿ, ಎ.ಎನ್. ಪದ್ಮಾಕ್ಷಿ, ಭಾಗ್ಯಲಕ್ಷ್ಮಿ, ಎನ್..ಸುಬ್ರಹ್ಮಣ್ಯ, ಎ.ಪಿ.ಚಂದ್ರಶೇಖರ್, ಎನ್.ರಾಜ್‌ಗೋಪಾಲ್, ನಟರಾಜು, ಎ.ಸುಂದರ್, ರಾಘವೇಂದ್ರ, ಟಿ.ಬಸವರಾಜು, ಸಿ.ಎನ್.ಕೃಷ್ಣಮೂರ್ತಿ, ಶಿವಣ್ಣ, ಸಿದ್ದರಾಜು, ಪಿ.ಪುಟ್ಟಸ್ವಾಮಿ, ಶ್ರೀನಿವಾಸ, ಆರ್.ಎಸ್.ಸುಂದರ ಹಾಗೂ ನಿವೃತ್ತ ನೌಕರರ ಹಾಜರಿದ್ದರು.

ಡಿ.22ರಂದು ನಗರದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ

ಚಾಮರಾಜನಗರ, ಡಿ.18– ಜಿಲ್ಲಾಡಳಿತ, ಜಿಪಂ ಮತ್ತು ಜಿಲ್ಲಾ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳವನ್ನು ಡಿ.22ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ನಂಜನಗೂಡು, ಮೈಸೂರು ಹಾಗೂ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಮಾರುಕಟ್ಟೆ ಸೇವೆಗಳು, ಹಣಕಾಸು, ಇನ್ಸೂರೆನ್ಸ್, ಕೈಗಾರಿಕೆ, ಬ್ಯಾಂಕಿಂಗ್ ಮತ್ತು ಆಸ್ಪತ್ರೆ ಸೇವೆಗಳು ಹಾಗೂ ಇತರೆ ಎಲ್ಲಾ ರೀತಿಯ ಸೇವೆಗಳ ಸುಮಾರು 25ಕ್ಕೂ ಹೆಚ್ಚಿನ ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿವೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ ಹಾಗೂ ಡಿಪ್ಲೊಮಾ, ನರ್ಸಿಂಗ್, ಜಿ.ಡಿ.ಎ ಮತ್ತು ಎಲ್ಲಾ ಪದವಿ, ಸ್ನಾತಕೋತ್ತರ ಪದವಿ ಪಡೆದಿರುವ 18 ರಿಂದ 35 ವರ್ಷ ವಯೋಮಿತಿಯೊಳಗಿನ ಪುರುಷ ಮತ್ತು ಮಹಿಳಾ ನಿರುದ್ಯೋಗಿಗಳು ಜಿಲ್ಲಾ ಮಟ್ಟದ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳು ತಮ್ಮ ವೈಯಕ್ತಿಕ ವಿವರಗಳನ್ನು ಕನಿಷ್ಠ 10 ಪ್ರತಿಗಳೊಂದಿಗೆ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅಥವಾ ದೂ.ಸಂ.08226–295080, ಮೊ.ಸಂ. 9900677922 ಹಾಗೂ 7892190137 ಸಂಪರ್ಕಿಸಬಹುದು.

ರಕ್ಷಿತಾ ಮಹಲ್‌ನಲ್ಲಿ ಉಚಿತ ಚಿಕಿತ್ಸಾ ಶಿಬಿರ

ಚಾಮರಾಜನಗರ, ಡಿ.18– ನಗರದ ದೊಡ್ಡ ಅಂಗಡಿ ಬೀದಿಯಲ್ಲಿನ ರಕ್ಷಿತಾ ಮಹಲ್‌ನಲ್ಲಿ ಲಯನ್ಸ್ ಸಂಸ್ಥೆ ವತಿಯಿಂದ ಆರಂಭವಾಗಿರುವ ಉಚಿತ ಚಿಕಿತ್ಸಾ ಶಿಬಿರವು ಡಿಸೆಂಬರ್ 24ರ ವರೆಗೆ ನಡೆಯಲಿದೆ.

ಡಾ. ಆರ್.ಕೆ. ಶರ್ಮ ಅವರು ಆಕ್ಯುಪ್ರೆಸರ್ ಯೋಗ ನ್ಯಾಚುರಪತಿ ರಿಸರ್ಚ್ ರಿಸರ್ಚ್ ಟ್ರೈನಿಂಗ್ ಅಂಡ್ ಟ್ರೀಟ್ಮೆಂಟ್ ಮೂಲಕ ಚಿಕಿತ್ಸೆ ನೀಡುತ್ತಿದ್ದು, ಶಿಬಿರದಲ್ಲಿ ಸಕ್ಕರೆ ಕಾಯಿಲೆ, ಕುತ್ತಿಗೆ ನೋವು, ಬೆನ್ನು ನೋವು, ತಲೆನೋವು, ಹಾಸಿಗೆ ಒದ್ದೆ ಆಗುವುದು, ಪಾರ್ಶ್ವವಾಯು, ಮಂಡಿನೋವು, ಕೀಲುನೋವು, ಆಹಾರ ಜೀರ್ಣ ತೊಂದರೆ, ಎಸಿಡಿಟಿ, ಜಠರದ ಉರಿತ, ಮಲಬದ್ಧತೆ, ಸಂಧಿವಾತ ಈ ರೀತಿಯ ಎಲ್ಲಾ ಖಾಯಿಲೆಗಳನ್ನು ಗುಣಪಡಿಸಲಾಗುತ್ತದೆ ಸಾರ್ವಜನಿಕರು ಈ ಶಿಬಿರದ ಉಪಯೋಗವನ್ನು ಪಡೆದುಕೊಳ್ಳುವಂತೆ ಲಯನ್ಸ್‌ಕ್ಲಬ್ ಅಧ್ಯಕ್ಷರಾದ ಪ್ರಕಾಶ್ ಜೈನ್ ಮನವಿ ಮಾಡಿದ್ದಾರೆ.

ಒಂದನೇ ಪುಟದಿಂದ

ಅರ್ಜೆಂಟೀನಾಗೆ ಫಿಫಾ ವಿಶ್ವಕಪ್

ಒಂದೇ ನಿಮಿಷದ ಆಟದಲ್ಲಿ ಫ್ರಾನ್ಸ್‌ಗೆ ಸಂಭ್ರಮ ತಂದ ಎಂಬಾಪೆ: ಭವಿಷ್ಯದ ಫುಟ್‌ಬಾಲ್ ಆಟಗಾರ ಎನ್ನುವ ಕೀರ್ತಿಯನ್ನು ಕಳೆದ ವಿಶ್ವಕಪ್‌ನಲ್ಲೇ ಗಳಿಸಿಕೊಂಡಿದ್ದ ಕೈಲಿಯನ್ ಎಂಬಾಪೆ ಪಂದ್ಯ ಮುಗಿಯುವ 10 ನಿಮಿಷಗಳಷ್ಟೇ ಇರುವಾಗ ತಮ್ಮ ನಿಜ ಆಟದ ಪ್ರದರ್ಶನ ಮಾಡಿದರು. 80ನೇ ನಿಮಿಷದಲ್ಲಿ ನಿಕೋಲಸ್ ಒಟಮೆಂಡಿ ಪೆನಾಲ್ಟಿ ಅವಕಾಶದಲ್ಲಿ ಫ್ರಾನ್ಸ್ ಆಟಗಾರನನ್ನು ಫೌಲ್ ಮಾಡಿದ್ದ ಕಾರಣಕ್ಕೆ ರೆಫ್ರಿ ಪೆನಾಲ್ಟಿ ಘೋಷಿಸಿದರು. ಈ ಅವಕಾಶದಲ್ಲಿ ಎಂಬಾಪೆ ಚೆಂಡನ್ನು ಗೋಲು ಪೆಟ್ಟಿಗೆ ಸೇರಿಸಿದರು.



ಅರ್ಜೆಂಟೀನಾದ ಗೋಲ್‌ಕೀಪರ್, ಚೆಂಡು ಬಂದ ಕಡೆಗೆ ಜಂಪ್ ಮಾಡಿದರಾದರೂ ಅವರ ಕೈಗೆ ತಾಕಿ ಚೆಂಡು ಗೋಲು ಪೆಟ್ಟಿಗೆ ಸೇರಿತು. ಹಿನ್ನಡೆ ತಗ್ಗಿಸಿದ ಖುಷಿಯಲ್ಲಿದ್ದ ಫ್ರಾನ್ಸ್ ಮರು ನಿಮಿಷದಲ್ಲಿ ಸಮಬಲದ ಗೋಲು ದಾಖಲಿಸಿತು. 4 ಆಟಗಾರರ ನಡುವಿನ ತಾಳಮೇಳದಿಂದ ಚೆಂಡನ್ನು ಪಡೆದುಕೊಂಡ ಎಂಬಾಪೆ ಆಕರ್ಷಕವಾಗಿ ಚೆಂಡನ್ನು ಗೋಲು ಪೆಟ್ಟಿಗೆ ಸೇರಿಸಿದಾಗ ಗ್ಯಾಲರಿಯಲ್ಲಿದ್ದ ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಎದ್ದೆದ್ದು ಕುಣಿದರು. ಕೇವಲ 97 ಸೆಕೆಂಡ್ ಅಂತರದಲ್ಲಿ ಎಂಬಾಪೆ ಎರಡು ಗೋಲು ಸಿಡಿಸಿದ್ದರು. ನಿಗದಿತ 90 ನಿಮಿಷದಲ್ಲಿ ಎರಡೂ ತಂಡಗಳು ಸಮಬಲ ಸಾಧಿಸಿದ್ದರಿಂದ ಪಂದ್ಯ 30 ನಿಮಿಷಗಳ ಹೆಚ್ಚುವರಿ ಸಮಯಕ್ಕೆ ವಿಸ್ತರಿಸಿತ್ತು. ಈ ವೇಳೆ ಮೆಸ್ಸಿ 109ನೇ ನಿಮಿಷದಲ್ಲಿ ಗೋಲು ಹೊಡೆಯುವ ಮೂಲಕ ಅರ್ಜೆಂಟೀನಾಗೆ ಮುನ್ನಡೆ ತಂದುಕೊಟ್ಟರು. ಆದರೆ 118ನೇ ನಿಮಿಷದಲ್ಲಿ ಎಂಬಾಪೆ ಪೆನಾಲ್ಟಿ ಮೂಲಕ ಗೋಲು ಹೊಡೆದು ಮತ್ತೆ ತಿರುವು ನೀಡಿದರು. 120 ನಿಮಿಷಗಳ ಆಟದಲ್ಲಿ ಎರಡು ತಂಡಗಳು ತಲಾ 3 ಗೋಲು ಹೊಡೆದ ಕಾರಣ ಫಲಿತಾಂಶ ನಿರ್ಧರಿಸಲು ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು. ಅರ್ಜೆಂಟೀನಾ ನೂತನ ಚಾಂಪಿಯನ್ ಆಗಿ ಹೊರ ಹೊಮ್ಮುತ್ತಿದ್ದಂತೆಯೇ ತಂಡದ ಆಟಗಾರರು ಮೈದಾನದಲ್ಲಿ ಕುಣಿದು ಕುಪ್ಪಳಿಸಿದರು. ಅಲ್ಲದೇ ಭಾರತ ಸೇರಿದಂತೆ ವಿಶ್ವದೆಲ್ಲೆಡೆ ಇರುವ ಅರ್ಜೆಂಟೀನಾ ಅಭಿಮಾನಿಗಳು ಸಂಭ್ರಮಾಚರಣೆ ನಡೆಸಿದರು.

ಅಧಿವೇಶನ ಇಂದು ಆರಂಭ

ಸೇರಿದಂತೆ ಮುಂತಾದ ವಿಷಯಗಳನ್ನು ಹಿಡಿದು ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಹರಿಹಾಯಲು ಸಿದ್ಧತೆ ನಡೆಸಿದೆ. ಚುನಾವಣೆ ಸಮೀಪಿಸುತ್ತಿರುವ ಕಾರಣ, ವಿರೋಧ ಪಕ್ಷಗಳು ಆಡಳಿತ ವಿಷಯದ ಬಗ್ಗೆ ಸರ್ಕಾರವನ್ನು ಗುರಿಯಾಗಿಸುವ ಸಾಧ್ಯತೆಯಿದೆ, 2018ರ ಚುನಾವಣೆಗೆ ಮುಂಚಿತವಾಗಿ ಪ್ರಣಾಳಿಕೆಯಲ್ಲಿ ನೀಡಲಾಗಿದ್ದ ಭರವಸೆಗಳನ್ನು ಈಡೇರಿಸದೇ ಇರುವುದು, ಧಾರಾಕಾರ ಮಳೆ ಮತ್ತು ಪ್ರವಾಹದಿಂದಾಗಿ ಹಲವಾರು ನಗರ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಸಮಸ್ಯೆಗಳು, ಎಸ್‌ಸಿ, ಎಸ್‌ಟಿ ಮೀಸಲಾತಿ ವಿಚಾರಗಳನ್ನು ವಿಪಕ್ಷಗಳು ಪ್ರಸ್ತಾಪಿಸುವ ಸಾಧ್ಯತೆಗಳಿವೆ.

ಪಂಚಮಸಾಲಿಗಳು ಮತ್ತು ಒಕ್ಕಲಿಗರಂತಹ ವಿವಿಧ ಸಮುದಾಗಳ ಮೀಸಲಾತಿ ಸಂಬಂಧಿತ ಬೇಡಿಕೆ, ರಾಜ್ಯದ ಆರ್ಥಿಕ ಸ್ಥಿತಿ ಹಾಗೂ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವಿಷಯವೂ ಈ ಬಾರಿಗ ಅಧಿವೇಶನದಲ್ಲಿ ಚರ್ಚೆಗೆ ಬರುವ ಸಾಧ್ಯತೆ ಇದೆ. ಈ ನಡುವೆ ಮಂಗಳೂರು ಬಾಂಬ್ ಸ್ಫೋಟ ಕುರಿತು ವಿಪಕ್ಷಗಳ ನಾಯಕರು ನೀಡಿದ್ದ ಹೇಳಿಕೆಯನ್ನಿಟ್ಟುಕೊಂಡು ಕಾಂಗ್ರೆಸ್ ವಿರುದ್ಧ ಹರಿಹಾಯಲು ಬಿಜೆಪಿ ಯೋಜನೆ ರೂಪಿಸುತ್ತಿದೆ ಎಂದು ತಿಳಿದುಬಂದಿದೆ.

ಫೋಟೋ ಅನಾವರಣಕ್ಕೆ ಸಿದ್ಧತೆ

ಪ್ರತಿಪಾದಿಸಲು ಬಿಜೆಪಿ ಮುಂದಾಗಿದೆ. ಆದರೆ ಸಹಜವಾಗಿಯೇ ಇದರಿಂದಾಗಿ ಕಾಂಗ್ರೆಸ್ ನಾಯಕರು ಕೆರಳಿದ್ದಾರೆ. ಈ ಕುರಿತು ಮಾತನಾಡಿದ ವಿಪಕ್ಷ ನಾಯಕ ಸಿದ್ದರಾಮಯ್ಯ, ಮಹಾತ್ಮಗಾಂಧಿ ಹತ್ಯೆಯಲ್ಲಿ ಸಾವರ್ಕರ್ ಕೈವಾಡವಿದೆ. ಹೀಗಾಗಿ ಅವರ ಫೋಟೋವನ್ನು ಸದನದಲ್ಲಿ ಅಳವಡಿಸುವ ಅಗತ್ಯ ಇಲ್ಲ ಎಂದರು.

ಸಾವರ್ಕರ್ ಮೊದಲೇ ವಿವಾದಾತ್ಮಕ ವ್ಯಕ್ತಿತ್ವ ಹೊಂದಿದವರು. ಇಲ್ಲಿಯವರೆಗೆ ಸದನದಲ್ಲಿ ಅವರ ಫೋಟೋ ಹಾಕಿರಲಿಲ್ಲ. ಈಗೇಕೆ ಹಾಕುತ್ತಿದ್ದಾರೋ ಗೊತ್ತಿಲ್ಲ. ಫೋಟೋ ಅಳವಡಿಸುವ ಕಾರ್ಯಕ್ರಮಕ್ಕೆ ನನಗೇನೂ ಆಹ್ವಾನ ಬಂದಿಲ್ಲ. ಈ ಸಂಬಂಧ ಸರ್ವ ಸದಸ್ಯರ ಗಮನಕ್ಕೆ ತಂದಿಲ್ಲ. ಬಿಜೆಪಿ ನಾಯಕರು ತಮ್ಮ ಹಿಡನ್ ಅಜೆಂಡಾವನ್ನು ಸದನದೊಳಗೆ ತರುತ್ತಿದ್ದಾರೆ ಎಂದರು.

ಶಾಸಕ ಪ್ರಿಯಾಂಕ ಖರ್ಗೆ ಪ್ರತಿಕ್ರಿಯಿಸಿ, ವಿವಾದ ಸೃಷ್ಟಿ ಮಾಡುವ ಸಲುವಾಗಿ ಸಾವರ್ಕರ್ ಫೋಟೋ ಹಾಕಲಾಗುತ್ತಿದೆ. ಅವರು ಏನು ಸಾಧನೆ ಮಾಡಿದ್ದಾರೆ ಎಂದು ಅವರ ಫೋಟೋ ಹಾಕಬೇಕು? ನೇತಾಜಿ ಸುಭಾಷ್ ಚಂದ್ರಬೋಸ್ ಅವರ ಐಎನ್‌ಎಗೆ ವಿರುದ್ಧವಾಗಿ ಬ್ರಿಟಿಷ್ ಆರ್ಮಿಗೆ ಸಿಬ್ಬಂದಿ ನೇಮಕ ಮಾಡಿದ ಇತಿಹಾಸ ಸಾವರ್ಕರ್‌ಗಿದೆ ಎಂದರು. ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿಯೇ ಬೆಳಗಾವಿ ಅಧಿವೇಶನ ನಡೆಸಲಾಗುತ್ತದೆ. ವರ್ಷಕ್ಕೊಮ್ಮೆ ಇಲ್ಲಿ ನಡೆಯುವ ಅಧಿವೇಶನದಲ್ಲಿ ಚರ್ಚೆಗೆ ಮೀಸಲಿಟ್ಟ ದಿನಗಳು ವ್ಯರ್ಥವಾಗುತ್ತಿವೆ ಎಂಬ ಆರೋಪಗಳಿವೆ. ಈ ಬಾರಿಯೂ ಕೂಡ ಇದೇ ಸಂಪ್ರದಾಯ ಮುಂದುವರೆಯುವ ಸಾಧ್ಯತೆ ಇದೆ.

ಸುವರ್ಣ ಸೌಧಕ್ಕೆ ಮುತ್ತಿಗೆ

ಡಿ.22ರಂದು ಸುವರ್ಣ ವಿಧಾನಸೌಧ ಮುತ್ತಿಗೆ ಹಾಕುತ್ತೇವೆ. ಮೀಸಲಾತಿಗಾಗಿ ಕಳೆದ ಎರಡು ವರ್ಷಗಳಿಂದ ಸುಧೀರ್ಘ ಹೋರಾಟ ಮಾಡಿದ್ದೇವೆ. ಡಿ.19ರಂದು ಮೀಸಲಾತಿ ಘೋಷಣೆ ಮಾಡುವುದಾಗಿ ಸಿಎಂ ಬೊಮ್ಮಾಯಿ ಹೇಳಿದ್ದರು. ಬೆಳಗಾವಿ ಅಧಿವೇಶನದಲ್ಲಿ ಮೀಸಲಾತಿ ಘೋಷಣೆ ಮಾಡುವ ಭರವಸೆ ಇದೆ. ಮುಖ್ಯಮಂತ್ರಿಗಳ ನಿಲುವು ನೋಡಿಕೊಂಡು ಹೋರಾಟ ಮಾಡುತ್ತೇವೆ ಎಂದಿದ್ದಾರೆ. ಇದೇ ಡಿ.22ರಂದು ಸುವರ್ಣ ಸೌಧದ ಬಳಿ ವಿರಾಟ ಪಂಚಶಕ್ತಿ ಸಮಾವೇಶ ಮಾಡ್ತಿದ್ದೇವೆ. ನಾಳೆ ಸವದತ್ತಿ ಮತ ಕ್ಷೇತ್ರದಲ್ಲಿ ಪಂಚಮಸಾಲಿ ಮೀಸಲಾತಿ ಬೃಹತ್ ಸಮಾವೇಶ ಆಯೋಜಿಸಲಾಗಿದೆ. ಈ ಸಮಾವೇಶದಲ್ಲಿ ಮೀಸಲಾತಿ ಕೊಟ್ಟರೆ ಯಾವ ರೀತಿ ವಿಜಯೋತ್ಸವ ಮಾಡಬೇಕು. ಮೀಸಲಾತಿ ಕೊಡದಿದ್ದರೆ ಯಾವ ರೀತಿ ಉಗ್ರ ಹೋರಾಟ ಮಾಡಬೇಕು ಎಂಬ ಸ್ಪಷ್ಟವಾದ ತೀರ್ಮಾನ ಮಾಡುತ್ತೇವೆ. ಸವದತ್ತಿಯಿಂದ ಸುವರ್ಣ ವಿಧಾನ ಸೌಧವರೆಗೂ ಪಂಚಲಕ್ಷ ಪಾದಯಾತ್ರೆ ಮಾಡುತ್ತೇವೆ. ಈ ಪಾದಯಾತ್ರೆ ಮೂಲಕ ಸುವರ್ಣ ವಿಧಾನಸೌಧ ಮುತ್ತಿಗೆ ಹಾಕಲು ನಿರ್ಧರಿಸಿದ್ದೇವೆ ಎಂದು ತಿಳಿಸಿದ್ದಾರೆ. ಸವದತ್ತಿ ಸಮಾವೇಶ ಸಂಜೆ 7 ಗಂಟೆಗೆ ಮುಕ್ತಾಯವಾಗಲಿದೆ. ಅಷ್ಟರೊಳಗಾಗಿ ರಾಜ್ಯ ಸರ್ಕಾರದ ನಿರ್ಧಾರ ಗೊತ್ತಾಗಲಿದೆ. ಸರ್ಕಾರದ ನಿರ್ಧಾರ ನೋಡಿಕೊಂಡು ಹೋರಾಟ ಮಾಡುತ್ತೇವೆ. ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಸವದತ್ತಿ ಸಮಾವೇಶ ಆಯೋಜನೆ ಮಾಡಿದ್ದೇವೆ ಎಂದರು.

2022ನೇ ಸಾಲಿನ ಮಿಸೆಸ್ ವರ್ಲ್ಡ್

ಬಳಿಕ ಭಾರತದ ಸ್ಪರ್ಧಿಯೊಬ್ಬರು ಈ ಸ್ಪರ್ಧೆಯಲ್ಲಿ ಗೆದ್ದಿದ್ದಾರೆ. ಅಮೆರಿಕದ ವೆಸ್ಟ್ ಗೇಟ್ ಲಾಸ್ ವೇಗಾಸ್ ರೆಸಾರ್ಟ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ 2021ನೇ ಸಾಲಿನ ವಿಜೇತೆ ಶೈಲಿನ್ ಫೋರ್ಡ್ ಅವರು ಸರ್‌ಗಂ ಅವರಿಗೆ ಕಿರೀಟ ತೊಡಿಸಿದರು. ಮಿಸೆಸ್ ಪಾಲಿನೇಷ್ಯಾ ಅವರು ಮೊದಲ ರನ್ನರ್‌ಅಪ್ ಹಾಗೂ ಮಿಸೆಸ್‌ಕೆನಡಾ 2ನೇ ರನ್ನರ್‌ಅಪ್‌ಆಗಿ ಆಯ್ಕೆಯಾಗಿದ್ದಾರೆ. ಭಾರತದ ನಟಿ ಹಾಗೂ ರೂಪದರ್ಶಿ ಅದಿತಿ ಗೋವಿತ್ರಿಕರ್ ಅವರು 2001ರಲ್ಲಿ ಮಿಸೆಸ್‌ವರ್ಲ್ಡ್‌ಆಗಿ ಆಯ್ಕೆಯಾಗಿದ್ದರು.

ಹೈಡ್ರೋಜನ್ ರೈಲು ಸಂಚಾರ

ಇರಲಿದೆ ಎಂದರು. ವಂದೇ ಭಾರತ್ ಸದ್ಯ ತಿಂಗಳಿಗೆ ಮೂರು ರೈಲು ಬೋಗಿಗಳ ನಿರ್ಮಾಣ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಆರು ಬೋಗಿ ಗಳ ನಿರ್ಮಾಣ ಮಾಡುವ ಗುರಿ ಹೊಂದಲಾಗಿದ್ದು, ಶೇ.28ರವರೆಗೆ ರೈಲ್ವೇ ವಲಯ ತನ್ನ ಮಾರುಕಟ್ಟೆ ಪಾಲು ಪಡೆಯಲಿದೆ ಎಂದು ಹೇಳಿದ ಅಶ್ವಿನ್ ವೈಷ್ಣವ್ ಅವರು, 2023ರ ಡಿಸೆಂಬರ್ ಒಳಗೆ ದೇಶದಲ್ಲಿ ಮೊದಲ ಹೈಡ್ರೋಜನ್ ರೈಲು ಸಂಚರಿಸಲಿದೆ ಎಂದರು.

ಆನ್‌ಲೈನ್ ಗೇಮ್‌ಗಳ ಜಾಹೀರಾತು ನಿರ್ಬಂಧಕ್ಕೆ ಒತ್ತಾಯ ಕೇಳಿಬರುತ್ತಿರುವ ಬಗ್ಗೆ ಮಾತನಾಡಿದ ಅಶ್ವಿನಿ ವೈಷ್ಣವ್, ಎಲ್ಲಾ ರಾಜ್ಯಗಳೂ ಆನ್‌ಲೈನ್ ಗೇಮ್ ನಿರ್ಬಂಧಕ್ಕೆ ಆಸಕ್ತಿ ತೋರಿವೆ. ಆನ್‌ಲೈನ್ ಗೇಮ್ ನಿರ್ಬಂಧ ಬಗ್ಗೆ ಕೇಂದ್ರ ಮಟ್ಟದಲ್ಲೂ ಚರ್ಚೆ ಆಗುತ್ತಿದೆ. ಹೊಸ ಕಾನೂನು ಜಾರಿ ಮಾಡುವ ನಿಟ್ಟಿನಲ್ಲಿ ಚರ್ಚೆ ನಡೆಯುತ್ತಿದ್ದು, ಈ ಬಗ್ಗೆ ಸದ್ಯದಲ್ಲೇ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದರು. ಇನ್ನು ಇದರ ಜೊತೆ ಪ್ರಮುಖವಾಗಿ ಕರ್ನಾಟಕದ 43 ರೈಲ್ವೇ ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸವು ದಾಗಿ ಹೇಳಿದರು. ಈ 43 ರೈಲ್ವೇ ನಿಲ್ದಾಣಗಳಲ್ಲಿ ಯಶವಂತಪುರ ಮತ್ತು ಕಂಟೋನ್ಮೆಂಟ್ ರೈಲ್ವೆ ನಿಲ್ದಾಣ ಒಳಗೊಂಡಿವೆ. ಬೆಂಗಳೂರು ಮಹಾನಗರಕ್ಕೆ ಹೊರ ವರ್ತೂಲ ರೈಲು ಟೆಂಡರ್ ಎಲ್ ಅಂಡ್ ಟಿ ಕಂಪನಿ ತೆಗೆದುಕೊಂಡಿದ್ದು, ಅಧಿಕೃತವಾಗಿ ಸರ್ಕಾರದಿಂದ ಹಸ್ತಾಂತರ ಮಾಡಲಾಗುವುದು ಎಂದದರು. ಮುಂದಿನ ದೀಪಾವಳಿ ವೇಳೆಗೆ ದೇಶದ ಎಲ್ಲಾ ಪ್ರಮುಖ ನಗರಗಳಲ್ಲಿ 5ಜಿ ಸೇವೆ ಲಭ್ಯವಾಗಲಿದೆ ಎಂದರು. ಮಹತ್ವಾಕಾಂಕ್ಷೆಯ ತಲಚೇರಿ–ವಯನಾಡ್–ಮೈಸೂರು ರೈಲ್ವೇ ಯೋಜನೆಗೆ ಸಚಿವ ಅಶ್ವಿನ್ ವೈಷ್ಣವ್ ಒಪ್ಪಿಗೆ ಸೂಚಿಸಿಲ್ಲ. ಇನ್ನು ಇದೇ ವೇಳೆ ಡಿಜಿಟಲ್ ಇಂಡಿಯಾ ಬಿಲ್ ಶೀಘ್ರದಲ್ಲಿ ಜಾರಿಗೆ ತರುವುದಾಗಿ ಹೇಳಿದರು.


ಮೈಸೂರು ಮಹಾರಾಜರ ಜೀವನ ಬದಲಿಸಿದ ಶ್ರೀವಿದ್ಯಾ ಉಪಾಸನಾ

ಸಂವಾದ ಕಾರ್ಯಕ್ರಮದಲ್ಲಿ 'ದಿ ಮೇವರಿಕ್ ಮಹಾರಾಜ' ಶ್ರೀ ಜಯಚಾಮರಾಜೇಂದ್ರ ಒಡೆಯರ್ ಕೃತಿಯ ಲೇಖಕಿ ಡಾ.ದೀಪ್ತಿ ನವರತ್ನ ಅಭಿಮತ

ಮೈಸೂರು, ಡಿ.18 (ಆರ್‌ಕೆಬಿ)– ಅಂದಿನ ಮೈಸೂರು ಮಹಾರಾಜ ಜಯ ಚಾಮರಾಜೇಂದ್ರ ಒಡೆಯರ್ ಅವರು ಕೈಗೊಂಡ 'ಶ್ರೀವಿದ್ಯಾ ಉಪಾಸನೆ' ಅವರ ಬದುಕನ್ನೇ ಬದಲಿಸಿತು ಎಂದು ಲೇಖಕಿ ಡಾ.ದೀಪ್ತಿ ನವರತ್ನ ತಿಳಿಸಿದರು.

ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಮೈಸೂರು ಬುಕ್ ಕ್ಲಬ್ಸ್ ಮತ್ತು ಹಾರ್ಪರ್ ಕಾಲಿನ್ಸ್ ಆಶ್ರಯದಲ್ಲಿ ನಡೆದ ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರ ಕುರಿತ ಇಂಗ್ಲಿಷ್ ಜೀವನ ಚರಿತ್ರೆ 'ದಿ ಮೇವರಿಕ್ ಮಹಾರಾಜ' ಪುಸ್ತಕ ಕುರಿತ ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೈಸೂರು ಮಹಾರಾಜರ ಕುರಿತು ಪುಸ್ತಕ ಬರೆಯಲು ಕಾರಣವೇನು? ಎಂಬ ಬರಹಗಾರ ಪ್ರೊ.ಸಿ.ನಾಗಣ್ಣ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಾ.ದೀಪ್ತಿ, ಹಿಂದಿನ ಮೈಸೂರು ಅರಸರು ಸಂಗೀತ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಸಾಟಿಯಿಲ್ಲದ ಕೊಡುಗೆಗಳಿಗಾಗಿ ಅಪಾರ ಗೌರವ ಹೊಂದಿದ್ದಾರೆ ಎಂದರಲ್ಲದೆ, ಕಲೆ ಮತ್ತು ಸಾಹಿತ್ಯ. ಜಯಚಾಮರಾಜೇಂದ್ರ ಒಡೆಯರ್ ಅವರ ಬಗ್ಗೆ ಮಾಹಿತಿ ಸಂಗ್ರಹಿಸಲು ತಾವು ಪಟ್ಟ ಶ್ರಮ ಮತ್ತು ಪ್ರಯತ್ನಗಳನ್ನು ವಿವರಿಸಿದರು.



ಮಹಾರಾಜರ ಎಲ್ಲಾ ಸಂಗೀತ ಕೃತಿಗಳು ಹಿಂದಿನ ಮೈಸೂರು ಅರಸರ ಜೀವನವನ್ನು ಪ್ರತಿಬಿಂಬಿಸುತ್ತವೆ. 1940 ಮತ್ತು 1950ರ ನಡುವಿನ ವರ್ಷಗಳು ಮೈಸೂರು ಮತ್ತು ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಒಂದು ಮಹತ್ವದ ತಿರುವು ನೀಡಿತು. ಮಹಾರಾಜರು ನಂತರ ಆಗಿನ ಮದ್ರಾಸ್ ರಾಜ್ಯದ ಗವರ್ನರ್ ಆದರು ಎಂದರು.

ಮಹಾರಾಜರು ನಮಗೆ ಅಸಂಖ್ಯಾತ ಕೊಡುಗೆಗಳನ್ನು ನೀಡಿದ್ದಾರೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರ 'ಟಿಪ್ಪು ನಿಜ ಕನಸುಗಳು' ಕೃತಿಯನ್ನು ಉಲ್ಲೇಖಿಸಿದ ಡಾ.ದೀಪ್ತಿ, ಮಹಾರಾಜರ ಸಾಧನೆಗಳು ಇಂದು 'ಮಹಾರಾಜರ ನಿಜ ಕನಸುಗಳು' ಎನಿಸಿಕೊಂಡಿವೆ ಎಂದರು. ಜಯ ಚಾಮರಾಜೇಂದ್ರ ಒಡೆಯರ್ ಮತ್ತು ಇನ್ನಿತರೆ ಆಡಳಿತಗಾರರು ಸಂಗೀತ, ಕಲೆ, ಸಂಸ್ಕೃತಿ, ಸಾಹಿತ್ಯ ಮತ್ತು ಮುಂತಾದವುಗಳನ್ನು ಹೇಗೆ ಪೋಷಿಸಿದರು ಎಂಬುದನ್ನು ಅವರು ವಿವರಿಸಿದರು.

ಲೇಖಕಿ ಡಾ.ದೀಪ್ತಿನವರತ್ನ ಅವರು 'ಶ್ರೀಮದ್ ಯದುಕುಲ ವಾರಿಧಿ' ಗೀತೆಯನ್ನು ಹಾಡಿದರು.

ಇದಕ್ಕೂ ಮುನ್ನ ಸರೋದ್ ಮಾಂತ್ರಿಕ ಪದ್ಮಶ್ರೀ ಪಂಡಿತ್ ರಾಜೀವ್ ತಾರಾನಾಥ್ ಅವರು ತಮ್ಮ ಭಾಷಣದಲ್ಲಿ, ಡಾ.ದೀಪ್ತಿ ಅವರ ಕೃತಿಯು ಜಯಚಾಮರಾಜೇಂದ್ರ ಒಡೆಯರ್ ಮತ್ತು ಇತರ ಆಡಳಿತ, ಜೀವನ ಮತ್ತು ಸಾಧನೆಗಳ ಕುರಿತು ಇದುವರೆಗೆ ಪ್ರಕಟವಾಗದ ಅನೇಕ ಸಂಗತಿಗಳು ಮತ್ತು ಅಂಶಗಳನ್ನು ಹೊಂದಿದೆ ಎಂದು ಹೇಳಿದರು.

ಮೈಸೂರು ಅರಸರೊಂದಿಗಿನ ತಮ್ಮ ಒಡನಾಟವನ್ನು ಸ್ಮರಿಸಿದ ಪಂಡಿತ್ ತಾರಾನಾಥ್, ಕಲೆ, ಸಂಗೀತ, ಸಾಹಿತ್ಯ ಇತ್ಯಾದಿಗಳ ಪೋಷಣೆಗಾಗಿ ಮಹಾರಾಜರು ಪ್ರಪಂಚದಾದ್ಯಂತ ಹೆಸರುವಾಸಿಯಾಗಿದ್ದಾರೆ. ಮೈಸೂರು ಮಹಾರಾಜ ಜಯ ಚಾಮರಾಜೇಂದ್ರ ಒಡೆಯರ್ ಅವರ ಜೀವನವನ್ನು ಕುರಿತ 'ದಿ ಮೇವರಿಕ್ ಮಹಾರಾಜ' ಕೃತಿ ವಿಶಿಷ್ಟ ಕೃತಿಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪುಸ್ತಕದ ಪ್ರತಿಯನ್ನು ಸುಪ್ರೀಂಕೋರ್ಟ್ ವಕೀಲ ಮತ್ತು ಲೇಖಕ ಜೆ.ಸಾಯಿ ದೀಪಕ್ ಅವರಿಗೆ ನೀಡಲಾಯಿತು. ಇದಕ್ಕೂ ಮೊದಲು, ನಾದಸ್ವರದಲ್ಲಿ ಮೈಸೂರು ರಾಜ್ಯದ ನಾಡಗೀತೆ 'ಕಾಯೋ ಶ್ರೀ ಗೌರಿ' ಹಾಡಿನ ಮೂಲಕ ಪ್ರಾರಂಭವಾಯಿತು. ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್, ಮೈಸೂರು ಬುಕ್ ಕ್ಲಬ್ಸ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಪ್ರೊ.ಸಿ.ನಾಗಣ್ಣ ಇನ್ನಿತರರು ಉಪಸ್ಥಿತರಿದ್ದರು.

ಬಲರಾಮನ ದೇಹ ಹೊಕ್ಕಿರುವ ಬುಲೆಟ್ ಚೆರ್ರಿ ಪತ್ತೆಗೆ ಲೋಹ ಶೋಧಕ ಯಂತ್ರ ಬಳಕೆ

● ದೇಹದಿಂದ 8 ಚೆರ್ರಿ ಹೊರ ತೆಗೆದು ಚಿಕಿತ್ಸೆ ● ಇನ್ನೂ ಕೆಲವು ಚೆರ್ರಿ ದೇಹದಲ್ಲಿರುವ ಶಂಕೆ



ಮೈಸೂರು,ಡಿ.18(ಎಂಟಿವೈ)– ರೈತನೋರ್ವ ಗುಂಡು ಹಾರಿಸಿದ್ದರಿಂದ ದಸರಾ ಮಹೋತ್ಸವ ಮಾಜಿ ಕ್ಯಾಪ್ಟನ್ ಬಲರಾಮನ ದೇಹದಲ್ಲಿರುವ ಗುಂಡಿನ ಚೆರ್ರಿ ಪತ್ತೆ ಹಚ್ಚಲು ಮೆಟಲ್ ಡಿಟೆಕ್ಟರ್ ಬಳಸಲಾಗುತ್ತಿದ್ದು, ಭಾನುವಾರ ಬಲರಾಮನ ದೇಹದಿಂದ 10 ಚೆರ್ರಿಗಳನ್ನು ಹೊರ ತೆಗೆದು ಚಿಕಿತ್ಸೆ ಮುಂದುವರೆಸಲಾಗಿದೆ.

ನಾಡಹಬ್ಬದಲ್ಲಿ ಸತತ 13 ಬಾರಿ ಚಿನ್ನದ ಅಂಬಾರಿ ಹೊತ್ತು ಸಾಗಿ ತನಗೆ ನೀಡಿದ್ದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿ ಸೈ ಎನಿಸಿಕೊಂಡಿದ್ದ ಬಲರಾಮ ಭೀಮನಕಟ್ಟೆ ಆನೆ ಶಿಬಿರದಲ್ಲಿದ್ದು, ಡಿ.15ರಂದು ರಾತ್ರಿ ಕಾಡಿಗೆ ಮೇಯಲು ಕ್ಯಾಂಪ್‌ನಿಂದ ಹೋಗಿದ್ದ ಬಲರಾಮ ತನ್ನ ಜಮೀನಿಗೆ ಬಂದಾಗ ಪಿರಿಯಾಪಟ್ಟಣ ತಾಲೂಕಿನ ಆಲೂರು ಗ್ರಾಮದ ಅಚ್ಚಪ್ಪ ಎಂಬುವರ ಮಗ ಎಂ.ಎ.ಸುರೇಶ್ ಎಂಬಾತ ಒಂಟಿ ನಳಿಕೆ ನಾಡಬಂದೂಕಿನಿಂದ ಕಾಡಾನೆಯೆಂದು ಭಾವಿಸಿ ಬಲರಾಮನಿಗೆ ಗುಂಡು ಹಾರಿಸಿದ್ದ. ಇದರಿಂದ ಬಲರಾಮ ದೇಹದ ಮೇಲೆ 45 ಕಡೆ ಗಾಯವಾಗಿತ್ತು. ಅಲ್ಲದೆ, ಗುಂಡಿನ ಚೆರ್ರಿ ಬಲರಾಮನ ದೇಹದ ಹಲವು ಭಾಗಕ್ಕೆ ಹೊಕ್ಕಿತ್ತು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ ಸೂಚನೆ ಮೇರೆಗೆ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಹಿರಿಯ ಪಶುವೈದ್ಯ ಡಾ.ಚಿಟ್ಟಿಯಪ್ಪ ಅವರ ಸಲಹೆ ಪಡೆದು ನಾಗರಹೊಳೆ ಪಶುವೈದ್ಯ ಡಾ.ರಮೇಶ ಡಿ.16ರ ಮುಂಜಾನೆಯಿಂದಲೇ ಚಿಕಿತ್ಸೆ ಆರಂಭಿಸಿದ್ದರು. ಬುಲೆಟ್‌ನ ಚೆರ್ರಿಯಿಂದಾದ ಗಾಯಕ್ಕೆ ಡ್ರೆಸ್ಸಿಂಗ್ ಮಾಡಿ, ಆರೈಕೆ ಮಾಡಲಾಗಿತ್ತು. ಘಟನೆ ನಡೆದು 48 ಗಂಟೆ ಬಳಿಕ ಬುಲೆಟ್‌ನ ಚೆರ್ರಿ ಗಾಯದ ರಂಧ್ರದಲ್ಲಿ ಊದಿಕೊಂಡು ಮೇಲಕ್ಕೆ ಬರುವ ಸಾಧ್ಯತೆ ಇರುವುದರಿಂದ ಇಂದು ಬೆಳಗ್ಗಿನಿಂದ ಚೆರ್ರಿ ತೆಗೆಯುವ ಕಾರ್ಯಾಚರಣೆ ನಡೆಸಲಾಯಿತು. 10 ಚೆರ್ರಿಗಳನ್ನು ಹೊರ ತೆಗೆಯಲಾಗಿತ್ತು. ಇನ್ನಷ್ಟು ಚೆರ್ರಿ ಬಲರಾಮನ ದೇಹದಲ್ಲಿದೆ ಎಂದು ಶಂಕಿಸಲಾಗಿದೆ.

ಬಲರಾಮದ ದೇಹದ ಒಳಗೆ ಆಳವಾಗಿ ಚೆರ್ರಿಗಳು ಹೊಕ್ಕದೇ ಇರುವುದು ಸಮಾಧಾನಕರ ಸಂಗತಿ. ಚರ್ಮದ ಪದರ ದಾಟಿ ಚೆರ್ರಿಗಳು ನಾಟಿಕೊಂಡಿವೆ. ಇದರಿಂದ ದೇಹದ ಅಂಗಾಗಕ್ಕೆ ಯಾವುದೇ ಹಾನಿಯಾಗಿಲ್ಲ ಆದರೆ ದೇಹದ ಮೇಲ್ಮೈನಲ್ಲಿ ಗಾಯವಾಗಿದೆ. ದೇಹದಲ್ಲಿರುವ ಇನ್ನಷ್ಟು ಚೆರ್ರಿ ತೆಗೆಯುವ ಕಾರ್ಯ ಮುಂದುವರೆಸಲಾಗುತ್ತದೆ. ಚಿಕಿತ್ಸೆ ನೀಡಿದ ಕಾರಣ ಬಲರಾಮ ಚೇತರಿಸಿಕೊಂಡಿದೆ.

ಡಿ. 27, ಬೆಂಗಳೂರಲ್ಲಿ ಬಿಎಸ್‌ಪಿ ಯುವಜನ ಸಮ್ಮೇಳನ



ಮೈಸೂರು,ಡಿ.18(ಎಂಟಿವೈ)– ಬೆಂಗಳೂರಿನ ವಸಂತನಗರದಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಡಿ.27 ರಂದು ಬಿಎಸ್‌ಪಿ ಯುವಜನ ಸಮ್ಮೇಳನ ಆಯೋಜಿಸಲಾಗಿದೆ ಎಂದು ಬಿಎಸ್‌ಪಿ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದೆಲ್ಲೆಡೆ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಎನ್‌ಇಪಿ ಮೂಲಕ ಶಿಕ್ಷಣ ಜನಸಾಮಾನ್ಯರಿಗೆ ಸಿಗದಂತೆ ನೋಡಿಕೊಳ್ಳುವ ಹುನ್ನಾರ ನಡೆಯುತ್ತಿದೆ. ಈ ಕುರಿತು ಯುವಜನರನ್ನು ಜಾಗೃತಗೊಳಿಸುವ ಉದ್ದೇಶದಿಂದ ಈ ಸಮ್ಮೇಳನ ನಡೆಸಲಾಗುತ್ತಿದೆ. ನಿರುದ್ಯೋಗ, ಶಿಕ್ಷಣ ಕ್ಷೇತ್ರದ ಸಮಸ್ಯೆ ಕುರಿತು ಚರ್ಚಿಸಿ, ಯುವಜನರ ಗಮನ ಸೆಳೆಯಲಾಗುತ್ತದೆ. ಅಂದು ನಡೆಯಲಿರುವ ಸಮ್ಮೇಳನದಲ್ಲಿ ರಾಜ್ಯದಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು ಪಾಲ್ಗೊಳ್ಳಲಿದ್ದಾರೆ ಎಂದರು.

ಮುಂಬರುವ ವಿಧಾನಸಭಾ ಚುನಾವಣೆ ವೇಳೆಯಲ್ಲಿ ಬಿಎಸ್ಪಿಯ ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಬಯಸುವವರು ಅಗತ್ಯ ದಾಖಲೆಗಳೊಂದಿಗೆ ಪಕ್ಷಕ್ಕೆ ಅರ್ಜಿ ಸಲ್ಲಿಸಬೇಕು. ಯಾವ ಕ್ಷೇತ್ರದಲ್ಲಿ ಯಾರ್ಯಾರು ಅರ್ಜಿ ಸಲ್ಲಿಸುತ್ತಾರೆ ಎಂದು ಅವಲೋಕಿಸಿ ಗೆಲ್ಲುವ ಸಮರ್ಥ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗುತ್ತದೆ ಎಂದು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ರಾಜ್ಯ ಸರ್ಕಾರ ಮೀಸಲಾತಿ ಹೆಚ್ಚಳ ಮಾಡಿರುವುದಕ್ಕೆ ಸಂಬಂಧಿಸಿದಂತೆ ಕೆಲವು ಸಮುದಾಯಗಳು ವಿರೋಧಿಸುತ್ತಿವೆ. ಬೇಕಂತಲೇ ಗೊಂದಲ ಮೂಡಿಸುವ ಸಂಚು ನಡೆಸಲಾಗುತ್ತಿದೆ. ಇದಕ್ಕೆ ಸರ್ಕಾರವೇ ಪಿತೂರಿ ನಡೆಸುತ್ತಿರುವ ಶಂಕೆ ವ್ಯಕ್ತವಾಗುತ್ತಿದೆ. ಪರಿಶಿಷ್ಟ ಜಾತಿಗೆ ನೀಡಿರುವ ಮೀಸಲಾತಿಯಲ್ಲಿ ಶೇ.2ರಷ್ಟು ಕೊರಮ, ಕೊರಚ, ಲಂಬಾಣಿ ಹಾಗೂ ಇನ್ನಿತರ ಸಮುದಾಯಕ್ಕೆ ಮೀಸಲಾತಿ ನೀಡುವುದರಿಂದಾಗಿ ಈ ವಿರೋಧ ಹೋಗಲಾಡಿಸಬಹುದಾಗಿದೆ. ಇದುವರೆಗೂ ಒಂದು ಜಾತಿಯನ್ನು ಮತ್ತೊಂದು ಜಾತಿಯ ಮೇಲೆ ಎತ್ತಿಕಟ್ಟುವ ರಾಜಕಾರಣವೇ ನಡೆದಿರುವುದು ಸರಿಯಲ್ಲ ಎಂದರು.

ಒಳ ಮೀಸಲಾತಿ ಹೆಚ್ಚಳ ಆಗ್ರಹಿಸಿ ನಡೆದ ಪ್ರತಿಭಟನೆ ವೇಳೆ ಲಾಠಿಚಾರ್ಜ್ ಮಾಡಿರುವುದು ಖಂಡನೀಯ. ಪ್ರತಿಭಟನಾಕಾರರ ಮೇಲೆ ಪ್ರಕರಣ ದಾಖಲಿಸಿರುವುದು ಸರಿಯಲ್ಲ. ಹೀಗಾಗಿ ಸಿಎಂ ಹಾಗೂ ಗೃಹ ಸಚಿವರು ಕ್ಷಮೆಯಾಚಿಸಬೇಕು. ಜೊತೆಗೆ ದಾಖಲಿಸಿರುವ ಪ್ರಕರಣ ವಾಪಸು ಪಡೆಯಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಎಸ್ಪಿ ಪದಾಧಿಕಾರಿಗಳಾದ ಜಾಕೀರ್ ಹುಸೇನ್, ಶ್ರೀಕಂಠು, ಶಿವಮಹದೇವ, ಶಿವಕುಮಾರ್ ಹಾಗೂ ಜಾಕೀರ್ ಅಲಿಖಾನ್ ಇದ್ದರು.


ಇಂದು ಜಾರ್ಖಂಡ್‌ನ ಸಮ್ಮೇದ ಶಿಖರ್ಜಿಯನ್ನು ಪ್ರವಾಸಿ ತಾಣ ಮಾಡದಂತೆ ಪ್ರತಿಭಟನೆ

ಮೈಸೂರು, ಡಿ.18(ಎಂಟಿವೈ)– ಜಾರ್ಖಂಡ್ ರಾಜ್ಯದ ಗಿರಿಡಿ ಜಿಲ್ಲೆಯ ಜೈನ ತೀರ್ಥಂಕರರ ಮೋಕ್ಷ ತಾಣವಾದ ಸಮ್ಮೇದ ಶಿಖರ್ಜಿಯನ್ನು ಪ್ರವಾಸಿ ತಾಣವಾಗಿ ಪರಿವರ್ತಿಸಿ, ಮೋಜು ಮಸ್ತಿ ತಾಣ ಮಾಡದಂತೆ ಆಗ್ರಹಿಸಿ ಡಿ.19ರಂದು ಮೈಸೂರಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಗುತ್ತಿದೆ ಎಂದು ದಿಗಂಬರ ಜೈನ ಸಮಾಜ ಕಾರ್ಯದರ್ಶಿ ಸುನಿಲ್‌ಕುಮಾರ್ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೈನ ಧರ್ಮದ 24 ತೀರ್ಥಂಕರರಲ್ಲಿ 20 ತೀರ್ಥಂಕರರ ಮೋಕ್ಷ ತಾಣವಾದ ಜಾರ್ಖಂಡ್ ರಾಜ್ಯದಲ್ಲಿರುವ 'ಸಮ್ಮೇದ ಶಿಖರ್ಜಿ' ತಾಣವನ್ನು ಅಲ್ಲಿನ ಸರ್ಕಾರ ಪ್ರವಾಸಿ ತಾಣವಾಗಿಸಲು ನಿರ್ಧರಿಸಿದೆ. ಅದಕ್ಕಾಗಿ ಅನುಮೋದನೆಯನ್ನೂ ನೀಡಿದೆ. ಜೈನ ಧರ್ಮಕ್ಕೆ ಪವಿತ್ರ ಕ್ಷೇತವಾಗಿರುವ ಈ ಸ್ಥಳವನ್ನು ಪ್ರವಾಸಿ ತಾಣವನ್ನಾಗಿ ಮಾಡುವುದರಿಂದ ಮದ್ಯ, ಮಾಂಸ ಸೇವನೆ, ಅನೈತಿಕ ಚಟುವಟಿಕೆ ಹೆಚ್ಚುವ ಆತಂಕವಿದೆ ಹಾಗಾಗಿ ಪ್ರವಾಸಿ ತಾಣವಾಗಿಸುವ ಆದೇಶ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಸಮ್ಮೇದ ಶಿಖರ್ಜಿ ಸ್ಥಳದ ಪಾವಿತ್ರ್ಯತೆ ಕಾಪಾಡುವಂತೆ ಆಗ್ರಹಿಸಿ ನಾಳೆ(ಡಿ.19)ಬೆಳಗ್ಗೆ 10ಕ್ಕೆ ಮೈಸೂರಿನ ಮಹಾತ್ಮಗಾಂಧಿ ವೃತ್ತದಿಂದ ಮೌನ ಪ್ರತಿಭಟನಾ ಮೆರವಣಿಗೆ ಆರಂಭಿಸಿ ಅಶೋಕ ರಸ್ತೆ, ಇರ್ವಿನ್ ರಸ್ತೆ, ಜೆಎಲ್‌ಬಿ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿ ಜಿಲ್ಲಾಧಿಕಾರಿ ಮೂಲಕ ಜಾರ್ಖಂಡ್ ಸಿಎಂ ಹಾಗೂ ಪ್ರಧಾನಿಗೆ ಮನವಿಪತ್ರ ಸಲ್ಲಿಸಲಾಗುವುದು. ಸುದ್ದಿಗೋಷ್ಠಿಯಲ್ಲಿ ದಿಗಂಬರ ಜೈನ ಸಮಾಜದ ಪದಾಧಿಕಾರಿಗಳಾದ ಮಹೇಶ್‌ಪ್ರಸಾದ್, ಭರತ್‌ರಾಜ್, ಲತಾ ಸುದರ್ಶನ್, ನಿರ್ಮಲ ಇದ್ದರು.



ಮೈಸೂರು ತಾಲೂಕು ನಾಯಕರ ಸಂಘದ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಉದ್ಬೂರು ಮಹದೇವಸ್ವಾಮಿ ಅವರನ್ನು ಟೆನ್ನಿಸ್ ಗೋಪಿಯವರ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪ್ರೊ.ನಂಜುಂಡಸ್ವಾಮಿ, ರಮ್ಮನಹಳ್ಳಿ ಸೋಮಣ್ಣ ಹಾಗೂ ಗೋಪಾಲ್ ಉಪಸ್ಥಿತರಿದ್ದರು.

ದೌರ್ಬಲ್ಯಗಳನ್ನೇ ಮೆಟ್ಟಿಲು ಮಾಡಿಕೊಂಡರೆ ಉನ್ನತ ಸ್ಥಾನಗಳಿಸಬಲ್ಲರು

● ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ ಅಭಿಮತ
● ವಾಕ್ ಶ್ರವಣ ಸಂಸ್ಥೆಯ ಎಂ-ಪವರ್ ಪ್ರಥಮ ವಾರ್ಷಿಕೋತ್ಸವ

ಮೈಸೂರು, ಡಿ.18(ಎಸ್‌ಪಿಎನ್)– ಮನುಷ್ಯ ತನ್ನಲ್ಲಿರುವ ದೌರ್ಬಲ್ಯಗಳನ್ನೇ ಮೆಟ್ಟಿ ನಿಂತರೆ ಮುಂದೆ ಸಾಧನೆಯ ಮೆಟ್ಟಿಲುಗಳಾಗಿ ಪರಿವರ್ತಿಸಬಹುದು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ್ ಅಭಿಪ್ರಾಯಪಟ್ಟರು.

ಮೈಸೂರು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಆವರಣದಲ್ಲಿರುವ ನಾಲೇಜ್ಡ್ ಪಾರ್ಕ್ ಸಭಾಂಗಣದಲ್ಲಿ 'ಎಂ–ಪವರ್ ಟಾಕ್' ಕಾರ್ಯಕ್ರಮದ ಪ್ರಥಮ ವಾರ್ಷಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನನ್ನ ಬಾಲ್ಯದಲ್ಲಿ ಸ್ವತಃ ಬಡತನ ಅನುಭವಿಸಿದವನು. ಹಾಗೂ ನಮ್ಮದು ಕೃಷಿಕ ಕುಟುಂಬವಾದ್ದರಿಂದ ನಮ್ಮ ಮನೆಯಲ್ಲಿದ್ದ ಎಮ್ಮೆಗೆ ಮೈ ತೊಳೆಯಲು ವಾರಕ್ಕೊಮ್ಮೆ ಕೆರೆಗೆ ಹೋಗುತ್ತಿದ್ದೆವು. ಆ ಸಮಯದಲ್ಲಿ ನನಗೂ ಈಜು ಕಲಿಯಬೇಕೆಂಬ ಆಸೆ ಆಯಿತು. ಆದರೆ, ನೀರಿಗೆ ಇಳಿಯಲು ಭಯವಾಗುತ್ತಿತ್ತು ನನ್ನ ಆಸೆಯನ್ನು ಈಡೇರಿಸಿಕೊಳ್ಳಲು ಎಮ್ಮೆಯನ್ನು ನೀರಿಗೆ ಇಳಿಸಿ, ಅದರ ಬಾಲ ಹಿಡಿದು ಈಜು ಕಲಿತ ಪ್ರಸಂಗ ತಿಳಿಸಿದರು.

ಈ ಪ್ರಸಂಗ ಏಕೆ ನೆನಪಿದೆ ಎಂದರೆ, ಮನುಷ್ಯನಿಗೆ ಈಜು ಕಲಿಸಲು ಬೇರೆಯವರ ಸಹಾಯಬೇಕು. ಆದರೆ, ಎಮ್ಮೆಗಳಿಗೆ ಈಜು ಕಲಿಸುವವರು ಯಾರು? ಆದರೂ ಅವು ನೀರಿನಲ್ಲಿ ಸುಲಲಿತವಾಗಿ ಈಜುತ್ತವೆ. ಯುವಜನರು ಇನ್ನೊಬ್ಬರ



ಸಹಾಯವಿಲ್ಲದೆ, ಬದುಕು ಕಟ್ಟಿಕೊಳ್ಳಲು ಯೋಚಿಸಬೇಕು ಎಂದು ಸಲಹೆ ನೀಡಿದರು.

ಈ ಕಾರ್ಯಕ್ರಮದ ಆಯೋಜಕರಾದ ಕಿಶೋರ್ ಅವರು, ಈ ಕಾರ್ಯಕ್ರಮಕ್ಕೆ ಮುಖ್ಯಅತಿಥಿಯಾಗಿ ಆಹ್ವಾನಿಸಿದಾಗ ಯಾವುದೊ ಗಳಿಗೆಯಲ್ಲಿ ಒಪ್ಪಿಕೊಂಡೆ. ಡಾ.ಗುರುರಾಜ್ ಕರ್ಜಗಿ ಅವರು ಮುಖ್ಯಅತಿಥಿಗಳಾಗಿ ಬರುತ್ತಾರೆಂದು ಮಾಹಿತಿ ನೀಡಿರಲಿಲ್ಲ. ಮಾಹಿತಿ ಇದ್ದರೆ, ಈ ಕಾರ್ಯಕ್ರಮಕ್ಕೆ ನಾನೇ ಬರುತ್ತಿರಲಿಲ್ಲ. ಏಕಂದ್ರೆ, ಅವರು ನೀಡುವ ಮಾಹಿತಿ ದೊಡ್ಡದು. ನಾನು ಹೇಳುವ ಮಾಹಿತಿ ಸಣ್ಣ ಪ್ರಮಾಣದ್ದು ಎಂದಾಗ ಸಭೆ ನಗೆಗಡಲಿನಲ್ಲಿ ತೇಲಿತು.

ಪಾಂಡವಪುರದ ಕೆನ್ನಾಳು ಪುಸ್ತಕ ಮನೆಯ ಅಂಕೇಗೌಡ ಮಾತನಾಡಿ, ನಮ್ಮ ಜನರು ದೇವಸ್ಥಾನಗಳಲ್ಲಿ ಗಂಟೆಗಟ್ಟಲೇ, ಕಿ.ಮೀಗಟ್ಟಲೇ ಕ್ಯೂ ನಿಂತು ದೇವರ ದರ್ಶನ ಪಡೆಯುತ್ತಾರೆ. ಆದರೆ, ನಮಗೆ ಜ್ಞಾನವನ್ನು ಹೆಚ್ಚಿಸುವ ಪುಸ್ತಕಗಳನ್ನು ಓದಲು ಎಷ್ಟು ಜನ ಗ್ರಂಥಾಲಯಕ್ಕೆ ಹೋಗುತ್ತಾರೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ತಮ್ಮ ಬರಹದಲ್ಲಿ ಉಲ್ಲೇಖಿಸಿದ್ದು, ಇಂದಿನ ಯುವಜನತೆ ಓದಿನ ಬಗ್ಗೆ ನಿರಾಸಕ್ತಿ ಬೆಳೆಸಿಕೊಳ್ಳುವುದು ಒಳ್ಳೆಯದಲ್ಲ ಎಂದರು.

1975ರಲ್ಲಿ ನಾನು, ಮೈಸೂರು ವಿವಿಯ ಕನ್ನಡ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ, ಊರಿಗೆ ಹೋದೆ, ಮಾಮೂಲಿನಂತೆ ನಮ್ಮ ಗ್ರಾಮಸ್ಥರು ಏನಪ್ಪ ಮೈಸೂರಿನಲ್ಲಿ ಇಷ್ಟು ದಿನ ಏನು ಮಾಡುತ್ತಿದ್ದೆ ಎಂದು ಕೇಳಿದರು. ಆಗ ಕನ್ನಡದಲ್ಲಿ ಎಂ.ಎ. ಪದವಿ ಪಡೆದಿದ್ದೇನೆ ಎಂದೆ. ಹೌದಾ ಎಂದು ರಾಗ ಎಳೆದು ಸುಮ್ಮನಾದರು. ಪದವಿ ಮೇಲಿನ ಆಸಕ್ತಿಯೇ ಕಡಿಮೆಯಾಯಿತು. ಅಲ್ಲದೆ ನನಗೆ ನನ್ನ ಮೇಲೆಯೇ ಜಿಗುಪ್ಸೆ ಉಂಟಾಯಿತು ಎಂದು ತಿಳಿಸಿದರು.

ತದನಂತರ ಕೆಲಸಕ್ಕೆ ಮೈಸೂರು, ಬೆಂಗಳೂರು ಎಲ್ಲಾ ಕಡೆ ಅಡ್ಡಾಡಿದೆ. ಕೊನೆಗೆ ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿ, ಜೀವನ ಕಟ್ಟಿಕೊಂಡೆ. ನಂತರ ವೃತ್ತಿಯಿಂದ ಬಂದ ಹಣದಿಂದ ನಾನು, ನನ್ನ ಹೆಂಡತಿ ಸೇರಿ ಗ್ರಂಥಾಲಯ ಸ್ಥಾಪಿಸಿ, ಇದುವರೆಗೆ 15 ಲಕ್ಷ ಪುಸ್ತಕಗಳನ್ನು ಸಂಗ್ರಹ ಮಾಡಿದ್ದೇವೆ. ಇದು ಸಾಮಾನ್ಯ ಸಂಗತಿಯಲ್ಲ. ದೇಶದಲ್ಲೇ ಖಾಸಗಿಯಾಗಿ ಈ ಪ್ರಮಾಣದ ಪುಸ್ತಕವಿರುವ ಗ್ರಂಥಾಲಯ ಇಲ್ಲ ಎಂದರು.

ಈ ಗ್ರಂಥಾಲಯಕ್ಕೆ ಸ್ಥಳೀಯರು, ದೇಶ–ವಿದೇಶಗಳಿಂದ ಭೇಟಿ ನೀಡಿ, ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಗ್ರಂಥಾಲಯದಲ್ಲಿರುವ ಇನ್ನೂ 8 ಲಕ್ಷ ಪುಸ್ತಕಗಳ ರಕ್ಷಣೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ಗ್ರಂಥಾಲಯದಲ್ಲಿ ಹಿಂದಿ, ಇಂಗ್ಲಿಷ್, ತಮಿಳು, ತೆಲುಗು, ಬಂಗಾಳಿ ಸೇರಿದಂತೆ ಇನ್ನು ವಿವಿಧ ಭಾಷೆಯ ಅಪರೂಪದ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಇಂಗ್ಲಿಷ್ ಮತ್ತು ಕನ್ನಡ ಪುಸ್ತಕಗಳನ್ನು ಹೆಚ್ಚು ಸಂಗ್ರಹಿಸಲಾಗಿದೆ ಎಂದರು.

ಇತ್ತೀಚೆಗೆ ನಮ್ಮ ಗ್ರಂಥಾಲಯದಲ್ಲಿನ ಪುಸ್ತಕಗಳ ಸಂಗ್ರಹ ವರ್ಲ್ಡ್ ರೆಕಾರ್ಡ್ ಆಗಿದೆ. ಸರ್ಕಾರದ ಯಾವುದೇ ಸಹಾಯಧನವಿಲ್ಲದೆ, ಇದುವರೆಗೂ 15 ಲಕ್ಷ ಪುಸ್ತಕಗಳು ಬೃಹತ್ ಗ್ರಂಥಾಲಯದ ಲಭ್ಯವಿದೆ. ನಮ್ಮ ಗ್ರಂಥಾಲಯಕ್ಕೆ ವಿದೇಶಿ ಗರೂ ಭೇಟಿ ನೀಡಿ, ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ ಎಂದು ಸಂಗತಿಯನ್ನು ತಿಳಿಸಿದರು.

ವೇದಿಕೆಯಲ್ಲಿ ಅಕಾಡೆಮಿ ಫಾರ್ ಕ್ರಿಯೇಟಿವ್‌ನ ಮುಖ್ಯಸ್ಥ ಡಾ.ಗುರುರಾಜ್ ಕರ್ಜಗಿ ಮಾತನಾಡಿದರು. ಪ್ರೌಢಶಾಲೆಯ ಸಹ ಶಿಕ್ಷಕಿ ಕೆ.ಎಚ್.ವಸಂತ ಲಕ್ಷ್ಮಿ, ಕಲಾವಿದ ಎಂ.ಪೃಥ್ವಿರಾಜ್, ಯುಎಸ್‌ಎ ಒಡಲು ಸಂಸ್ಥೆ ಮುಖ್ಯಸ್ಥೆ ಹಾಗೂ ಫ್ಯಾಷನ್ ಡಿಸೈನರ್ ಜಾಯ್ಸಿ ಜೋಸೆಫ್ ಸೇರಿದಂತೆ ಅನೇಕರಿದ್ದರು.

13 ಕೋಟಿ ರೂ. ಖರ್ಚು ಮಾಡಿ ಕಟ್ಟಿದ ಬ್ರಿಡ್ಜ್ ಉದ್ಘಾಟನೆಗೂ ಮುನ್ನವೇ ಕುಸಿತ

ಪಾಟ್ನಾ, ಡಿ.18– ಬಿಹಾರದ ಬೇಗುಸರಾಯ್ನಲ್ಲಿ ಗಂಡಕ್ ನದಿ ದಾಟಲು 13 ಕೋಟಿ ರೂ. ಖರ್ಚು ಮಾಡಿ ಕಟ್ಟಲಾಗಿದ್ದ 206 ಮೀಟರ್ ಉದ್ದದ ಬ್ರಿಡ್ಜ್ ಉದ್ಘಾಟನೆಗೂ ಮುನ್ನವೇ ಕುಸಿದು ಬಿದ್ದಿದೆ.

ಭಾನುವಾರ ಬೆಳಗ್ಗೆ ಬಿಹಾರದ ಬೇಗುಸರಾಯ್ನಲ್ಲಿ ಗಂಡಕ್ ನದಿ ಬಳಿ ನಿರ್ಮಿಸಲಾಗಿದ್ದ ಬ್ರಿಡ್ಜ್ನ ಭಾಗ ಕುಸಿದು ನದಿ ಪಾಲಾಗಿದೆ. 2016ರಲ್ಲಿ ಮುಖ್ಯಮಂತ್ರಿ ನಬಾರ್ಡ್ ಯೋಜನೆಯಡಿಯಲ್ಲಿ ಈ ಬ್ರಿಡ್ಜ್ ನಿರ್ಮಾಣ ಕಾರ್ಯ ಆರಂಭವಾಗಿತ್ತು. ಆ ಬಳಿಕ 2017ರಲ್ಲಿ ಕಾಮಗಾರಿ ಪೂರ್ಣಗೊಂಡಿತ್ತು. ಆದರೆ ಉದ್ಘಾಟನೆಗೊಂಡಿರಲಿಲ್ಲ. ಆ ಬಳಿಕ ಕೆಲದಿನಗಳ ಹಿಂದೆ ಸೇತುವೆಯ ಮೇಲ್ಭಾಗದಲ್ಲಿ ಬಿರುಕು ಕಾಣಿಸಿಕೊಂಡಿತ್ತು ಇಂದು ಬೆಳಗ್ಗೆ ಕುಸಿದು ಬಿದ್ದಿದೆ.

ಸಾಹೇಬ್ಪುರ ಕಮಲ್ ಪೊಲೀಸ್ ಠಾಣೆ ವ್ಯಾಪ್ತಿಯ ಅಹೋಕ್ ಗಂಡಕ್ ಘಾಟ್ ಕಡೆಯಿಂದ ಆಕೃತಿ ತೋಲಾ ಚೌಕಿ ಮತ್ತು ಬಿಶನ್ಪುರ ನಡುವೆ ಸಂಪರ್ಕ ಕಲ್ಪಿಸಲು 206 ಮೀಟರ್ ಸೇತುವೆಯನ್ನು ನಿರ್ಮಿಸಲಾಗಿತ್ತು. ಆದರೆ ಇದೀಗ ಉದ್ಘಾಟನೆಗೂ ಮುನ್ನ ಕುಸಿದು ಬಿದ್ದ ಪರಿಣಾಮ ದುರಂತವೊಂದು ತಪ್ಪಿದೆ. ಕೆಲ ತಿಂಗಳ ಹಿಂದೆ ಗುಜರಾತ್ನ ಮೊರ್ಬಿಯಲ್ಲಿ ಉದ್ಘಾಟನೆಗೊಂಡು 5 ದಿನಗಳಾಗಿದ್ದ ಕೇಬಲ್ ಸೇತುವೆ ಕುಸಿತಗೊಂಡು ಹಲವು ಸಾವು–ನೋವುಗಳು ಸಂಭವಿಸಿತ್ತು.

ಮೈಸೂರು ಮಿತ್ರ ಸೋಮವಾರ 19 ಡಿಸೆಂಬರ್ 2022

ಭೇರ್ಯ ಶೀಘ್ರ ಹೋಬಳಿ ಕೇಂದ್ರ: ಸಾ.ರಾ.ಮಹೇಶ್

ಭೇರ್ಯ, ಡಿ.18– ಭೇರ್ಯ ಗ್ರಾಮ ಶೀಘ್ರ ಹೋಬಳಿ ಕೇಂದ್ರವಾಗಲಿದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಭೇರ್ಯ ಗ್ರಾಪಂ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ತಾಪಂ ವತಿಯಿಂದ ಹಮ್ಮಿಕೊಂಡಿದ್ದ ಜನಸಂಪರ್ಕ ಸಭೆ ಉದ್ಘಾಟಿಸಿ ಮಾತನಾಡಿದರು.

ಕಾಲೇಜು ಮತ್ತು ಪ್ರೌಢಶಾಲಾ ಕಟ್ಟಡ, ಗಾಂಧಿನಗರ ಬಡಾವಣೆಯಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ಸಿಮೆಂಟ್ ರಸ್ತೆ ಮತ್ತು ಚರಂಡಿ, ಹೇಮಾವತಿ ನದಿಯಿಂದ ಕುಡಿಯುವ ನೀರು, ಏತ ನೀರಾವರಿ ಯೋಜನೆ ಮೂಲಕ ನಿಮ್ಮ ಊರಿನ ಕೆರೆ ತುಂಬಿಸುವುದು, 3.50 ಕೋಟಿ ರೂ. ವೆಚ್ಚದ ಬಸ್ ನಿಲ್ದಾಣ, ವಿದ್ಯುತ್ ವಿತರಣಾ ಉಪ ಕೇಂದ್ರಕ್ಕೆ 2 ಕೋಟಿ ರೂ. ವೆಚ್ಚದ ಟ್ರಾನ್ಸ್‌ಫಾರ್ಮರ್ ಅಳವಡಿಕೆ, ಜಲ ಮೀಷನ್ ಯೋಜನೆಯಡಿ ಪ್ರತಿ ಮನೆಗೂ ನಲ್ಲಿ ಸಂಪರ್ಕ, ಮಾಗಡಿ– ಜಳಸೂರು ರಸ್ತೆಗೆ ಜಮೀನು ಹಾಗೂ ಮನೆ ಕಳೆದುಕೊಂಡವರಿಗೆ ಹೆಚ್ಚಿನ ಪ್ರಮಾಣದ ಪರಿಹಾರ, ನಿಮ್ಮ ಮಕ್ಕಳಿಗೆ ನೋಟ್ ಪುಸ್ತಕ, ನಿರಂತರ ವಿದ್ಯುತ್, ಈಗ ಆಸ್ಪತ್ರೆ ಮೇಲ್ದರ್ಜೆಗೆ ಏರಿಸಲಾಗಿದ್ದು 10 ಕೋಟಿ ರೂ. ಬಿಡುಗಡೆ ಮಾಡಲಾಗಿದ್ದು, ಶೀಘ್ರ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ಅರ್ಹ ಫಲಾನುಭವಿಗಳಿಗೆ ಮಂಜೂರಾಗಿರುವ ಸವಲತ್ತು ವಿತರಣೆ. ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸುವಿಕೆ. ನಿಗದಿತ ಅವಧಿಯೊಳಗೆ ನಿಯಮಾನುಸಾರ ವಿಲೇವಾರಿ ಮಾಡಿ ಅರ್ಜಿದಾರರ ಸಮಸ್ಯೆಗೆ ಶೀಘ್ರ ಪರಿಹಾರ ಕಂಡುಕೊಳ್ಳಲು ಅನುವು ಮಾಡಿಕೊಡಲಾಗುವುದು.



ಗೋಮಾಳ ಸಾಗುವಳಿ ಮಾಡುತ್ತಿರುವ ರೈತರಿಗೆ ಹೈಕೋರ್ಟ್ ತಡೆಯಾಜ್ಞೆ ತೆರವು ಆದ ನಂತರ ಸಾಗುವಳಿ ಪತ್ರ ನೀಡಲಾಗುವುದು ಎಂದ ಶಾಸಕರು ಸರ್ಕಾರದ ಎಲ್ಲಾ ಸವಲತ್ತುಗಳನ್ನು ಮನೆ ಬಾಗಿಲಿಗೆ ತಲುಪಿಸುವ ಕೆಲಸ ಮಾಡಲಾಗುತ್ತಿದ್ದು ವಾರದೊಳಗೆ ಸಾರಾ ನಿಧಿ ಗಾರ್ಮೆಂಟ್ಸ್ ಕಾರ್ಖಾನೆ ಆರಂಭಿಸಲಾಗುವುದು. ಈ ಬಾರಿ ಮಹಿಳೆಯರ ಸಂಘಕ್ಕೆ ಹಣ ಕೊಡುವುದರ ಬದಲು ಗಾರ್ಮೆಂಟ್ಸ್‌ಗೆ ಶೇರುದಾರರಾಗಿ ಮಾಡಲಾಗುವುದು. ನಿಮ್ಮ ಮನೆ ಬಾಗಿಲಿಗೆ ಸಾ.ರಾ. ನಿಧಿ ಗಾರ್ಮೆಂಟ್ಸ್‌ನ ಪ್ರತಿನಿಧಿ ಬರಲಿದ್ದು, ಉಚಿತವಾಗಿ ಶೇರುದಾರರನ್ನಾಗಿ ಮಾಡಲು ಅಧಾರ್ ಕಾರ್ಡ್ ನೀಡಿ ಎಂದು ತಿಳಿಸಿದರು.

ಬಟಿಗನಹಳ್ಳಿ ಗ್ರಾಮದಲ್ಲಿ ಜನಸಂಪರ್ಕ ಸಭೆ ನಡೆಸಿ 1 ಕೋಟಿ ರೂ. ವೆಚ್ಚದಲ್ಲಿ ಬಟಿಗನಹಳ್ಳಿ– ಮಿರ್ಲೆ ರಸ್ತೆ ಕಾಮಗಾರಿಗೆ ಭೂಮಿಪೂಜೆ ಮಾಡಿದರು.

ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಗ್ರಾಪಂ ಅಧ್ಯಕ್ಷೆ ಜ್ಯೋತಿ, ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಮೊಹಸಿನ್ ತಾಜ್, ತಾಯಮ್ಮ, ರೂಪ, ಬಿ.ಕೆ. ಕುಮಾರ್, ಬಿ.ಬಿ.ಶಿವಣ್ಣ, ಬಿ.ಎಲ್.ರಾಜಶೇಖರ್, ಜೆಡಿಎಸ್ ಮುಖಂಡರಾದ ಅನೀಫ್‌ಗೌಡ, ರಾಜಯ್ಯ, ಚಿದಂಬರ, ಚೆಲುವರಾಜ್, ಮುಶೀರ ಅಹಮದ್ ಖಾನ್, ಶಿವಮ್ಮ, ರತ್ನಮ, ತಹಸೀಲ್ದಾರ್ ಕೆ.ಎನ್. ಮೋಹನ್, ತಾಪಂ ಇಓ ಹೆಚ್.ಕೆ.ಸತೀಶ್, ಪಿಡಿಓ ಕೆ.ಎ.ಮಂಜುನಾಥ್, ಕೃಷಿ ಸಹಾಯಕ ನಿರ್ದೇಶಕ ಗುರುಪ್ರಸಾದ್, ಜಿಪಂ ಎಇಇ ವಿನುತ್, ಗ್ರಾಮೀಣ ಕುಡಿಯುವ ನೀರು ಎಇಇ ರಾಜುರಾಂ, ಬಿಇಓ ಗಾಯಿತ್ರಿ, ಪಶುವೈದ್ಯ ಸಹಾಯಕ ನಿರ್ದೇಶಕ ಡಾ.ಮಂಜುನಾಥ್, ಪಶುವೈದ್ಯ ಡಾ.ಹರೀಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಮಹೇಂದ್ರಪ್ಪ, ಸಾಲಿಗ್ರಾಮ ಠಾಣೆ ಎಸ್‌ಐ ಕುಮುದಾ, ಸಿಡಿಪಿಓ ಪೂರ್ಣಿಮಾ, ರಾಜಸ್ವ ನಿರೀಕ್ಷಕ ಹೇಮಂತ್, ಗ್ರಾಮ ಲೆಕ್ಕಿಗ ರವೀಂದ್ರ ಸೇರಿದಂತೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಸಿಬ್ಬಂದಿ ಹಾಜರಿದ್ದರು.

ಸಹಕಾರ ರತ್ನ ಪ್ರಶಸ್ತಿ ವಿತರಕರಿಗೆ ಸನ್ಮಾನ



ಹೆಚ್.ಡಿ.ಕೋಟೆ, ಡಿ.18– ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನಿಂದ 65 ಸಾವಿರ ಲೀಟರ್ ಹಾಲು ಶೇಖರಣೆ ಆಗುತ್ತಿದೆ. ಮಹಿಳೆಯರು ಗುಣಮಟ್ಟದ ಹಾಲು ಶೇಖರಣೆಯಲ್ಲಿ ಇನ್ನು ಹೆಚ್ಚಿನ ಆಸಕ್ತಿ ವಹಿಸಬೇಕು ಮೈಮುಲ್ ನಿರ್ದೇಶಕ ಹಿರೇಗೌಡ ಹೇಳಿದರು.

ಹೆಚ್.ಡಿ.ಕೋಟೆ ಹಾಗೂ ಸರಗೂರು, ಹಾಲು ಉತ್ಪಾದಕರ ಸಹಕಾರ ಸಂಘಗಳ ವತಿಯಿಂದ ಹ್ಯಾಂಡ್ ಪೋಸ್ಟ್‌ನಲ್ಲಿರುವ ಮೈಮುಲ್ ಉಪ ಕಚೇರಿಯಲ್ಲಿ ಸಹಕಾರ ರತ್ನ ಪ್ರಶಸ್ತಿ ಪಡೆದವರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೈಸೂರು ಜಿಲ್ಲಾ ಹಾಲು ಒಕ್ಕೂಟ ನಿರ್ದೇಶಕರಾದ ಸೋಮಶೇಖರ್, ಉಮಾಶಂಕರ್, ಓಂ ಪ್ರಕಾಶ್, ಪುಟ್ಟಯ್ಯ ಮಲಾರ್, ಹಿರಿಯ ಸಹಾಯಕರಿಗೆ ಸನ್ಮಾನ ಮಾಡಲಾಯಿತು.

ಮೈಸೂರು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕರಾದ ದ್ರಾಕ್ಷಾಯಿಣಿ ಬಸವರಾಜಪ್ಪ, ವ್ಯವಸ್ಥಾಪಕ ನಿರ್ದೇಶಕರಾದ ಬಿ.ಎನ್. ವಿಜಯ್ ಕುಮಾರ್, ರಘು, ಸಣ್ಣ ತಮ್ಮಣ್ಣೇಗೌಡ, ಅಶೋಕ್ ಮಾರುಕಟ್ಟೆ ವಿಭಾಗ, ವಿಸ್ತರಣಾ ಅಧಿಕಾರಿಗಳು ಇದ್ದರು.



ಬೆಟ್ಟದಪುರ ಸಮೀಪದ ಕೊರ್ಗಲ್ಲು ಗ್ರಾಮದಲ್ಲಿ ಶಾಸಕ ಕೆ.ಮಹದೇವ್ 10 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಯುವ ಮುಖಂಡ ಗಗನ್, ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ಶಿವಕುಮಾರ್‌ಸ್ವಾಮಿ, ಗ್ರಾಪಂ ಅಧ್ಯಕ್ಷೆ ಮಮತಾ, ಉಪಾಧ್ಯಕ್ಷ ದೀಪು, ಮಾಜಿ ಅಧ್ಯಕ್ಷೆ ಸವಿತಾ, ಮುಖಂಡರಾದ ಮಧು, ಸುಬ್ಬಯ್ಯ, ದೊಡ್ಡ ತಿಮ್ಮಯ್ಯ, ಯಜಮಾನ ಅಣ್ಣಯ್ಯ, ಚಂದ್ರಶೇಖರ್, ಗಿರೀಶ್, ಜಿಪಂ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್, ಇಂಜಿನಿಯರ್ ದೀಪು, ಪಿಡಿಒ ದೇವರಾಜೇಗೌಡ ಇನ್ನಿತರರಿದ್ದರು.

ಭಾರೀ ಮಳೆಗೆ ಬ್ಯಾರನ್ ಕುಸಿತ



ಹುಣಸೂರು, ಡಿ.18– ಇತ್ತೀಚೆಗೆ ಸುರಿದ ಭಾರೀ ಮಳೆಗೆ ತಂಬಾಕು ಹದ ಮಾಡುವ ಬ್ಯಾರನ್ ಕುಸಿದು ಬಿದ್ದಿರುವ ಘಟನೆ ತಾಲೂಕಿನ ವೊದೂರು ಪಿ.ಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸಿದ್ದರಾಮೇಗೌಡರ ಪುತ್ರ ಮಾದೇಗೌಡರಿಗೆ ಸೇರಿದ ಬ್ಯಾರನ್ ಕುಸಿದು ಬಿದ್ದಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಸ್ಥಳಕ್ಕೆ ಭೇಟಿ ನೀಡಿದ ಗ್ರಾಪಂ ಅಧಿಕಾರಿಗಳು ಪರಿಶೀಲಿಸಿ, ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.



ಸರಗೂರಿನಲ್ಲಿ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ಶಿವಾರ್ಚಕರ ಸಂಘದ ನಾಮಫಲಕವನ್ನು ಸಂಘದ ಅಧ್ಯಕ್ಷ ರವಿಶಾಸ್ತ್ರಿ ಗುರೂಜಿ ಉದ್ಘಾಟಿಸಿದರು. ಈ ವೇಳೆ ಉಪಾಧ್ಯಕ್ಷ ನಂಜುಂಡಸ್ವಾಮಿ, ಕಾರ್ಯದರ್ಶಿ ಜಗದೀಶ್, ಖಜಾಂಚಿ ಮಹದೇವಸ್ವಾಮಿ, ಸದಸ್ಯರಾದ ಗೀತಾ, ರಾಜಣ್ಣ, ಶಿವಕುಮಾರ, ರಘುಕೀರ್ತಿ, ಎಂ.ಎಸ್. ರವಿಕುಮಾರ್, ಚಂದ್ರಪ್ಪ, ಯಶವಂತ್, ಶಿವಪ್ಪ ಹಾಗೂ ಸಂಘದ ಸದಸ್ಯರಿದ್ದರು.

ಡಿ.26ಕ್ಕೆ ತಿ.ನರಸೀಪುರ ಪುರಸಭಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಉತ್ತಮ ಅಭ್ಯರ್ಥಿ ಆಯ್ಕೆಗೆ ಮಾಜಿ ಸಿಎಂ ಸಿದ್ದರಾಮಯ್ಯಗೆ ಮನವಿ

ತಿ.ನರಸೀಪುರ, ಡಿ.18– ಪುರಸಭಾಧ್ಯಕ್ಷ ಸ್ಥಾನಕ್ಕೆ ಡಿ.26ರಂದು ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಪುರಸಭಾ ಸದಸ್ಯರ ಪ್ರತ್ಯೇಕ ನಿಯೋಗ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಉತ್ತಮ ಅಭ್ಯರ್ಥಿ ಆಯ್ಕೆ ಮಾಡುವಂತೆ ಮನವಿ ಸಲ್ಲಿಸಿತು.

ಅಧ್ಯಕ್ಷರಾಗಿ 1 ವರ್ಷ ಅಧಿಕಾರ ನಡೆಸಿದ ನಿಕಟಪೂರ್ವ ಅಧ್ಯಕ್ಷ ಎಸ್.ಮದನ್‌ರಾಜ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಮುಂದಿನ ಅವಧಿಗೆ ಡಿ.26ರಂದು ಚುನಾವಣೆ ನಿಗದಿಯಾಗಿದೆ. ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಸದಸ್ಯ ಬಾದಾಮಿ ಮಂಜು ಹಾಗೂ ಟಿ.ಎಂ.ನಂಜುಂಡಸ್ವಾಮಿ ಸ್ಪರ್ಧೆಯಲ್ಲಿದ್ದು, ಅಧ್ಯಕ್ಷ ಸ್ಥಾನ ಯಾರ ಪಾಲಾಗಲಿದೆ ಎಂಬುದು ಕುತೂಹಲ ಮೂಡಿಸಿದೆ.

ಈ ಹಿನ್ನೆಲೆಯಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಹಾಗೂ ಸದಸ್ಯ ಪ್ರಕಾಶ್ ಟಿ.ಎಂ.ನಂಜುಂಡಸ್ವಾಮಿ ಪರ ಬ್ಯಾಟ್ ಬೀಸಿದರೆ, ಉಳಿದ ಸದಸ್ಯರಾದ ಮದನ್‌ರಾಜ್, ಮೆಡಿಕಲ್ ನಾಗರಾಜು, ಮಂಜುನಾಥ್ ಹಾಗೂ ಕುರುಬ ಸಮುದಾಯದ ಹಿರಿಯ ಮುಖಂಡ ಬಸವಣ್ಣ, ಜಿಪಂ ಮಾಜಿ ಸದಸ್ಯ ಎಂ.ಆರ್. ಸೋಮಣ್ಣ, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಮಹದೇವಸ್ವಾಮಿ, ಎನ್.ಎಸ್.ಬಸವರಾಜು, ಗ್ರಾಪಂ ಮಾಜಿ ಅಧ್ಯಕ್ಷ ವಾಟಾಳ್ ನಾಗೇಶ್, ಅಕ್ಕೂರು ಗುರುಮೂರ್ತಿ, ಮುಖಂಡರಾದ ಫೈನಾನ್ಸ್ ರಾಜು, ಕರಿಯಪ್ಪ, ಸಂತೃಪ್ತಿ ಕುಮಾರ್ ಸೇರಿದಂತೆ ಮತ್ತಿತರರು ಬಾದಾಮಿ ಮಂಜುಗೆ ಅವಕಾಶ ನೀಡುವಂತೆ ಒತ್ತಾಯಿಸಿದ್ದಾರೆ.

ಕುರುಬ ಸಮುದಾಯದ ಹಿರಿಯ ಮುಖಂಡ ಬಸವಣ್ಣ ಒಳಗೊಂಡ ನಿಯೋಗ ಕಳೆದ 2 ಅವಧಿಯ ಅಧ್ಯಕ್ಷ ಚುನಾವಣೆಯಲ್ಲಿ ವರುಣಾ ಕ್ಷೇತ್ರಕ್ಕೆ ಆದ್ಯತೆ ನೀಡಿ ಎನ್.ಸೋಮು ಹಾಗೂ ಮದನ್‌ರಾಜ್ ಅವರಿಗೆ ಅವಕಾಶ ಕಲ್ಪಿಸಿದ್ದೀರಿ. ಹಾಗಾಗಿ ಈ ಬಾರಿ ತಿ.ನರಸೀಪುರ ಪಟ್ಟಣ ವ್ಯಾಪ್ತಿಯ ಸದಸ್ಯರಿಗೆ ಅಧ್ಯಕ್ಷ ಸ್ಥಾನ ಕಲ್ಪಿಸಿಕೊಡುವಂತೆ ಮನವಿ ಸಲ್ಲಿಸಿತು.



ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜ್‌ಗೌಡ ಭ್ರಷ್ಟರನ್ನು ಬಿಟ್ಟು ಪ್ರಾಮಾಣಿಕರು, ನಿಷ್ಠಾವಂತರಿಗೆ ಅಧ್ಯಕ್ಷ ಸ್ಥಾನ ಕಲ್ಪಿಸಿಕೊಡುವಂತೆ ಮನವಿ ಮಾಡಿದರು. ಎರಡೂ ತಂಡಗಳ ಸದಸ್ಯರ ಮನವಿ ಆಲಿಸಿದ ಸಿದ್ದರಾಮಯ್ಯ, ಈಗ ಯಾವುದೇ ನಿರ್ಧಾರ ಕೈಗೊಳ್ಳುವುದು ಬೇಡ. ಡಿ.26 ರಂದು ಚುನಾವಣೆ ಇದ್ದು, 25ಕ್ಕೆ ಎಲ್ಲಾ ಸದಸ್ಯರು ಸಭೆ ಸೇರಿ ಒಮ್ಮತದ ಅಭ್ಯರ್ಥಿ ಆಯ್ಕೆ ಮಾಡೋಣ ಎಂದು ತಿಳಿಸಿದರೆನ್ನಲಾಗಿದ್ದು, ಅಧ್ಯಕ್ಷ ಸ್ಥಾನ ಬಾದಾಮಿ ಮಂಜು ಅಥವಾ ಟಿ.ಎಂ.ನಂಜುಂಡಸ್ವಾಮಿ ಇವರಿಬ್ಬರಲ್ಲಿ ಯಾರ ಪಾಲಾಗಲಿದೆ ಎಂಬುದು ಕಾದು ನೋಡಬೇಕಿದೆ. ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ವಿ.ಪಿ.ಹುಂಡಿ ಬಸವರಾಜು, ಆಲಗೂಡು ರಾಶಿ, ಮೂಗೂರು ವಿನಯ್ ಈ ವೇಳೆ ಇದ್ದರು.

ಜಿಂಕೆ ಬೇಟೆಯಾಡಿ ಮಾಂಸ ಕತ್ತರಿಸುತ್ತಿದ್ದ ಬೇಟೆಗಾರರು ರೈತರ ಕಂಡು ಪರಾರಿ

ಪರಾರಿ ವೇಳೆ ಪಲ್ಟಿಯಾದ ಜೀಪ್ ವಶ

ನಂಜನಗೂಡು,ಡಿ.18– ದುಷ್ಕರ್ಮಿಗಳು ಜಿಂಕೆ ಬೇಟೆಯಾಡಿ ಮರಕ್ಕೆ ನೇತು ಹಾಕಿ ಮಾಂಸ ಕತ್ತರಿಸುವ ವೇಳೆ ಜಮೀನಿಗೆ ಹೋಗುತ್ತಿದ್ದ ರೈತರನ್ನು ಕಂಡು ಗಾಬರಿಗೊಂಡು ಜಿಂಕೆ ಮಾಂಸ ಬಿಟ್ಟು ಜೀಪಿನಲ್ಲಿ ಪರಾರಿಯಾಗಲು ಯತ್ನಿಸಿದಾಗ ಜೀಪ್ ಪಲ್ಟಿಯಾದ ಘಟನೆ ಶನಿವಾರ ರಾತ್ರಿ ತಾಲೂಕಿನ ಕೋಣನೂರು ಗ್ರಾಮದ ಎತ್ತಿನಮುಂಟೆ ಎಂಬಲ್ಲಿ ನಡೆದಿದೆ.

ಜೀಪ್ ಪಲ್ಟಿಯಾದರೂ ಕೂಡ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ. ತಾಲೂಕಿನ ಕೋಣನೂರು ಗ್ರಾಮದ ಎತ್ತಿನಮುಂಟೆ ಎಂಬ ಸ್ಥಳದಲ್ಲಿ ಜಿಂಕೆಯನ್ನು ಬೇಟೆಯಾಡಿ ಅಲ್ಲೇ ಪಕ್ಕದಲ್ಲಿದ್ದ ಬೇವಿನ ಮರಕ್ಕೆ ನೇತು ಹಾಕಿ ಮಾಂಸ ಕತ್ತರಿಸಿ ತುಂಬುತ್ತಿದ್ದರು. ಇದೇ ವೇಳೆಗೆ ಜಮೀನಿನ ಬೆಳೆ ಕಾಯಲೆಂದು ಅತ್ತ ತೆರಳಿದ ರೈತರು ಬೋರ್‌ವೆಲ್, ಪಂಪ್ ಸೆಟ್ ಕಳ್ಳರೆಂದು ಭಾವಿಸಿ ಕೂಗಿಕೊಂಡಿದ್ದಾರೆ. ಇದರಿಂದ ಗಾಬರಿಗೊಂಡ ದುಷ್ಕರ್ಮಿಗಳು ಜಿಂಕೆಯ ಮಾಂಸವನ್ನು ಅಲ್ಲಿಯೇ ಬಿಟ್ಟು ಜೀಪ್‌ನಲ್ಲಿ ಪರಾರಿಯಾಗಲು ಯತ್ನಿಸಿದ್ದಾರೆ. ಜೀಪ್‌ನ ಚಕ್ರ ರಸ್ತೆಯ ಪಕ್ಕದಲ್ಲಿದ್ದ ಚರಂಡಿಗೆ ಇಳಿದ ಕಾರಣ ಜೀಪ್ ಪಲ್ಟಿ ಹೊಡೆದಿದೆ. ದುಷ್ಕರ್ಮಿಗಳು ಜೀಪ್, ಆಯುಧಗಳು, ವಿದ್ಯುತ್ ಲೈಟ್‌ನ್ನು ಅಲ್ಲೆ ಬಿಟ್ಟು ಪರಾರಿಯಾಗಿದ್ದಾರೆ. ನಂತರ ರೈತರು ಅರಣ್ಯಾಧಿಕಾರಿಗಳಿಗೆ ವಿಷಯ ತಿಳಿಸಿದ್ದಾರೆ.



ವಲಯ ಅರಣ್ಯಾಧಿಕಾರಿ ಕಿರಣ್ ಕುಮಾರ್ ಕರತಂಗಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ ಶನಿವಾರ ರಾತ್ರಿ ಸರಗೂರು ಸಮೀಪದಲ್ಲಿ ಗಸ್ತು ನಡೆಸುತ್ತಿದ್ದ ವೇಳೆ ರೈತರಿಂದ ವಿಷಯ ತಿಳಿಯಿತು. ತಕ್ಷಣ ಕವಲಂದೆ ಪೊಲೀಸರೊಂದಿಗೆ ಸ್ಥಳಕ್ಕೆ ತೆರಳಿ 3 ತಂಡಗಳೊಂದಿಗೆ ಹುಡುಕಾಟ ನಡೆಸಿದರೂ ದುಷ್ಕರ್ಮಿಗಳ ಪತ್ತೆಯಾಗಲಿಲ್ಲ, ಸ್ಥಳದಲ್ಲಿದ್ದ ಜಿಂಕೆ ಕಳೇಬರ, ಜೀಪು, ಹೆಡ್‌ಲೈಟ್, ಡೂಮ್‌ಲೈಟ್‌ಗಳು, ಮತ್ತು ಬೇಟೆಗೆ ಬಳಸಿದ ಕತ್ತಿ ಚಾಕು ಮತ್ತಿತ್ತರ ಆಯುಧಗಳನ್ನು ವಶಪಡಿಸಿಕೊಳ್ಳಲಾಗಿದ್ದು. ಜಿಂಕೆಯ ಕಳೇಬರವನ್ನು ಪಶುವೈದ್ಯಾಧಿಕಾರಿಗಳಿಂದ ಪರಿಶೀಲನೆ ನಡೆಸಲಾಗಿದೆ. ಜೀಪ್ ಕೇರಳದ ಪಲಕಾಲ್‌ನ ರಾಜೇಶ್ ಎಂಬ ವ್ಯಕ್ತಿಗೆ ಸೇರಿದ್ದಾಗಿದ್ದು, ಮೇಲಧಿಕಾರಿಗಳ ಅನುಮತಿ ಪಡೆದು ದುಷ್ಕರ್ಮಿಗಳನ್ನು ದಸ್ತಗಿರಿ ನಡೆಸಿ ಹೆಚ್ಚಿನ ತನಿಖೆ ನಡೆಸುವುದಾಗಿ ತಿಳಿಸಿದರು.

ಇದೇ ವೇಳೆ ಅರಣ್ಯಾಧಿಕಾರಿಗಳಾದ ಮಂಜುನಾಥಸ್ವಾಮಿ, ಸಿಬ್ಬಂದಿಗಳಾದ ಶರತ್, ಮುರುಗ, ಮತ್ತು ಕವಲಂದೆ ಪೊಲೀಸರು ಇದ್ದರು.


ನನ್ನ ಅಧಿಕಾರವಧಿಯಲ್ಲಿ ಏತ ನೀರಾವರಿ ಯೋಜನೆ ಮೂಲಕ

ಉಕ್ಕಲಗೆರೆ ಸುತ್ತಮುತ್ತಲ 900 ಎಕರೆಗೆ ನೀರಾವರಿ ಸೌಲಭ್ಯ

- ಕಾರ್ಯಕರ್ತರ ಸಭೆಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ
- ಹಲವು ಜೆಡಿಎಸ್ ಮುಖಂಡರು 'ಕೈ' ಸೇರ್ಪಡೆ

ತಿ.ನರಸೀಪುರ, ಡಿ.18– ನನ್ನ ಅಧಿಕಾರವಧಿಯಲ್ಲಿ ಏತ ನೀರಾವರಿ ಯೋಜನೆ ಮೂಲಕ ಉಕ್ಕಲಗೆರೆ ಸುತ್ತಮುತ್ತಲಿನ 900 ಎಕರೆ ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಉಕ್ಕಲಗೆರೆಯಲ್ಲಿ ನಡೆದ ಗ್ರಾಪಂ ಮಟ್ಟದ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಹಲವು ವೀರ ಶೈವ ಲಿಂಗಾಯತ ಸಮುದಾಯದ ಜೆಡಿಎಸ್ ಮುಖಂಡರನ್ನು ಕಾಂಗ್ರೆಸ್‌ಗೆ ಬರಮಾಡಿಕೊಂಡು ಮಾತನಾಡಿದ ಅವರು, ಈ ಭಾಗದ ಜಮೀನು ಗಳಿಗೆ ನೀರಾವರಿ ಸೌಲಭ್ಯ ಇರಲಿಲ್ಲ. ಹೀಗಾಗಿ ನನ್ನ ಅವಧಿಯಲ್ಲಿ ಏತ ನೀರಾವರಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲಾಯಿತು ಎಂದರು.



ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದರೂ, ಗ್ರಾಪಂಗಳಿಗೆ ಒಂದೇ ಒಂದು ವಸತಿ ಯೋಜನೆ ಕೊಟ್ಟಿಲ್ಲ. ಸೂರು ನಿರ್ಮಿಸಿಕೊಳ್ಳಲು ಬಡವರು ಅರ್ಜಿ ಕೊಟ್ಟರು ಕ್ಯಾರೆ ಅನ್ನುತ್ತಿಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಒಂದೊಂದು ಗ್ರಾಪಂಗೆ 400 ರಿಂದ 500 ಮನೆ ಮಂಜೂರು ಮಾಡಿದ್ದೆವು. ಶಾಲಾ ಮಕ್ಕಳಿಗೆ ವಿದ್ಯಾರ್ಥಿ ವೇತನ ಸ್ಥಗಿತಗೊಳಿಸಿರುವ ಸರ್ಕಾರ ಈಗ ಸೈಕಲ್‌ಗಳನ್ನು ಕೊಡುತ್ತಿಲ್ಲ. ವೃದ್ಧಾಪ್ಯ ವೇತನ ನೀಡುವುದಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಇಂತಹ ಬಡವರ, ಜನವಿರೋಧಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಿ ರೈತರು ಮತ್ತು ಬಡವರ ಪರ ಯೋಜನೆ ರೂಪಿಸುವ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಬೇಕೆಂದು ಕರೆ ನೀಡಿದರು.

ಎಪಿಎಂಸಿ ಮಾಜಿ ನಿರ್ದೇಶಕ ಬಸವಣ್ಣ ಮಾತನಾಡಿ, ಗ್ರಾಮದ ಸಮುದಾಯ ಭವನಗಳ ನಿರ್ಮಾಣಕ್ಕೆ ಸಿಎಂ ಆಗಿದ್ದ ಸಿದ್ದರಾಮಯ್ಯ ಒಂದು ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದರು. ಪರಿಶಿಷ್ಟ ಜಾತಿ ಮತ್ತು ಪಂಗಡ ಭವನಗಳಿಗೆ 50 ಲಕ್ಷ, ಶ್ರೀಬಸವೇಶ್ವರ ಭವನಕ್ಕೂ ಅನುದಾನ ನೀಡಿ ಅದರಲ್ಲಿ ಉಳಿದ 33 ಲಕ್ಷವನ್ನು ಕನಕ ಭವನಕ್ಕೆ ಮಂಜೂರು ಮಾಡಲಾಗಿತ್ತು. ಆ ಹಣ ಶಾಸಕರದ್ದೇ ಆಗಿದ್ದರೆ ಕೆಲಸ ಮಾಡಿಸಲಿ. ಗ್ರಾಪಂ ಅಧ್ಯಕ್ಷರ ಸಹಿಯನ್ನು ಇಂಜಿನಿಯರ್ ಏಕೆ ಕೇಳುತ್ತಾರೆ. ಹತ್ತಾರು ಕೋಟಿ ರೂ. ಯೋಜನೆ ರೂಪಿಸಿ ರಸ್ತೆಗಳ ಸಂಪರ್ಕ ಸುಧಾರಿಸಿ, ನೂರಾರು ಕೋಟಿ ರೂ. ವೆಚ್ಚದಲ್ಲಿ ನಾಲೆಗಳ ಆಧುನೀಕರಣದ ಮೂಲಕ ನೀರಾವರಿ ಸೌಲಭ್ಯವನ್ನು ನೂರಾರು ಎಕರೆ ಜಮೀನಿಗೆ ವಿಸ್ತರಿಸಿ, ಕೆರೆ ಕೋಡಿ ರಸ್ತೆ ನಿರ್ಮಿಸಿದ ಮಹದೇವಪ್ಪ ಅವರ ಅಭಿವೃದ್ಧಿ ಕಾಳಜಿ ನಿಜಕ್ಕೂ ಶ್ಲಾಘನೀಯ ಎಂದರು.

> 2023ಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಭದ್ರವಾಗಿಸಲು ಹತ್ತರಿಂದ ಇಪ್ಪತ್ತು ಸದಸ್ಯರಿರುವ ಬೂತ್ ಸಮಿತಿ ರಚಿಸಲಾಗುವುದು. ಭೂತ್ ಸಮಿತಿಗೆ ಚುನಾವಣೆ ಸಂಪೂರ್ಣ ಜವಾಬ್ದಾರಿ ನೀಡಲಾಗುವುದು. ಇನ್ಮುಂದೆ 3 ತಿಂಗಳಿಗೊಮ್ಮೆ ಬೂತ್ ಮಟ್ಟದಲ್ಲಿಯೇ ಸಭೆ ನಡೆಸಲಾಗುವುದು.
> **–ಸುನೀಲ್ ಬೋಸ್, ಯುವ ಮುಖಂಡ.**

ಅಡುಗೆ ಕಾಂಟ್ರಾಕ್ಟರ್ ಜಿ.ಎಂ. ಮಹದೇವಸ್ವಾಮಿ, ಮಲ್ಲೇಶ್, ಶಿವಮೂರ್ತಿ, ಸೋಮನಾಥಪುರ ಪಿಎಸಿಎಸ್ ಅಧ್ಯಕ್ಷ ಷಡಕ್ಷರಿ, ಮಾಜಿ ನಿರ್ದೇಶಕ ಮಹದೇವಸ್ವಾಮಿ, ಶಿವಪ್ಪ, ಪರಮೇಶ, ಮಹದೇವಪ್ಪ, ನಾಗರಾಜು, ಮಹದೇವಪ್ಪ, ಮಲ್ಲಿಕ್, ಎಂ.ಪಿ.ಮಹದೇವಪ್ಪ, ಚಂದ್ರ ಶೇಖರ ಹಾಗೂ ಇನ್ನಿತರರು ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ. ಚನ್ನಕೇಶವ, ಎಂ.ಡಿ.ಬಸವರಾಜು, ಮಹಿಳಾಧ್ಯಕ್ಷೆ ವೀಣಾ, ತಾಪಂ ಮಾಜಿ ಸದಸ್ಯ ರಾಮಲಿಂಗಯ್ಯ, ಗ್ರಾಪಂ ಅಧ್ಯಕ್ಷೆ ಶಿವಮ್ಮ, ಉಪಾಧ್ಯಕ್ಷೆ ಮಂಜುಳಾ, ಸದಸ್ಯರಾದ ರವಿಶಂಕರ್, ಎಂ.ರಾಜು, ನಾಗಲಾಂಬಿಕ, ಮಹದೇವಮ್ಮ ಲತಾ, ನಿಂಗರಾಜು, ಮಹದೇವು, ಮಾಜಿ ಅಧ್ಯಕ್ಷ ಚಿಕ್ಕಣ್ಣ, ಎಂಚಂದ್ರಶೇಖರ, ಎಸ್.ರಾಜೇಶ್, ಮುಖಂಡರಾದ ಪ್ರಭುಸ್ವಾಮಿ, ಶ್ರೀಕಂಠಸ್ವಾಮಿ, ಡೈರಿ ಮಹದೇವಸ್ವಾಮಿ, ನಾಗೇಂದ್ರ, ನಂಜುಂಡಯ್ಯ, ಕುಮಾರ ರಾಮೇಗೌಡ, ಮಹೇಶ, ಮಹದೇವಯ್ಯ, ನಾಗಣ್ಣ, ದೇವರಾಜು, ಗದ್ದೆಮೊಳೆ ಸಿದ್ದರಾಜು ಇನ್ನಿತರರಿದ್ದರು.

ಪೌರ ಕಾರ್ಮಿಕರಿಗೆ ಮೂಲಸೌಕರ್ಯ ಕಲ್ಪಿಸಲು ಆಗ್ರಹ



ಹುಣಸೂರು, ಡಿ.18– ಸಫಾಯಿ ಕರ್ಮಚಾರಿ ಪುನರ್ ವಸತಿ ಜಾಗೃತಿ ಸಮಿತಿ ರಚನೆಯಾಗಿ ವರ್ಷಗಳೇ ಕಳೆದಿದ್ದರೂ ಪೌರ ಕಾರ್ಮಿಕರ ಹಾಗೂ ಸಫಾಯಿ ಕರ್ಮಚಾರಿಗಳಿಗೆ ಪುನರ್ವಸತಿ ಮತ್ತು ಮೂಲ ಸೌಕರ್ಯ ಕಲ್ಪಿಸುವಲ್ಲಿ ಅಧಿಕಾರಿಗಳು ವಿಫಲವಾಗಿದ್ದಾರೆ ಎಂದು ಸಫಾಯಿ ಕರ್ಮಚಾರಿ ಪುನರ್ವಸತಿ ಜಾಗೃತಿ ಸಮಿತಿ ಸದಸ್ಯ ಹೆಚ್.ಕೆ.ಮಹೇಶ್ ವಿಷಾದ ವ್ಯಕ್ತಪಡಿಸಿದರು.

ಉಪವಿಭಾಗಾಧಿಕಾರಿ ಕಚೇರಿಯಲ್ಲಿ ನಡೆದ ಉಪ ವಿಭಾಗ ಮಟ್ಟದ ಸಫಾಯಿ ಕರ್ಮ ಚಾರಿ ಪುನರ್ವಸತಿ ಜಾಗೃತಿ ಸಮಿತಿ ಸಭೆಯಲ್ಲಿ ಸಮಸ್ಯೆಗಳ ಕುರಿತು ಮಾತನಾಡಿದರು. ಹೆಚ್.ಡಿ.ಕೋಟೆ ಸರಗೂರಿನಲ್ಲಿ ಸಮುದಾಯ ಭವನಗಳಿಲ್ಲ ಎಂದು ಸದಸ್ಯೆ ಸಭೆಯ ಗಮನಕ್ಕೆ ತಂದಾಗ ಸಮುದಾಯ ಭವನಗಳನ್ನು ನಿರ್ಮಿಸಲು ಅನುದಾನದ ಕೊರತೆ ಇಲ್ಲ ಎಂದು ಅಧಿಕಾರಿಗಳು ತಿಳಿಸಿದರು. ಬೇಡಿಕೆಗಳ ಮನವಿಯನ್ನು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸಿದರು.


ಎಸಿ ರುಚಿ ಬಿಂದಾಲ್, ತಹಸೀಲ್ದಾರ್ ಡಾ.ಅಶೋಕ್, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಮೋಹನ್‌ಕುಮಾರ್, ಪಿರಿಯಾಪಟ್ಟಣ ಇಓ ಕೃಷ್ಣಕುಮಾರ್, ನಗರಸಭಾ ಪೌರಾಯುಕ್ತೆ ಮಾನಸ, ಪರಿಸರ ಇಂಜಿನಿಯರ್ ರೂಪ, ಸತೀಶ್, ಬಸವರಾಜು, ತಾಲೂಕು ಮಟ್ಟದ ಅಧಿಕಾರಿಗಳು, ಅಬಕಾರಿ, ಪೊಲೀಸ್ ಇಲಾಖೆ ಅಧಿಕಾರಿಗಳು ಇದ್ದರು.

ಪತ್ರಕರ್ತ ಕೆ.ಎಸ್.ಪ್ರಕಾಶ್ ನಿಧನ



ಕಂಪಲಾಪುರ, ಡಿ.18–2 ದಶಕಗಳಿಗೂ ಹೆಚ್ಚುಕಾಲ ವಿವಿಧ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ್ದ ಪತ್ರಕರ್ತ ಪ್ರಕಾಶ್(49) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಪಿರಿಯಾಪಟ್ಟಣ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ನಂಜಯ್ಯ ನಿಧನ



ತಿ.ನರಸೀಪುರ ಡಿ.18– ಅಳಗಂಚಿ ಗ್ರಾಮದ ಎ.ಎನ್.ಶಿವಯ್ಯ ಅವರ ತಂದೆ ನಂಜಯ್ಯ(94) ಅಳಗಂಚಿ ಗ್ರಾಮದ ಸ್ವಗೃಹದಲ್ಲಿ ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಡಿ.19ರಂದು ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಾದಾಮಿ ಕ್ಷೇತ್ರದ ಜನರಿಂದ ಮಾಜಿ ಸಿಎಂ ಸಿದ್ಧರಾಮಯ್ಯಗೆ ಹೆಲಿಕಾಪ್ಟರ್ ನೀಡಲು ನಿರ್ಧಾರ

ಮೈಸೂರಲ್ಲಿ ಶಾಸಕ ಜಮೀರ್ ಅಹಮದ್ ಹೇಳಿಕೆ

ಮೈಸೂರು, ಡಿ.18(ಎಸ್‌ಬಿಡಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹೆಲಿಕಾಪ್ಟರ್ ಕೊಡುಗೆ ನೀಡಲು ಬಾದಾಮಿ ಕ್ಷೇತ್ರದ ಜನ ನಿರ್ಧರಿಸಿದ್ದಾರೆ ಎಂದು ಶಾಸಕ ಜಮೀರ್ ಅಹಮದ್ ಹೇಳಿದ್ದಾರೆ.

ಮೈಸೂರಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಅವರು ಮಾಧ್ಯಮಗಳೊಂದಿಗೆ ಮಾತನಾಡಿ, ಬಾದಾಮಿ ಕ್ಷೇತ್ರದಿಂದ ಸಿದ್ದರಾಮಯ್ಯನವರು ಶಾಸಕರಾಗಿ ಆಯ್ಕೆಯಾದ ನಂತರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ. ಅಲ್ಲಿ 6 ದಶಕಗಳಲ್ಲಿ ಆಗದಿರುವಷ್ಟು ಕೆಲಸ ಕಾರ್ಯಗಳು ಕಳೆದ 5 ವರ್ಷಗಳಲ್ಲಾಗಿವೆ. ಹಾಗಾಗಿ ಮುಂಬರುವ ಚುನಾವಣೆಯಲ್ಲೂ ಬಾದಾಮಿಯಿಂದಲೇ ಸ್ಪರ್ಧಿಸುವಂತೆ ಅಲ್ಲಿನ ಜನ ಒತ್ತಾಯಿಸುತ್ತಿದ್ದಾರೆ ಎಂದರು.



ಶಾಸಕರು ತಿಂಗಳಲ್ಲಿ ಕನಿಷ್ಟ 2 ಬಾರಿಯಾದರೂ ತಮ್ಮ ಕ್ಷೇತ್ರಕ್ಕೆ ಭೇಟಿ ನೀಡಬೇಕು. ಆದರೆ ವಯಸ್ಸಿನ ಕಾರಣದಿಂದ ಹೆಚ್ಚು ಪ್ರಯಾಣ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಸಿದ್ದರಾಮಯ್ಯನವರು ಹೇಳಿದ್ದರು. ಆದರೆ ಆರಾಮದಾಯಕ ಪ್ರವಾಸಕ್ಕಾಗಿ ಹೆಲಿಕಾಪ್ಟರ್ ಕೊಡಿಸಲು ತೀರ್ಮಾನಿಸಿ, ಕ್ಷೇತ್ರದ ಜನರು ಹಣ ಸಂಗ್ರಹಿಸುತ್ತಿದ್ದಾರೆ ಎಂದು ತಿಳಿಸಿದರು.

ಎನ್‌ಆರ್‌ನಲ್ಲಿ ಸ್ಪರ್ಧಿಸಬಹುದು: ಕಾಂಗ್ರೆಸ್ ಪಕ್ಷದಲ್ಲಿ ನಾನೂ ಒಬ್ಬ ಪ್ರಬಲ ನಾಯಕ. ನನ್ನ ಆಪ್ತರು ಹಾಗೂ ಬೆಂಬಲಿಗರು ಸೇರಿ ಸುಮಾರು 24 ಮಂದಿಗೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನೀಡುವಂತೆ ಕೋರಿದ್ದೇನೆ. ಆದರೆ ಈ ಬಗ್ಗೆ ಹೈಕಮಾಂಡ್ ಕೈಗೊಳ್ಳುವ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ. ಸದ್ಯ ನಾನು ಚಾಮರಾಜಪೇಟೆ ಕ್ಷೇತ್ರದ ಶಾಸಕನಾಗಿದ್ದೇನೆ. ಹೈಕಮಾಂಡ್ ಸೂಚನೆ ನೀಡಿದರೆ ಮೈಸೂರಿನ ನರಸಿಂಹರಾಜ ಕ್ಷೇತ್ರವಾದರೂ ನಾನು ಸ್ಪರ್ಧೆ ಮಾಡಲೇಬೇಕಾಗುತ್ತದೆ ಎಂದರು.

ಹೆಚ್‌ಡಿಕೆಗೆ ಮತ್ತೆ ಸವಾಲು: ಜೆಡಿಎಸ್ ಅಧಿಕಾರಕ್ಕೆ ಬಂದರೆ ಮುಸ್ಲಿಂ ಮುಖ್ಯಮಂತ್ರಿ ಮಾಡಲಿದ್ದೇವೆ ಎಂಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಜಮೀರ್ ಅಹಮದ್, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಜೆಡಿಎಸ್ ಅಧಿಕಾರಕ್ಕೆ ಬಂದರೆ ಮುಸ್ಲಿಂ ನಾಯಕರನ್ನು ಮುಖ್ಯಮಂತ್ರಿ ಮಾಡುವುದಾಗಿ ಕುಮಾರಸ್ವಾಮಿ ಹೇಳಿದ್ದಾರೆ. ಆದರೆ ಜೆಡಿಎಸ್ 18ರಿಂದ 23 ಕ್ಷೇತ್ರದಲ್ಲಿ ಗೆಲ್ಲಬಹುದೇ ಹೊರತು, ನೂರು ಸೀಟ್ ಪಡೆಯಲು ಸಾಧ್ಯವಿಲ್ಲ. ಮುಸ್ಲಿಮರ ಮತ ಸೆಳೆಯುವ ಉದ್ದೇಶದಿಂದ ಅವರು ಈ ರೀತಿಯ ಹೇಳಿಕೆ ನೀಡುತ್ತಿದ್ದಾರೆ. ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಮುಸ್ಲಿಮರ ಮೇಲೆ ನಿಜವಾಗಿ ಪ್ರೀತಿ ಇದ್ದರೆ ಅವರ ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಸ್ಪಷ್ಟವಾಗಿ ಘೋಷಿಸಲಿ ಎಂದು ಸವಾಲು ಹಾಕಿದರು.

ಪ್ರತಾಪ್ ಸಿಂಹ ಅವರೇನು ಹೈಕಮಾಂಡಾ?

ವಿಶ್ವನಾಥ್ ವಿರುದ್ಧದ ಹೇಳಿಕೆಗೆ ಕುರುಬರ ಸಂಘ ಖಂಡನೆ

ಮೈಸೂರು, ಡಿ.18– ಬಿಜೆಪಿ ತತ್ವ ಸಿದ್ಧಾಂತದಲ್ಲಿ ಅಪಥ್ಯ ಆಗಿದ್ದರೆ, ವಿಶ್ವನಾಥ್ ಅವರು ಬೇರೆ ಕಡೆಗೆ ಹೋಗಬಹುದು ಎಂಬ ಸಂಸದ ಪ್ರತಾಪ್ ಸಿಂಹ ಅವರ ಹೇಳಿಕೆಗೆ ಕರ್ನಾಟಕ ಪ್ರದೇಶ ಕುರುಬರ ಸಂಘ ತೀವ್ರ ಖಂಡನೆ ವ್ಯಕ್ತಪಡಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಂಘದ ರಾಜ್ಯಾಧ್ಯಕ್ಷ ಬಿ. ಸುಬ್ರಹ್ಮಣ್ಯ, ವಿಶ್ವನಾಥ್ ಅವರು ಹಿರಿಯ ರಾಜಕೀಯ ಮುತ್ಸದ್ಧಿ, ಬಿಜೆಪಿ ಇಂದು ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಅವರೇ ಪ್ರಮುಖ ಕಾರಣ. ಅಂದು ಜೆಡಿಎಸ್‌ನಲ್ಲಿ ರಾಜ್ಯಾಧ್ಯಕ್ಷರಾಗಿ, ಹುಣಸೂರು ಕ್ಷೇತ್ರದ ಶಾಸಕರಾಗಿದ್ದರು. ಅಂತಹವರಿಗೆ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ನಮ್ಮನ್ನು ಬೆಂಬಲಿಸಬೇಕು ಎಂದು ಬಿ.ಎಸ್.ಯಡಿಯೂರಪ್ಪ ಅವರೇ ಕೇಳಿಕೊಂಡಿದ್ದರು. ವಿಶ್ವನಾಥ್ ಅವರ ಆಪ್ತ ಬಳಗವನ್ನು ಸಂಪರ್ಕಿಸಿ ರಾಜೀನಾಮೆ ಕೊಡುವಂತೆ ಅಲವತ್ತುಕೊಂಡಿದ್ದರು. ಅದರಿಂದ ವಿಶ್ವನಾಥ್ ಅವರು ರಾಜೀನಾಮೆ ಕೊಡುವಂತಾಯಿತು. ನಂತರ ಅವರನ್ನು ಮಂತ್ರಿ ಮಾಡುತ್ತೀವಿ ಅಂತ ಕರೆತಂದಿರಿ. ಸುಪ್ರೀಂ ಕೋರ್ಟ್ ಆದೇಶದಂತೆ ಚುನಾಯಿತ ಪ್ರತಿನಿಧಿಗಳಾಗಿ ಬಂದ ನಂತರ ಸಚಿವ ಸ್ಥಾನದಲ್ಲಿ ಮುಂದುವರಿಯಬಹುದಾಗಿತ್ತು. ಆದರೆ ನೀವು ಅವರನ್ನು ಚುನಾಯಿತ ಪ್ರತಿನಿಧಿ ಮಾಡದೇ ನಾಮ ನಿರ್ದೇಶನ ಪ್ರತಿನಿಧಿ ಮಾಡಿದಿರಿ. ಅವರ ರಾಜಕೀಯ ಜೀವನವನ್ನೇ ಹಾಳು ಮಾಡಿದಿರಿ.



ಬಿಜೆಪಿ ಸೇರುವಂತೆ ನನಗೆ ಹಣದ ಆಮಿಷವನ್ನು ತೋರಿಸಿ ಯಡಿಯೂರಪ್ಪನವರ ಮಗ ಹಣ ಕೊಡಲು ಬಂದಿದ್ದರು ಎಂದು ವಿಶ್ವನಾಥ್ ಅವರೇ ಬಹಿರಂಗವಾಗಿ ಹೇಳಿಕೊಂಡಿದ್ದಾರೆ. ಈಗ ಅವರನ್ನು ಪಕ್ಷ ಬಿಟ್ಟು ಹೋಗುವಂತೆ ಹೇಳುತ್ತೀದ್ದೀರಿ. ವಿಶ್ವನಾಥ್ ಅವರು ರಾಜಕೀಯಕ್ಕೆ ಬಂದಾಗ ನೀವು ಎಲ್ಲಿದ್ದಿರಿ ಎಂಬುದು ನೆನಪಿದೆಯಾ? ಪಕ್ಷ ಬಿಟ್ಟು ಹೋಗಿ ಎಂದು ಹೇಳಲು ನೀವೇನು ಹೈಕಮಾಂಡಾ? ನಿಮ್ಮ ತತ್ವ ಸಿದ್ಧಾಂತಗಳನ್ನು ಪಕ್ಷಕ್ಕೆ ಸೇರಿಸಿಕೊಳ್ಳುವಾಗ ಹೇಳಬೇಕಿತ್ತು. ಅಂದು ಅಧಿಕಾರದಾಸೆಗೆ ಪಕ್ಷಕ್ಕೆ ಸೇರಿಸಿಕೊಂಡಿರಿ. ಇಂದು ಅಧಿಕಾರ ಇದೆ ಎಂದು ಅಮಲಿನಲ್ಲಿ ತೇಲುತ್ತಿದ್ದೀರಿ. ವಿನಾಶ ಕಾಲಕ್ಕೆ ವಿಪರೀತ ಬುದ್ಧಿ ಎಂಬಂತೆ ನಡೆದುಕೊಳ್ಳುತ್ತಿದ್ದೀರಿ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಲ್ಲದೇ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ವಿಶ್ವನಾಥ್ ಅವರದ್ದು 50 ವರ್ಷಗಳ ಸ್ನೇಹ. ಇಂದು ಮಾತನಾಡಿದರೂ ನಾಳೆ ಒಂದಾಗುತ್ತಾರೆ. ಆದರೆ ಹಿಂದೆ ನಿಂತು ನೀವು ತಿವಿಯೋದೇಕೆ? ಇದರಿಂದ ನಿಮಗೇನು ಲಾಭ? ನಿಮ್ಮ ನಡವಳಿಕೆ ಬದಲಿಸಿಕೊಳ್ಳುವುದು ಒಳ್ಳೆಯದು. ಮೊದಲು ಹಿರಿಯರಿಗೆ ಗೌರವ ಕೊಡೋದನ್ನು ಕಲಿತುಕೊಳ್ಳಿ ಎಂದು ತಿರುಗೇಟು ನೀಡಿದ್ದಾರೆ.

ವಸ್ತು ಪ್ರದರ್ಶನದಲ್ಲಿ ಪುಟಾಣಿಗಳ ಫ್ಯಾಷನ್ ಶೋ





ಮೈಸೂರು, ಡಿ.18(ಜಿಎ)– ಚಾಮುಂಡೇಶ್ವರಿ, ಕಿತ್ತೂರು ರಾಣಿ ಚೆನ್ನಮ್ಮ, ಶಾಕುಂತೆ, ಸೇರಿದಂತೆ ವಿವಿಧ ವೇಷಭೂಷ ತೊಟ್ಟು ರ್‍ಯಾಂಪ್ ಮೇಲೆ ಪುಟ್ಟ ಪುಟ್ಟ ಹೆಜ್ಜೆ ಹಾಕಿ ಪುಟಾಣಿಗಳು ಎಲರ್ಲ ಗಮನ ಸೆಳೆದರು.

ಮೈಸೂರು ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ಪ್ರಾಧಿಕಾರ ಹಾಗೂ ತಿಬ್ಬಾಸ್ ಗ್ರೂಪ್ ವತಿಯಿಂದ ಆಯೋಜಿಸಿದ್ದ 'ಫ್ಯೂಚರ್ ಆಫ್ ಮಾಡೆಲ್ ಆಫ್ ಇಂಡಿಯಾ' ಸೀಸನ್–2 ಫ್ಯಾಷನ್ ಶೋಗೆ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅರ್ಚಕರಾದ ಶಶಿಶೇಖರ್ ದೀಕ್ಷಿತ್ ಚಾಲನೆ ನೀಡಿದರು.

ಮೈಸೂರಿನ ಅದಿ ದೇವತೆ ತಾಯಿ ಚಾಮುಂಡೇಶ್ವರಿ, ಶಕುಂತಲೆ, ಸ್ವತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬ್ಬವ್ವ, ರೈತ, ಕೊಡಗಿನ ಕೊಡವರ ಸಂಪ್ರದಾಯಕ ಉಡುಗೆ ಸೇರಿದಂತೆ ಪುಟಾಣಿ ಮಕ್ಕಳು ಭಾರತ ದೇಶದ ವಿವಿಧ ರಾಜ್ಯಗಳ ಸಂಸ್ಕೃತಿ ಬಿಂಬಿಸುವ ಉಡುಪು ಧರಿಸಿ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದರು.

ಇದೇ ವೇಳೆ ವಸ್ತು ಪ್ರದರ್ಶನದ ಆವರಣದಲ್ಲಿರುವ ಎಲ್ಲಾ ಸ್ಥಳಗಳು, ಮಾಹಿತಿ ಹಾಗೂ ಆನ್‌ಲೈನ್ ಟಿಕೇಟ್ ಪಡೆಯಲು ಸಾರ್ವಜನಿಕರಿಗೆ ಉಪಯುಕ್ತವಾಗಲು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆ್ಯಪ್ ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ಕೆ.ರುದ್ರೇಶ್, ಟಿ.ನರಸೀಪುರ ಪುರಸಭೆ ಸದಸ್ಯ ಅರ್ಜುನ್ ರಮೇಶ್, ತಿಬ್ಬಾಸ್ ಗ್ರೂಪ್‌ನ ನಾಗೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಸಾಪದಿಂದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ



ಮೈಸೂರು, ಡಿ.18(ಜಿಎ)– ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ–2022 ಪ್ರದಾನ ಹಾಗೂ ಕಸಾಪ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರವನ್ನು ಭಾನುವಾರ ವಿತರಣೆ ಮಾಡಲಾಯಿತು.

ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 26 ಸಾಧಕರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರವನ್ನು ಉದ್ಯಮಿ ಡಾ.ಎಸ್.ವೆಂಕಟೇಶ್ ಹಾಗೂ ವಿಜ್ಞಾನ ಲೇಖಕರಾದ ಎಸ್.ರಾಮಪ್ರಸಾದ್ ಪ್ರದಾನ ಮಾಡಿದರು.

ಈ ವೇಳೆ ವಿದ್ವಾಂಸ ಡಾ.ಕೆ.ಅನಂತ ರಾಮು ಮಾತನಾಡಿ, ರಾಜ್ಯದಲ್ಲಿ ಇಂಗ್ಲೀಷ್ ಶಿಕ್ಷಣದ ವ್ಯಾಮೋಹದಿಂದ ಕನ್ನಡ ಭಾಷೆ ದೂರವಾಗುತ್ತಿದೆ. ಕನ್ನಡಿಗರಾಗಿ ನಮ್ಮ ಭಾಷೆಯನ್ನು ದೂರ ತಳ್ಳುವುದು ಎಷ್ಟು ಸರಿ? ನಮ್ಮ ಭಾಷೆ ಮರೆತರೆ, ನಮ್ಮ ಸಂಸ್ಕೃತಿಯನ್ನೇ ಮರೆತಂತೆ. ಆದ್ದರಿಂದ ಭಾಷೆ ಪ್ರೇಮವನ್ನು ಬೆಳಸಿಕೊಳ್ಳಬೇಕು, ಕನ್ನಡ ಭಾಷೆ ಇತಿಹಾಸ ಕೇಳದರೆ ಮೈ ರೋಮಾಂಚನವಾಗಲಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ದೇಶಪ್ರೇಮ ಕಡಿಮೆಯಾಗುತ್ತಿದ್ದು, ಇದೊಂದು ರೀತಿಯಲ್ಲಿ ದೊಡ್ಡರೋಗದಂತಾಗುತ್ತದೆ. ನಮ್ಮ ದೇಶ–ರಾಜ್ಯವನ್ನು ಪ್ರೀತಿಸುವ ಮನೋಭಾವನೆಯನ್ನು ಹೆಚ್ಚಾಗಿ ಬೆಳೆಸಿಕೊಳ್ಳುತ್ತೇವೆಂದು ಪ್ರತಿಯೊಬ್ಬರು ಸಂಕಲ್ಪ ಮಾಡಬೇಕು ಎಂದು ಸಲಹೆ ನೀಡಿದರು.


ಕಾರ್ಯಕ್ರಮದಲ್ಲಿ ಮೇಲುಕೋಟೆಯ ಶ್ರೀವಂಗೀಪುರ ನಂಬಿಮಠದ ಪೀಠಾಧಿಪತಿ ಇಳೈ ಆಳ್ವಾರ್ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಮಾಜ ಸೇವಕರಾದ ಕೆ.ರಘುರಾಂ ವಾಜಪೇಯಿ, ಡಾ.ಎ.ಪುಷ್ಪಾ ಅಯ್ಯಂಗಾರ್, ಎನ್.ಅನಂತು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ದೇಶ ವಿಭಜನೆ ಇತಿಹಾಸವನ್ನು ಪ್ರತಿಯೊಬ್ಬರೂ ನೆನಪಿಸಿಕೊಳ್ಳಬೇಕು

ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್

ಮೈಸೂರು, ಡಿ.18– ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮದಲ್ಲಿ ದೇಶ ವಿಭಜನೆಯ ಇತಿಹಾಸವನ್ನು ಪ್ರತಿಯೊಬ್ಬರೂ ನೆನಪಿಸಿಕೊಳ್ಳಬೇಕು ಎಂದು ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಹೇಳಿದರು.

ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘ ಮೈಸೂರು ಮಹಾನಗರ ವಸತಿಗಳ ಏಕತ್ರೀಕರಣ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಸಂಭ್ರಮಿಸಲೇಬೇಕು. ಆದರೆ ಪಕ್ಷವೊಂದರ ರಾಜಕೀಯ ತುಷ್ಟೀಕರಣ ನೀತಿಯಿಂದ ದೇಶ ವಿಭಜನೆಯಾದ ಇತಿಹಾಸವನ್ನು ಮರೆಯುವುದು ಸರಿಯೇ? ಎಂದು ಪ್ರಶ್ನಿಸಿದರು.



ಈಗಲೂ ಓಲೈಸುವ ನೀತಿಯನ್ನು ಆ ಪಕ್ಷದವರು ವ್ಯಾಪಕವಾಗಿ ಅನುಸರಿಸುತ್ತಿದ್ದಾರೆ. ಇತ್ತೀಚೆಗೆ ಮಂಗಳೂರಿನಲ್ಲಿ ಬಾಂಬ್ ಸ್ಫೋಟದ ಆರೋಪಿಯನ್ನು ಭಯೋತ್ಪಾದಕನಾ? ಎಂದು ಪ್ರಶ್ನಿಸಿದ್ದಾರೆ. ಆ ಪಕ್ಷದ ಮನೋಭಾವ ಇನ್ನೂ ಬದಲಾಗಿಲ್ಲ. ಮತಾಂತರ ವ್ಯಾಪಕವಾಗಿದ್ದು, ಇದರಿಂದಾಗುವ ಸಮಸ್ಯೆಯೇನೆಂದು ಕೆಲವರು ವಾದಿಸುತ್ತಾರೆ. ಮತಾಂತರದಿಂದ ಧರ್ಮ ಮಾತ್ರವಲ್ಲ ಚಿಂತನೆಗಳೂ ಬದಲಾಗುತ್ತವೆ. ಇದಕ್ಕೆ ಪಾಕಿಸ್ತಾನವೇ ಉದಾಹರಣೆಯಾಗಿದೆ ಎಂದರು.

ಹಿಂದೂ ಸಮಾಜ ಸರ್ವರನ್ನೂ ಗೌರವಿಸುತ್ತದೆ. ಜಗತ್ತು ಉಳಿಯಬೇಕಾದರೆ ಭಾರತ ಉಳಿಯಬೇಕು. ಭಾರತ ಉಳಿಯಬೇಕಾದರೆ ಹಿಂದೂ ಉಳಿಯಬೇಕು. ಈ ನಿಟ್ಟಿನಲ್ಲಿ ಆರ್‌ಎಸ್‌ಎಸ್ ಕೆಲಸ ಮಾಡುತ್ತಿದೆ. ಈ ಸತ್ಯವನ್ನು ಎಲ್ಲರಿಗೂ ತಲುಪಿಸುವ ಕಾರ್ಯ ವ್ಯಾಪಕವಾಗಬೇಕಿದೆ. ಹಿಂದೂವಾಗಿ ಹುಟ್ಟಿದ ಪ್ರತಿಯೊಬ್ಬರೂ ದೇಶದೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವುದರಿಂದ ಹಿಂದೂ ರಾಷ್ಟ್ರ ಎನ್ನಲಾಗುತ್ತದೆ. ಹಿಂದೂ ಎಂದು ಗರ್ವದಿಂದ ಹೇಳುವ ಕೋಟ್ಯಾಂತರ ಜನರನ್ನು ಆರ್‌ಎಸ್‌ಎಸ್ ತಯಾರಿಸಿದೆ ಯಾದರೂ ಮತ್ತೊಂದೆಡೆ ದೇಶ ವಿರೋಧಿ ಶಕ್ತಿ ಹೆಚ್ಚುತ್ತಿರುವುದು ಆತಂಕಕಾರಿ ಸಂಗತಿ ಎಂದು ಹೇಳಿದರು.

ಭಾರತದಲ್ಲಿ ಮತ್ತೊಂದು ಪಾಕಿಸ್ತಾನ ಸೃಷ್ಟಿಸುವ ಪ್ರಯತ್ನ ನಡೆದಿದೆ. ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲೂ ನಾಡು ಕಟ್ಟಿದ ನರಸಿಂಹರಾಜರನ್ನು ಮರೆಯಾಗಿಸಿ, ಟಿಪ್ಪುವನ್ನು ರಾಜನನ್ನಾಗಿ ಮಾಡಲು ಮುಂದಾಗಿದ್ದಾರೆ. ಈ ರೀತಿಯಲ್ಲಿ ಚಿಂತನೆ ಬದಲಿಸುವ ಕೆಲಸ ದೇಶದ ಹಲವೆಡೆ ನಡೆಯುತ್ತಿದೆ ಎಂದರು.

ಆರ್‌ಎಸ್‌ಎಸ್ ಮೈಸೂರು ವಿಭಾಗ ಸಂಚಾಲಕ ಡಾ.ವಾಮನ್‌ರಾವ್ ಬಾಪಟ್, ಮಹಾನಗರ ಸಂಚಾಲಕ ವಾಸುದೇವ ಭಟ್, ನಗರದ ವಸತಿ, ಶಾಖೆ, ಮಿಲನ್ ಸೇರಿದಂತೆ ವಿವಿಧ ವಿಭಾಗದ ಸಾವಿರಾರು ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

2ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಮಾದೇವಮ್ಮ
ನಿಧನ: 19.12.2020

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿರುತ್ತದೆ
ದುಃಖತಪ್ತರು:
ಪತಿ ಬಸವಯ್ಯ
(ನಿವೃತ್ತ ನೌಕರರು ಎಂ.ಡಿ.ಸಿ.ಸಿ ಬ್ಯಾಂಕ್) ಮೈಸೂರು
ಮಕ್ಕಳು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು
8183867769

ನಾಳೆ ಸೇವಾಕಾರ್ಯದೊಂದಿಗೆ ಕೆ.ಮರೀಗೌಡರ ಹುಟ್ಟುಹಬ್ಬ

ಮೈಸೂರು, ಡಿ.18– ಜಿಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡರ ಹುಟ್ಟುಹಬ್ಬವನ್ನು ಡಿ.20ರಂದು ವಿವಿಧ ಸೇವಾ ಕಾರ್ಯಕ್ರಮಗಳನ್ನು ಮಾಡುವ ಮುಖಾಂತರ ಆಚರಿಸಲಾಗುತ್ತದೆ ಎಂದು ಮರೀಗೌಡ ಅಭಿಮಾನಿ ಸಂಘದ ಅಧ್ಯಕ್ಷ ಶಿವಣ್ಣ ತಿಳಿಸಿದರು.



ಮಂಗಳವಾರ ಬೆಳಗ್ಗೆ 7.30ಕ್ಕೆ ಚಾಮುಂಡಿಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಪೌರಕಾರ್ಮಿಕರಿಗೆ ಸೀರೆ ವಿತರಣೆ, 8.30ಕ್ಕೆ ಜಯನಗರದ ಛಾಯಾದೇವಿ ಆಶ್ರಮದಲ್ಲಿ ಶೇಖರ್‌ರವರಿಂದ ಮಕ್ಕಳಿಗೆ ತಿಂಡಿ ವಿತರಣೆ. 9.30 ಕೆರೆಹುಂಡಿ ಮಹೇಶ್ ನೇತೃತ್ವದಲ್ಲಿ ಕೆ.ಆರ್. ಆಸ್ಪತ್ರೆ ರೋಗಿಗಳಿಗೆ ಹಣ್ಣು, ಹಂಪಲು ವಿತರಣೆ 10–30ಕ್ಕೆ ಗುರೂರು ಸರ್ಕಾರಿ ಶಾಲೆಯಲ್ಲಿ ರಾಚಪ್ಪ, ಚಿನ್ನಸ್ವಾಮಿಯಿಂದ ನೋಟ್‌ಪುಸ್ತಕ ವಿತರಣೆ ಹಾಗೂ ಕ್ಯಾಲೆಂಡರ್ ಬಿಡುಗಡೆ 11 ಗಂಟೆಗೆ ರಮಾಬಾಯಿ ನಗರದಲ್ಲಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಣೆ, 11.30ಕ್ಕೆ ಗಂಟೆಗೆ ಭಾರತ್ ನಗರದ ತನ್ವೀರ್‌ಸೇಠ್ ನಗರದಲ್ಲಿ ಬಿ.ಎಂ. ನಟರಾಜ್ ಹಾಗೂ ಅಜ್ಮಲ್ ರಿಯಾಜ್‌ರವರಿಂದ ಬಡಜನರಿಗೆ ಸೀರೆ ವಿತರಣೆ, 12 ಗಂಟೆಗೆ ಇಲವಾಲ ಗ್ರಾ.ಪಂ. ಸಮುದಾಯ ಭವನದಲ್ಲಿ ಪೌರಕಾರ್ಮಿಕರಿಗೆ ಫುಡ್‌ಕಟ್ ವಿತರಣೆ, 1.30ಕ್ಕೆ ಬನ್ನಿ ಮಂಟಪ ಅಂದರ ಶಾಲೆಯಲ್ಲಿ ಮಹದೇವ್‌ಸ್ವಾಮಿಯವರಿಂದ ಊಟದ ವ್ಯವಸ್ಥೆ, 2.30ಕ್ಕೆ ರಾಜ್ಯ ಹಿಂದುಳಿದ ವರ್ಗದ ಜಾಗತಿ ವೇದಿಕೆಯಿಂದ ಕೆ.ಎಸ್. ಶಿವರಾಂ ನೇತೃತ್ವದಲ್ಲಿ ಸಹಪಂಕ್ತಿ ಭೋಜನ 4 ಗಂಟೆಗೆ ಸಿದ್ದಲಿಂಗಪುರ, ನಾಗನಹಳ್ಳಿ ಮುಖಂಡರಿಂದ ಅಭಿನಂದನೆ, 5 ಗಂಟೆಗೆ ಬೆಲವತ್ತ ಗ್ರಾಮದಲ್ಲಿ ರಘು ಗುರುರವರಿಂದ ಸಿಹಿ ಹಂಚಿಕೆ, 6 ಗಂಟೆಗೆ ದಾರೀಪುರ, ಬರಡನಪುರ, ಜಯಪುರಗಳಲ್ಲಿ ಅಭಿನಂದನಾ ಕಾರ್ಯಕ್ರಮ, 7.30ಕ್ಕೆ ಸೋಮನಾಥನಗರದ ಶ್ರೀ ಹರಿ ಛತ್ರದಲ್ಲಿ ಬಸವೇಗೌಡ ಸ್ನೇಹಿತರಿಂದ ಅಭಿನಂದನೆ ಕಾರ್ಯಕ್ರಮಗಳು ನಡೆಯುತ್ತವೆ.



2023ನೇ ಸಾಲಿನ ನೂತನ ಕ್ಯಾಲೇಂಡರ್‌ಅನ್ನು ಮಾಜಿ ಮುಖ್ಯಮಂತ್ರಿಗಳಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಹಾಗೂ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಬಿಡುಗಡೆಗೊಳಿಸಲಾಯಿತು. ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಪ್ರೇಮ ಶಂಕರೇಗೌಡ, ನಗರ ಪಾಲಿಕೆ ಸದಸ್ಯ ಕೆ.ವಿ ಶ್ರೀಧರ್ ಮುಂತಾದವರು ಉಪಸ್ಥಿತರಿದ್ದರು.

ಪತ್ನಿ ಕೊಂದು ದೇಹವನ್ನು 12 ಭಾಗಗಳಾಗಿ ಕತ್ತರಿಸಿದ ಪತಿ

ರಾಂಚಿ, ಡಿ.18– ಇಡೀ ದೇಶವನ್ನೇ ಬೆಚ್ಚಿ ಬೀಳಿಸಿದ್ದ ಶ್ರದ್ಧಾ ವಾಲಕರ್ ಹತ್ಯೆ ಪ್ರಕರಣವನ್ನೇ ಹೋಲುವ ಮತ್ತೊಂದು ಪ್ರಕರಣ ಜಾರ್ಖಂಡ್‌ನಲ್ಲಿ ನಡೆದಿದ್ದು, ವ್ಯಕ್ತಿಯೋರ್ವ ತನ್ನ ಪತ್ನಿಯನ್ನು ಕೊಂದು 12 ತುಂಡುಗಳಾಗಿ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಜಾರ್ಖಂಡ್‌ನ ಸಾಹಿಬ್‌ಗಂಜ್ ಪ್ರದೇಶದಲ್ಲಿ ವ್ಯಕ್ತಿಯೊಬ್ಬ ತನ್ನ ಪತ್ನಿಯನ್ನು ಹತ್ಯೆ ಮಾಡಿ ದೇಹವನ್ನು 12 ಭಾಗಗಳಾಗಿ ಕತ್ತರಿಸಿದ್ದಾನೆ. 22 ವರ್ಷದ ಬುಡಕಟ್ಟು ಮಹಿಳೆಯನ್ನು ಹತ್ಯೆ ಮಾಡಿದ ಆರೋಪದ ಹಿನ್ನೆಲೆಯಲ್ಲಿ ಪತಿ ದಿಲ್ದಾರ್ ಅನ್ಸಾರಿ ಎಂಬಾತನ್ನು ಪೊಲೀಸರು ಬಂಧಿಸಿದ್ದಾರೆ ಶ್ರದ್ಧಾವಾಕರ್ ಪ್ರಕರಣದಂತೆಯೇ ಆರೋಪಿ ಕೃತ್ಯವೆಸಗಿದ ಬಳಿಕ ದೇಹದ ಭಾಗಗಳನ್ನು ಹಲವೆಡೆ ಎಸೆದಿರುವುದು ಕಂಡು ಬಂದಿದೆ. ದೇಹದ ಕೆಲವು ಭಾಗಗಳು ಇನ್ನೂ ಪತ್ತೆಯಾಗಿಲ್ಲ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.



ಮೈಸೂರಿನ ಶ್ರೀ ಹರ್ಷ ರಸ್ತೆಯಲ್ಲಿರುವ ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ವೇಳೆ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವ, ಉಪಾಧ್ಯಕ್ಷೆ ಶ್ರೀಮತಿ ಹೇಮ, ನಿರ್ದೇಶಕರಾದ ಎನ್.ಧ್ರುವರಾಜ್, ಎಂ.ಎನ್.ಸ್ವರೂಪ್, ವಿ.ಮಧು, ಎಂ.ಪುಟ್ಟಸ್ವಾಮಿ, ದಿನೇಶ್ ಎಂ.ವೆಂಟಕಲಿಂಗಯ್ಯ, ಪ್ರಸನ್ನ, ಎನ್.ಲಕ್ಷ್ಮಣ್, ಜಯಕುಮಾರ್, ಎಸ್.ಸ್ವಾಮಿ, ಎಂ.ಕೆ.ಅಶೋಕ, ಕೆ.ಪ್ರಕಾಶ್, ಶ್ರೀಮತಿ ಪುಷ್ಪಲತಾ, ಬ್ಯಾಂಕ್‌ನ ಪ್ರಭಾರ ಮ್ಯಾನೇಜರ್ ಎಚ್. ರಾಜಶೇಖರ್ ಇದ್ದರು.



ಕೆಪಿಸಿಸಿ ಸದಸ್ಯರೂ ಆದ ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡರ ಹುಟ್ಟು ಹಬ್ಬದ ಅಂಗವಾಗಿ ವಿಪಕ್ಷ ನಾಯಕ ಸಿದ್ದರಾಮಯ್ಯ ಶುಭ ಕೋರಿದರು. ಕೃಷ್ಣಮೂರ್ತಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸತೀಶ್ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ವಿರಾಜಪೇಟೆ

O.S.No 50/2019

ವಾದಿಗಳು: ಕೌಸಲ್ಯ ವಿರುದ್ಧ ಪ್ರತಿವಾದಿಗಳು: ಶಾರದಮ್ಮ ಮತ್ತು ಇತರರು

ಪ್ರತಿವಾದಿ ನಂ.17 : ಮಧು ಬಿನ್ ಲೇಟ್ ಸುರೇಶ್ ವಯಸ್ಸು ಸುಮಾರು 26 ವರ್ಷ ವಾಸ: ಆನಂದನಗರ ಗ್ರಾಮ, ಬೆಟ್ಟದಪುರ ಹೋಬಳಿ ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಪ್ರತಿವಾದಿ ನಂ .17 ಆದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ದಾವೆಯ ವಾದಿಗಳಾದ ಕೌಸಲ್ಯ ಕೋಂ ರಾಮೇಗೌಡ, ವಾಸ: ರಾಜುಗ್ರಾಮ, ಕಸಬಾ ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು, ಇವರು ವಿರಾಜಪೇಟೆ ಹಿರಿಯ ಶ್ರೇಣಿ ಜಡ್ಜ್ ನ್ಯಾಯಾಲಯದಲ್ಲಿ ಭಾಗಾಂಶಕ್ಕಾಗಿ ಶಾರದಮ್ಮ ಮತ್ತು ಇತರರ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದು, ಮೇಲ್ಕಂಡ ಪ್ರತಿವಾದಿ ನಂ.17 ರವರಾದ ಮಧು ಬಿನ್ ಸುರೇಶ್ ಆದ ನಿಮಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟಿಸು ಜಾರಿ ಮಾಡಲು ನ್ಯಾಯಾಲಯದಲ್ಲಿ ಆದೇಶವಾಗಿರುತ್ತದೆ. ಸದರಿ ದಾವೆಯು ದಿನಾಂಕ: 10.01.2023 ರಂದು ನಿಮ್ಮ ಹಾಜರಾತಿಗಾಗಿ ಬೆಳಿಗ್ಗೆ 11.00 ಗಂಟೆಗೆ ವಿಚಾರಣೆ ನಿಗಧಿಯಾಗಿದ್ದು, ಆ ದಿನದಂದು ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಲು ತಿಳಿಯಪಡಿಸಲಾಗಿದೆ. ತಪ್ಪಿದಲ್ಲಿ ಪ್ರಕರಣಗಳನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
Sd/- Chief Ministerial Officer,
Senior civil Judge and JMFC Court,Virajpet
ಸಹಿ/– ವಾದಿಗಳ ಪರ ವಕೀಲರು
ಎಸ್.ಶಿವಣ್ಣ ಗೌಡ
ಸ್ಥಳ: ವಿರಾಜಪೇಟೆ, ದಿನಾಂಕ: 17.12.2022

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ ಹುಣಸೂರು

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಐ.ಎಫ್.ಟಿ ಸಂಖ್ಯೆ 14/2022–23 ದಿ: 16.12.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಹುಣಸೂರು ವಿಭಾಗ ವ್ಯಾಪ್ತಿಯಲ್ಲಿ ಅನುಮೋದನೆಯಾಗಿರುವ ಒಟ್ಟು 06 ರಸ್ತೆ ನಿರ್ವಹಣೆ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿನ "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೊಂದಾಯಿತ ಸಮುಚಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕಾಮಗಾರಿಗಳ ಪೈಕಿ ಟೆಂಡರಿಗಿಟ್ಟ ಮೊತ್ತ ರೂ.4.10 ಲಕ್ಷ ಗರಿಷ್ಟ ಹಾಗೂ ರೂ.2.46 ಲಕ್ಷ ಕನಿಷ್ಟ. ಇ.ಎಂ.ಡಿ. ರೂ.10250/–ಗಳು ಗರಿಷ್ಟ ಹಾಗೂ ರೂ 3075/–ಕನಿಷ್ಟ. ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 23.12.2022 16.00 ಗಂಟೆಯವರೆಗೆ. ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಾವದಿ 45 ದಿವಸಗಳು. (ಮಳೆಗಾಲ ಸೇರಿದಂತೆ). ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ https://eproc.karnataka.gov.in ರಲ್ಲಿ ದಿ: 17.12.2022 ರಂದು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ, ಇಲಾಖೆ, ವಿಶೇಷ ವಿಭಾಗ, ಹುಣಸೂರು
DIPR/DDMYS/MCA/783/2022-23

ಕರ್ನಾಟಕ ಸರ್ಕಾರ (ಸಹಕಾರರ ಇಲಾಖೆ)
ಸಹಕಾರ ಸಂಘಗಳ ಉಪ ನಿಬಂಧಕರು (ನಿ.441),
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ,
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.
ಸೌಹಾರ್ದ ಸಹಕಾರ ಸೌಧ ನಂ.68, 1ನೇ ಮಹಡಿ, 17&18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055

ವಾದಿ : ಮುಖ್ಯ ಕಾರ್ಯನಿರ್ವಾಹಕರು,
ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ
ನಂ.6/3, 6/4, 10ನೇ ಕ್ರಾಸ್, 2ನೇ ಮೇನ್, ಜಯನಗರ, ಮೈಸೂರು–570014

ವ್ಯಾಜ್ಯ ಸಂಖ್ಯೆ : ಡಿಆರ್‌ಡಿ / ಕ.ರಾ.ಸೌ.ಸಂ.ಸ.ನಿ. / 465 / 2022–23
1. **ಎಂ.ಎಸ್. ಗೋಪಾಲಕೃಷ್ಣ ಲೇಟ್ ಎಂ.ಎನ್. ಸತ್ಯನಾರಾಯಣರಾವ್**
ಫ್ಲಾಟ್ ನಂ. 204, ಸಾಯಿ ಹೆರಿಟೇಜ್ ಎನ್‌ಕ್ಲೇವ್, ನಂ.5, 3ನೇ ಬ್ಲಾಕ್, 7ನೇ ಮುಖ್ಯರಸ್ತೆ, ಜಯಲಕ್ಷ್ಮಿಪುರಂ, ಮೈಸೂರು.
2. **ಸುಧಾ ಜಿ. ಕೃಷ್ಣ, ಜಿನ್ ಎಂ.ಎಸ್. ಗೋಪಾಲಕೃಷ್ಣ**
ಫ್ಲಾಟ್ ನಂ. 204, ಸಾಯಿ ಹೆರಿಟೇಜ್ ಎನ್‌ಕ್ಲೇವ್, ನಂ.5, 3ನೇ ಬ್ಲಾಕ್, 7ನೇ ಮುಖ್ಯರಸ್ತೆ, ಜಯಲಕ್ಷ್ಮಿಪುರಂ, ಮೈಸೂರು.

ವ್ಯಾಜ್ಯ ಸಂಖ್ಯೆ : ಡಿಆರ್‌ಡಿ / ಕ.ರಾ.ಸೌ.ಸಂ.ಸ.ನಿ. / 467 / 2022–23
1. **ಪ್ರಜ್ವಲ್ ಶೆಟ್ಟಿ ವಿ.ಎಸ್. ಬಿನ್ ಲೇಟ್ ವೆಂಕಟಪ್ಪ ಆರ್.**
ನಂ. 2018, ಸ್ವಸ್ತಿ, 2ನೇ ಕ್ರಾಸ್, ಶ್ರೀರಾಂಪುರ ಪೋಸ್ಟ್, ಮೈಸೂರು–57008

ವ್ಯಾಜ್ಯ ಸಂಖ್ಯೆ : ಡಿಆರ್‌ಡಿ / ಕ.ರಾ.ಸೌ.ಸಂ.ಸ.ನಿ. / 917 / 2022–23
1. **ಎಂ.ಪಿ.ಜಗದೀಶ್ ಬಿನ್ ಎನ್. ಪುಟ್ಟಯ್ಯ**
ನಂ. 38, 3ನೇ ಕ್ರಾಸ್, ಶ್ರೀರಾಂಪುರ ಪೋಸ್ಟ್, ಮೈಸೂರು–57008
2. **ಉಮರ್ ಅಹಮದ್ ಖಾನ್ ಬಿನ್ ಲೇಟ್ ಕಮ್ರುಜ್ಜಮ್ ಖಾನ್,**
ನಂ. 55/1, 3ನೇ ಕ್ರಾಸ್, ಕೆಇಬಿ ಕಾಲೋನಿ ಹಿಂಭಾಗ ಉದಯಗಿರಿ, ಮೈಸೂರು–570019

ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವೆ ಸಂಖ್ಯೆ ಡಿಆರ್‌ಡಿ / ಕ.ರಾ.ಸೌ.ಸಂ.ಸ.ನಿ. / 465, 467, 917, 916 / 2022–23 ರಂತೆ ಸಹಕಾರ ಸಂಘಗಳ ಉಪ ನಿಬಂಧಕರು (ನಿ.441) ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಪರಿಹಾರ ಕರಾರು ಅಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು ನೀವು ಪ್ರತಿವಾದಿಯಾಗಿರುತ್ತೀರಿ, ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿನಾಂಕ 21.12.2022ರಂದು ಬೆಳಗ್ಗೆ 11.30 ಗಂಟೆಗೆ ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು. ಸದರಿ ಪ್ರಕಟಣೆಯನ್ನು ದಿನಾಂಕ 16.12.2022 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗುವುದು.

ಸಹಿ/– ಸಹಕಾರ ಸಂಘಗಳ ಉಪ ನಿಬಂಧಕರು (ನಿ.441),
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ,
ಕ.ರಾ.ಸೌ.ಸಂ.ಸ.ನಿ. ಬೆಂಗಳೂರು (ನ್ಯಾಯಾಲಯದ ಆದೇಶದ ಮೇರೆಗೆ)